

# ನಿಮ್ಮ ಜೀವಿತಕ್ಕಿರುವ ದೇವರ ಉದ್ದೇಶವನ್ನು *ನೆರವೇರಿಸುವುದು*

ಆಶೀಷ್ ರಾಯ್‌ಚೂರ್

ಮುದ್ರಣ ಮತ್ತು ವಿತರಣೆ: **ಆಲ್ ಪೀಪ್‌ಲ್ಸ್ ಚರ್ಚ್ ಮತ್ತು ವರ್ಲ್ಡ್ ಔಟ್‌ರೀಚ್, ಬೆಂಗಳೂರು**
ಪ್ರಥಮ ಪ್ರತಿ ಮುದ್ರಣ: ಜೂನ್ 2012

ಕನ್ನಡಕ್ಕೆ ಭಾಷಾಂತರಿಸಿದವರು: ರವಿಕುಮಾರ್ ಎಂ.
ಮುಖಪುಟ ಮತ್ತು ವರ್ಣವಿನ್ಯಾಸ: ಕರುಣಾ ಜೆರೋಮ್, ಬ್ರೈಫೈಯ್ಡ್ ಡಿಸೈನ್ಸ್

Contact Information:
All Peoples Church & World Outreach
2nd Floor, No. 7M, 2nd Block,
HRBR Layout, Kalyan Nagar, Bangalore 560 043
Karnataka, INDIA

Phone: +91-80-65970617
Email: contact@apcwo.org
Website: www.apcwo.org

Unless otherwise indicated, all Scripture quotations are taken from the Holy Bible, New King James Version.

**ಉಚಿತ ವಿತರಣೆಗಾಗಿ**

ಈ ಪುಸ್ತಕದ ಉಚಿತ ವಿತರಣೆಯು ಆಲ್ ಪೀಪಲ್ಸ್ ಸಭೆಯ ಸಭಿಕರು, ಸ್ನೇಹಿತರು, ಪಾಲುಗಾರರ ಹಣಕಾಸಿನ ನೆರವಿನ ಮೂಲಕ ಸಾಧ್ಯವಾಗಿದೆ. ಇಂತಹ ಉಚಿತ ಪುಸ್ತಕ ಪ್ರಕಾಶನದ ಮೂಲಕ ನೀವು ಸಮೃದ್ಧಿ ಹೊಂದಿದ್ದರೆ ಆಲ್ ಪೀಪಲ್ಸ್ ಸಭೆಯ ಪ್ರಕಾಶನಗಳ ಉಚಿತ ವಿತರಣೆ ಮತ್ತು ಮುದ್ರಣಗಳಿಗೆ ಹಣಕಾಸಿನ ಸಹಾಯ ನೀಡುವಂತೆ ನಿಮ್ಮನ್ನು ಆಹ್ವಾನಿಸುತ್ತೇವೆ. ವಂದನೆಗಳು!

(Kannada Book - Fulfilling God's Purpose for Your Life)

# ನಿಮ್ಮ ಜೀವಿತಕ್ಕಿರುವ ದೇವರ ಉದ್ದೇಶವನ್ನು ನೆರವೇರಿಸುವುದು

# ವಿಷಯಸೂಚಿ


1. ಪೀಠಿಕೆ 1

**1 ನಿಮ್ಮ ಜೀವಿತಕ್ಕಾಗಿ ದೇವರು ಉದ್ದೇಶ ಹೊಂದಿದ್ದಾನೆ ಎಂಬುದನ್ನು ಅರ್ಥಮಾಡಿಕೊಳ್ಳುವುದು 03**

1.1 ದೇವರು - ಯೋಜನೆ, ಉದ್ದೇಶ, ರಚನೆ, ಧ್ಯೇಯಗಳ ದೇವರಾಗಿದ್ದಾನೆ. 03

1.2 ದೇವರು, ಆತನ ಉದ್ದೇಶ ಹೊಂದಿದ್ದಾನೆ - ಈ ದಿನ ಭೂಮಿಯ ಮೇಲೆ ''ಸಾಮಾನ್ಯ ಉದ್ದೇಶ'' ಮತ್ತು ''ಮೇರು ಯೋಜನೆಯನ್ನು'' ಆತನು ನಡೆಯಿಸುತ್ತಿದ್ದಾನೆ 03

1.3 ನಿಮಗಾಗಿ ದೇವರು ಒಂದು ಉದ್ದೇಶ ಹೊಂದಿದ್ದಾನೆ - ''ಒಂದು ನಿರ್ದಿಷ್ಟ ಯೋಜನೆ'' 04

1.4 ನಮಗಾಗಿರುವ ದೇವರ ಯೋಜನೆಯು ಯಾವಾಗಲು ಒಳ್ಳೆಯದು 06

1.5 ಆತನ ಯೋಜನೆ ನೆರವೇರಿಸಲು ನಾವು ದೇವರೊಡನೆ ಸಹಕರಿಸಬೇಕು 07

1.6 ನಮ್ಮ ಜೀವಿತಗಳಿಗಿರುವ ದೇವರ ಯೋಜನೆಯನ್ನು ನಾವು ಗುರುತಿಸಬೇಕು ಮತ್ತು ಅನುಸರಿಸಬೇಕು 07

1.7 ಆತನ ಯೋಜನೆ ಮತ್ತು ಉದ್ದೇಶವನ್ನು ನೆರವೇರಿಸಲು ದೇವರು ನಿಮ್ಮನ್ನು ಸಿದ್ಧಮಾಡುತ್ತಾನೆ 08

| | | | |
|---|---|---|---|
| | 1.8 | ನಾವು ತಪ್ಪುಗಳನ್ನು ಮಾಡಬಹುದು - ಆದರೆ ನಮ್ಮ ಸೋಲುಗಳಿಂದ ಹೊರಬರಲು ಮತ್ತು ಆತನ ಕರೆಯನ್ನು ಪರಿಪೂರ್ಣಗೊಳಿಸಲು ದೇವರು ಸಹಾಯ ಮಾಡುತ್ತಾನೆ | 09 |
| | 1.9 | ನಾವು ದೇವರ ಉದ್ದೇಶವನ್ನು ನೆರವೇರಿಸದಂತೆ ಅದನ್ನು ನಿಲ್ಲಿಸುವ ಕಾರ್ಯವನ್ನು ಸೈತಾನನು ಮಾಡುತ್ತಾನೆ | 10 |
| | 1.10 | ನಾವು ದೇವರ ಕರೆಯಲ್ಲಿ ಕೇಂದ್ರೀಕೃತವಾಗಿರಬೇಕು | 10 |
| | 1.11 | ನಾವು ಸಹನೆ ಹೊಂದಿರಬೇಕು | 10 |
| **2** | **ನಿಮ್ಮ ಜೀವಿತಕ್ಕಿರುವ ದೇವರ ಉದ್ದೇಶವನ್ನು ಗುರುತಿಸುವುದು** | | **11** |
| | 2.1 | ದೇವರ ವಾಕ್ಯದ ಉಪದೇಶಗಳು ಮತ್ತು ಬೋಧನೆಗಳನ್ನು ಗುರುತಿಸುವುದು | 14 |
| | 2.2 | ನಿಮ್ಮ ಜೀವಿತದಲ್ಲಿರುವ ''ಬೀಜಗಳನ್ನು'' ಗುರುತಿಸಿರಿ | 17 |
| | 2.3 | ಆಂತರ್ಯದ ಪ್ರೇರಣೆಯನ್ನು ಗುರುತಿಸುವುದು | 19 |
| | 2.4 | ನಿಮಗೆ ಕೊಟ್ಟಂತಹ ದೇವರ ಕೃಪೆಯನ್ನು ಗುರುತಿಸಿರಿ | 21 |
| | | 2.4.1 ಹೊಸ ಒಡಂಬಡಿಕೆಯಲ್ಲಿ ''ಕೃಪೆ'' ಎಂಬ ಪದವು ಇವನ್ನು ವ್ಯಕ್ತಪಡಿಸುತ್ತವೆ | 21 |
| | | 2.4.1.1 ದೈವಿಕ ದಯೆ | 21 |
| | | 2.4.1.2 ದೈವಿಕ ಗುಣಸ್ವಭಾವ | 21 |
| | | 2.4.1.3 ದೈವಿಕ ಶಕ್ತಗೊಳಿಸುವಿಕೆ | 21 |
| | | 2.4.2 ಕೃಪೆ । ಕೆಲಸ | 23 |
| | 2.5 | ದೇವರ ಆತ್ಮನ ನಡೆಸುವಿಕೆಯನ್ನು ಗುರುತಿಸುವುದು | 23 |
| | | 2.5.1 ಪವಿತ್ರಾತ್ಮನು ನಮ್ಮೊಂದಿಗೆ ಹೇಗೆ ಮಾತಾಡುತ್ತಾನೆ? | 24 |

2.5.2 ಪವಿತ್ರಾತ್ಮನೇ ನಮ್ಮೊಂದಿಗೆ ಮಾತಾಡುತ್ತಿದ್ದಾನೆ ಎಂಬುದಾಗಿ ನಮಗೆ ಹೇಗೆ ಗೊತ್ತಾಗುತ್ತದೆ? 24

2.6 ಪರಿಸ್ಥಿತಿಗಳನ್ನು ಗುರುತಿಸಿರಿ 24

2.7 ದೈವಿಕ ಸಲಹೆ ಮತ್ತು ಜ್ಞಾನಗಳನ್ನು ಗುರುತಿಸಿರಿ 27

2.7.1 ಒಬ್ಬ ವ್ಯಕ್ತಿಯ ತಿಳುವಳಿಕೆ ಮತ್ತು ಅನುಭವದ ಆಧಾರದ ಮೇಲಿನ ಸಲಹೆಗಳು 29

2.7.2 ಬರೆಯಲ್ಪಟ್ಟ ದೇವರ ವಾಕ್ಯದ ಮೇಲೆ ಆಧಾರಿತಕೊಂಡ ಸಲಹೆ 29

2.7.3 ಪ್ರವಾದನೆ ಪ್ರೇರಣೆಗಳ ಮೇಲೆ ಆಧಾರಿತಗೊಂಡ ಸಲಹೆ 29

2.8 ಸಮಯಗಳನ್ನು ಮತ್ತು ಋತುಗಳನ್ನು ಗುರುತಿಸಿರಿ 29

2.9 ದೇವರು ಕಾರ್ಯಮಾಡುವ ಮಾದರಿಯನ್ನು ಗುರುತಿಸಿರಿ 32

**3. ದೇವರ ಸಿದ್ಧತೆಯ ಕಾರ್ಯಗತಿಯನ್ನು ಅರ್ಥಮಾಡಿಕೊಳ್ಳುವದು 34**

3.1 ಸಿದ್ದತೆಯ ಕಾರ್ಯಗತಿಯ ಮೂಲಕ ದೇವರು ಏನನ್ನು ಸಾಧಿಸಲು ಅಪೇಕ್ಷಿಸುತ್ತಾನೆ? 34

3.1.1 ದೈವಿಕ ಗುಣಲಕ್ಷಣ 39

3.1.2 ಎಲ್ಲಾ ಕ್ಷೇತ್ರಗಳಲ್ಲೂ ಪ್ರೌಢತೆ 40

3.2 ದೇವರು ನಮ್ಮನ್ನು ಹೇಗೆ ಸಿದ್ಧಮಾಡುತ್ತಾನೆ? 42

3.2.1 ದೇವರ ವಾಕ್ಯ 42

3.2.2 ಪವಿತ್ರಾತ್ಮನು 42

3.2.3 ಇತರ ಜನರು 42

3.2.4 ಜೀವಿತದ ಅನುಭವಗಳು 42

3.3 ದೇವರ ಸಿದ್ಧತೆಯ ಕಾರ್ಯಗತಿಯನ್ನು ನೀವು ಹಾದು ಹೋಗುವಾಗ ಮನಸ್ಸಿನಲ್ಲಿರಿಸಬೇಕಾದ ವಿಷಯಗಳು 43

3.3.1 ದೇವರ ಸಿದ್ಧತೆಯ ಕಾರ್ಯಗತಿಯಲ್ಲಿ ನಾವು ದೇವರೊಂದಿಗೆ ಸಹಕರಿಸಲು ಮತ್ತು ಕೆಲಸ ಮಾಡುವುದನ್ನು ಕಲಿಯಬೇಕು 43

3.3.2 ನಿಮ್ಮ ಮನೋಭಾವನೆಯ ವಿಚಾರಗಳಿಗೆ ಬೆಲೆಯಿದೆ 43

3.3.3. ಬಲವು ಇದ್ದಲ್ಲಿ ಸ್ಥಿರತೆ ಇದೆ 43

3.3.4 ಚಿಕ್ಕ ಚಿಕ್ಕ ವಿಷಯಗಳಲ್ಲಿ ನಂಬಿಗಸ್ತರಾಗಿರುವಾಗ ದೇವರು ನಿಮ್ಮನ್ನು ಮುಂದಿನವುಗಳಿಗೆ ಪ್ರವರ್ತಿಸುತ್ತಾನೆ 43

3.3.5 ಆತ್ಮಸಂತೃಪ್ತಿಯ ಬಗ್ಗೆ ಎಚ್ಚರಿಕೆಯಾಗಿರ್ರಿ ದೇವರು ನಿಮ್ಮನ್ನು ಹಿಗ್ಗಿಸಲು ಅವಕಾಶ ಕೊಡಿರಿ 44

3.3.6 ಸಿದ್ಧತೆಯ ಸಮಯವು ನಿರರ್ಥಕ ಸಮಯವಲ್ಲ ಕರೆಯು ದೊಡ್ಡದಾದಷ್ಟು ಸಿದ್ದತೆಯು ಅಧಿಕ ದೊಡ್ಡದು 44

3.3.7 ಆತುರಪಡದಿರ್ರಿ ಪ್ರತಿಯೊಂದು ಸಿದ್ದತೆಯ ಸಮಯವು ತನ್ನ ಸಂಪೂರ್ಣ ಪಥದಲ್ಲಿ ಜರುಗಲಿ 44

3.3.8 ನಿಮ್ಮ ಕರೆ ಮತ್ತು ವರಗಳ ಕ್ಷೇತ್ರಗಳೊಳಗೆ ಇರ್ರಿ 44

**4. ಆತನ ಉದ್ಧೇಶಗಳನ್ನು ನೆರವೇರಿಸಲು ನೀವು ಸ್ಥಾನದಲ್ಲಿ ನಿಲ್ಲುವುದು 45**

4.1 ಆತನ ಉದ್ಧೇಶಗಳನ್ನು ನೆರವೇರಿಸಲು ಸ್ಥಾನದಲ್ಲಿ ನಿಲ್ಲುವುದು 45

4.2 ಆತನ ಒದಗಿಸುವಿಕೆಯನ್ನು ಸ್ವೀಕರಿಸಲು ಕಾದಿದ್ದು ನಿಂತಿರುವುದು 45

4.3 ಸಂರಕ್ಷಿಸಲ್ಪಡುವ ಸ್ಥಾನದಲ್ಲಿ ನಿಂತಿದ್ದೀರಿ 46

4.4 ಮೇಲ್ಮಟ್ಟಕ್ಕೇರಿಸಲ್ಪಡುವ ಸ್ಥಾನದಲ್ಲಿ ನಿಂತಿದ್ದೀರಿ 47

4.5 ದೇವರ ಪ್ರಸಕ್ತ ಚಲನೆಯಲ್ಲಿ ನಿಂತಿದ್ದೀರಿ 47

4.6 ಸ್ಥಾನದಲ್ಲಿ ನಿಲ್ಲುವಾಗ ಮನಸ್ಸಿನಲ್ಲಿ ಇರಿಸಬೇಕಾದ ವಿಷಯಗಳು 49

**5. ದೇವರ ಉನ್ನತ ಕರೆಯ ಮೌಲ್ಯ (ಬೆಲೆ) 51**

5.1 ಪ್ರತಿದಿನದ ತ್ಯಾಗಗಳು 52

5.2 ಜೀವಿತದ ತ್ಯಾಗಗಳು (ಅರ್ಪಣೆಗಳು) 53

5.3 ಆತ್ಮನು ನಡೆಸಿದ ತ್ಯಾಗ (ಪ್ರತಿ)ಶರೀರದ ತ್ಯಾಗ 53

**6. ನಿಮ್ಮ ಓಟವನ್ನು ಕೊನೆಗಾಣಿಸುವುದು (ಪೂರೈಸುವುದು) 54**

6.1 ಯೋಜಿಸುವುದು (ಯೋಜನೆ ರೂಪಿಸುವುದು) 54

6.2 ಓಟ ಕಡೆಗಾಣಿಸುವವರೆಗೂ ಓಡುತ್ತಿರುವುದು 57

# ಪೀಠಿಕೆ

1993 ರಲ್ಲಿ ದೇವರು ನನ್ನೊಳಗೆ ಪ್ರತಿಯೊಬ್ಬ ವಿಶ್ವಾಸಿಯು ತನ್ನ ಜೀವಿತದಲ್ಲಿ ದೇವರಿಗೆ ಒಂದು ಯೋಜನೆ, ಕನಸು ಮತ್ತು ನಿಯತಿ ಇದೆ ಎಂದು ನೋಡುವಂತೆ ಮಾಡಬೇಕೆಂಬ ಒಂದು ಆಸಕ್ತಿಯನ್ನು ನನ್ನಲ್ಲಿ ಪ್ರೇರಿಸಲು ಪ್ರಾರಂಭಿಸಿದನು. ‘‘ನಿಮ್ಮ ಜೀವಿತಗಳಿಗಾಗಿ ದೇವರು ಉದ್ದೇಶ ಹೊಂದಿದ್ದಾನೆ.’’ ಎಂಬ ಸಂದೇಶವನ್ನು ವರ್ಷವೂ ಪ್ರಸಂಗಿಸುವುದರಲ್ಲಿ ಮತ್ತು ಬೋಧಿಸುವುದರಲ್ಲಿ ಮುಂದುವರೆಯುತ್ತಿದ್ದೆನು. ವೈಯಕ್ತಿಕ ಅಧ್ಯಯನ ಪರಿಶೀಲನೆ ಮತ್ತು ದೇವರ ಇತರ ಸೇವಕರುಗಳ ಸಂದೇಶ ಕೇಳುವುದರ ಮೂಲಕವಾಗಿ, ದೇವರ ಯೋಜನೆಗಳನ್ನು ಗುರುತಿಸುವುದು ಹೇಗೆ ಮತ್ತು ಆತನ ಯೋಜನೆಯನ್ನು ತಿಳಿಯಪಡಿಸಿ ಅದನ್ನು ನೆರವೇರಿಸಲು, ದೇವರು ಕೊಂಡ್ಯೊಯ್ಯುವ ರೀತಿಯನ್ನು ಅರ್ಥಮಾಡಿಕೊಳ್ಳಲು ಪ್ರಾರಂಭಿಸಿದೆನು. ಈ ಅಧ್ಯಯನ ಕೈಪಿಡಿಯು ಅದರ ಒಳನೋಟದ ಸಂಕಲನವಾಗಿದೆ.

ನಿಶ್ಚಯವಾಗಿ, ದೇವ ಜನರು ಈ ಸತ್ಯವನ್ನು ಅವರ ಹೃದಯದಲ್ಲಿಟ್ಟುಕೊಳ್ಳುವುದು ಮತ್ತು ಪರಲೋಕದ ಉದ್ದೇಶಕ್ಕಾಗಿ ಜೀವಿಸುವುದನ್ನು ನೋಡುವುದು ಆನಂದಕರವಾಗಿದೆ. ನಮ್ಮ ‘‘ಆಲ್ ಪೀಪಲ್ಸ್ ಸಭೆಯಲ್ಲಿ ಪ್ರತಿಯೊಬ್ಬ ವಿಶ್ವಾಸಿಯು ಸಭಾಸೇವಕ’’ ಎಂಬುದಾಗಿ ಸಭೆಯವರಿಗೆ ನಾವು ಪದೇ ಪದೇ ಹೇಳುತ್ತೇವೆ. ವಿಶ್ವಾಸಿಗಳನ್ನು ಸಿದ್ಧಗೊಳಿಸುವುದು ಮತ್ತು ಅವರ ದೇವ ನೇಮಿತ ಸೇವೆಗೆ ಬಿಡುಗಡೆಗೊಳಿಸುವುದು ನಮ್ಮ ಮನೋವೃತ್ತಿಯಾಗಿದೆ. ನಿಮ್ಮ ಸೇವೆಯು, ನೀವು ಸಭೆಯಲ್ಲಿ ಮತ್ತು ಪ್ರಪಂಚದಲ್ಲಿ ಅಂದರೆ - ವ್ಯಾಪಾರ ವಾಣಿಜ್ಯದಲ್ಲಿ, ಕ್ರೀಡೆಗಳಲ್ಲಿ, ಶೈಕ್ಷಣಿಕ ಕ್ಷೇತ್ರಗಳಲ್ಲಿ, ಕಲೆಗಳಲ್ಲಿ ಮುಂತಾದ ಪ್ರಾಪಂಚಿಕದಲ್ಲಿನ ವಿಷಯಗಳನ್ನು ಒಳಗೊಂಡಿರುತ್ತವೆ. ನಿಮ್ಮ ಕಡೆಗಿನ ದೇವರ ಉದ್ದೇಶವು ಸಭೆಗೆ ಮಾತ್ರ ಸೀಮಿತವಾಗಿರುವುದಿಲ್ಲ.

ನಿಮ್ಮ ಜೀವಿತಕ್ಕಿರುವ ದೇವರ ಕನಸುಗಳನ್ನು ತಿಳಿಯಲೆತ್ನಿಸಿರಿ! ನಿಮ್ಮ ಜೀವಿತಕ್ಕಿರುವ ದೇವರ ಉದ್ದೇಶವನ್ನು ನೆರವೇರಿಸಲು ಜೀವಿಸುವುದಕ್ಕಿಂತ ಹೆಚ್ಚಿನ ಉತ್ತಮವಾದ ಜೀವಿತವಿಲ್ಲ! ಆತನ ಪರಲೋಕದ ಕರೆಯನ್ನು ನೆರವೇರಿಸುವುದರಲ್ಲಿ ಮತ್ತು ಪಾಲಿಸುವುದರಲ್ಲಿರುವ ತೃಪ್ತಿಯನ್ನು ಬೇರೆ ಯಾವುದೂ ತರಲು ಸಾಧ್ಯವಿಲ್ಲ

ನಿಮಗಾಗಿ ಆತನು ರಚಿಸಿರುವ ವಿಷಯಗಳನ್ನು ನೆರವೇರಿಸುವುದು ಮತ್ತು ದೇವರೊಂದಿಗೆ ನಡೆಯುವುದು, ಇವುಗಳಿಗಿಂತ ಮಿಗಿಲಾದ ಸಾಹಸ ಕಾರ್ಯಗಳಿಲ್ಲ.

ಇದು ಯಾವಾಗಲು ಸುಲಭವಾಗಿರುವುದಿಲ್ಲ. ನಿಮ್ಮ ಮಾರ್ಗದಿಂದ ತೊಲಗಿಸಬೇಕಾದ ಕೆಲವು ಪರ್ವತದೋಪಾದಿಯ ಸಮಸ್ಯೆಗಳು ಸೋಲಿಸಬೇಕಾದ ಕೆಲವು ದೆವ್ವಗಳು ಮತ್ತು ನಿಮಗೆ ಅಡ್ಡಿಯುಂಟುಮಾಡುವ ಜನರು ಸಹ ಇರಬಹುದು! ಆದರೆ ನೀವು ಉದ್ದೇಶಗಳಿಗೆ ಅಂಟಿಕೊಂಡಂತಿರ್ರಿ ಮತ್ತು ನಿಮಗಾಗಿರುವ ದೇವರ ಕನಸುಗಳು ನನಸಾಗುವುದನ್ನು ನೀವು ನೋಡುವಿರಿ.

ನಿಮ್ಮ ಜೀವಿತಗಳಿಗಿರುವ ದೇವರ ಕನಸುಗಳನ್ನು ಪಾಲಿಸಿ ಮುಂದುವರೆಸುವ ನಿಮ್ಮ ಪ್ರಯಾಣವನ್ನು ಆನಂದಿಸಿ!

# 1

# ನಿಮ್ಮ ಜೀವಿತಕ್ಕಾಗಿ ದೇವರು ಉದ್ದೇಶ ಹೊಂದಿದ್ದಾನೆ ಎಂಬುದನ್ನು ಅರ್ಥಮಾಡಿಕೊಳ್ಳುವುದು

## 1.1 ದೇವರು – ಯೋಜನೆ, ಉದ್ದೇಶ, ರಚನೆ, ಧ್ಯೇಯಗಳ ದೇವರಾಗಿದ್ದಾನೆ.

ಕೀರ್ತನೆಗಳು 33:11

**ಯೆಹೋವನ ಆಲೋಚನೆಯೋ ಶಾಶ್ವತವಾಗಿಯೇ ನಿಲ್ಲುವದು: ಆತನ ಸಂಕಲ್ಪವು ಎಂದಿಗೂ ಕದಲುವದಿಲ್ಲ.**

ದೇವರು ಯೋಜನೆಗಳ, ಉದ್ದೇಶಗಳ, ರಚನೆಗಳ, ಧ್ಯೇಯಗಳ ದೇವರಾಗಿದ್ದಾನೆ. ದೇವರು ಗೊತ್ತು ಗುರಿಯಿಲ್ಲದೆ ಅಥವಾ ಸುಮ್ಮಗೆ ಕೆಲಸ ಮಾಡುವುದಿಲ್ಲ.

ಅಪೊಸ್ತಲರ ಕೃತ್ಯಗಳು 15:18

**ಆದಿಯಿಂದ ಈ ಕಾರ್ಯಗಳನ್ನು ತಿಳಿಯಪಡಿಸುವ ಕರ್ತನು**

ಯೆಶಾಯ 46:10

**ಆರಂಭದಲ್ಲಿಯೇ ಅಂತ್ಯವನ್ನು ತಿಳಿಸಿದ್ದೇನೆ; ನನ್ನ ಸಂಕಲ್ಪವು ನಿಲ್ಲುವದು ನನ್ನ ಇಷ್ಟಾರ್ಥವನ್ನೆಲ್ಲಾ ನೆರವೇರಿಸುವೆನು ಎಂದು ಹೇಳಿ ಇನ್ನೂ ನಡೆಯದಿರುವ ಕಾರ್ಯಗಳನ್ನು ಪುರಾತನಕಾಲದಲ್ಲಿಯೇ ಅರುಹಿದ್ದೇನೆ;**

ದೇವರು ಆರಂಭದಲ್ಲಿಯೇ ಅಂತ್ಯವನ್ನು ತಿಳಿದವನಾಗಿದ್ದಾನೆ. ಆತನು ಪ್ರಯಾಣದ ಆರಂಭದಲ್ಲಿಯೇ ಅಲ್ಲಿಗೆ ಹೇಗೆ ಸಾಗಬೇಕೆಂಬುದರ ಮತ್ತು ಹೋಗಿ ಸೇರಬೇಕಾದ ಸ್ಥಳದ ಬಗ್ಗೆ ತಿಳಿದವನಾಗಿದ್ದಾನೆ.

## 1.2 ದೇವರು, ಆತನ ಉದ್ದೇಶ ಹೊಂದಿದ್ದಾನೆ – ಈ ದಿನ ಭೂಮಿಯ ಮೇಲೆ ''ಸಾಮಾನ್ಯ ಉದ್ದೇಶ'' ಮತ್ತು ''ಮೇರು ಯೋಜನೆಯನ್ನು'' ಆತನು ನಡೆಯಿಸುತ್ತಿದ್ದಾನೆ

ಎಫೆಸದವರಿಗೆ 1:9-12

**ತಾನು ಕಾಲವು ಪರಿಪೂರ್ಣವಾದಾಗ ನಿರ್ವಹಿಸಬೇಕಾದ ಒಂದು ಕೃಪೆಯುಳ್ಳ ಸಂಕಲ್ಪವನ್ನು ಆತನು ಕ್ರಿಸ್ತನಲ್ಲಿ ಮೊದಲೇ ನಿಷ್ಕರ್ಷೆ ಮಾಡಿಕೊಂಡಿದ್ದನು. ಅದೇನೆಂದರೆ ಭೂಪರಲೋಕಗಳಲ್ಲಿರುವ ಸಮಸ್ತವನ್ನೂ ಕ್ರಿಸ್ತನಲ್ಲಿ ಒಂದಾಗಿ ಕೂಡಿಸಬೇಕೆಂಬುದೇ ಕ್ರಿಸ್ತನಲ್ಲಿಯೇ ಸಮಸ್ತವೂ ಒಂದಾಗುವುದು ಇದಲ್ಲದೆ ಆತನಲ್ಲಿ ನಾವು ದೇವರ ಸ್ವಕೀಯ ಪ್ರಜೆಯಾದೆವು. ಬರಬೇಕಾದ ಕ್ರಿಸ್ತನನ್ನು ಎದುರುನೋಡುತ್ತಿದ್ದ ನಾವು ತನ್ನ ಮಹಿಮೆಯನ್ನು ಪ್ರಖ್ಯಾತಿಪಡಿಸಬೇಕೆಂದು ಸಮಸ್ತ ಕಾರ್ಯಗಳನ್ನು ತನ್ನ ಇಷ್ಟದಂತೆ ಅದೇ ರೀತಿಯಾಗಿ ನಡಿಸುವ ದೇವರು ತನ್ನ ಸಂಕಲ್ಪದ ಮೇರೆಗೆ ನಮ್ಮನ್ನು ಆದಿಯಲ್ಲಿಯೇ ಆರಿಸಿಕೊಂಡನು.**

ಎಫೆಸದವರಿಗೆ 3:11

**ದೇವರು ನಮ್ಮ ಕರ್ತನಾದ ಕ್ರಿಸ್ತಯೇಸುವಿನಲ್ಲಿ ಅನಾದಿಕಾಲದಿಂದ ಮಾಡಿದ ಸಂಕಲ್ಪದ ಮೇರೆಗೆ....**

ದೇವರು ಭೂಮಿಯ ಮೇಲೆ ತಿಳಿಯಪಡಿಸುವ ಮತ್ತು ಕಾರ್ಯ ನಿರ್ವಹಿಸುವ ನಿತ್ಯತ್ವದ ಉದ್ದೇಶವಿದೆ. ನಾವು ಇದನ್ನು ದೇವರ ''ಮೇರು ಯೋಜನೆ'' ಎಂಬುದಾಗಿ ವ್ಯಾಖ್ಯಾನಿಸಿದ್ದೇವೆ. ಆತನು ಇದನ್ನು ಈ ದಿನಗಳಲ್ಲಿ ಭೂಮಿಯ ಮೇಲೆ ಆಚರಣೆಗೆ ತರುತ್ತಿದ್ದಾನೆ.

ದೇವರ ಮೇರು ಯೋಜನೆಯು, ಜನರು ರಕ್ಷಿಸಲ್ಪಡಬೇಕು, ಸತ್ಯದ ಅರಿವಿಗೆ ಬರಬೇಕು ಮತ್ತು ಆತನ ಮಗನಾದ ಯೇಸುಕ್ರಿಸ್ತನ ಸ್ವಾರೂಪ್ಯಕ್ಕೆ ಬರಬೇಕೆಂಬುದೇ ಆಗಿದೆ.

1 ತಿಮೊಥೆಯನಿಗೆ 2:3,4

**ಹಾಗೆ ಮಾಡುವುದು ನಮ್ಮ ರಕ್ಷಕನಾದ ದೇವರ ಸನ್ನಿಧಿಯಲ್ಲಿ ಮೆಚ್ಚಿಕೆಯಾಗಿಯೂ ಯೋಗ್ಯವಾಗಿಯೂ ಅದೆ ಎಲ್ಲಾ ಮನುಷ್ಯರು ರಕ್ಷಣೆ ಹೊಂದಿ ಸತ್ಯದ ಜ್ಞಾನಕ್ಕೆ ಸೇರಬೇಕೆಂಬುದು ಆತನ ಚಿತ್ತವಾಗಿದೆ.**

## 1.3 ನಿಮಗಾಗಿ ದೇವರು ಒಂದು ಉದ್ದೇಶ ಹೊಂದಿದ್ದಾನೆ – ''ಒಂದು ನಿರ್ದಿಷ್ಟ ಯೋಜನೆ''

ಕೀರ್ತನೆಗಳು 139 :16

**ನಾನು ಇನ್ನೂ ಕೇವಲ ಪಿಂಡವಾಗಿರುವಾಗ ನಿನ್ನ ಕಣ್ಣುಗಳು ನನ್ನನ್ನು ನೋಡಿದವು. ನನ್ನ ಆಯುಷ್ಕಾಲದ ಪ್ರಥಮ ದಿನವು ಪ್ರಾರಂಭವಾಗುವ ಮೊದಲೇ ಅದರ ಎಲ್ಲಾ ದಿನಗಳು ನಿನ್ನ ಪುಸ್ತಕದಲ್ಲಿ ಬರೆಯಲ್ಪಟ್ಟವು.**

ಕೀರ್ತನೆಗಳು 139:16 (ಮೇಸೆಜ್ ಬೈಬಲ್‌ನಲ್ಲಿ)

**ನಾನು ಪಿಂಡವಾಗಿರುವುದರಿಂದ ಜನಿಸುವವರೆಗೂ ಬೆಳೆವಣಿಗೆಯನ್ನು ತೆರೆದ ಪುಸ್ತಕದಂತೆ ನೋಡಿದೆ. ನನ್ನ ಜೀವಿತದ ಎಲ್ಲಾ ದಿನಗಳು ನಿನ್ನ ಮುಂದಿವೆ, ನಾನು ಜೀವಿಸುವುದಕ್ಕಿಂತ ಮೊದಲೇ ನನ್ನ ಜೀವಿತದ ದಿನಗಳು ಸಿದ್ದಗೊಂಡಿವೆ.**

ದೇವರು ನಿಮ್ಮ ಜೀವಿತಗಳ ನಕಲು ಪ್ರತಿಯನ್ನು ಹೊಂದಿದ್ದಾನೆ. ದೇವರು ನಿಮ್ಮ ಜೀವಿತಗಳ ಕನಸು ಹೊಂದಿದ್ದಾನೆ.

ಆತನು ನಿಮ್ಮನ್ನು ಒಂದು ಉದ್ದೇಶಕ್ಕಾಗಿಯೇ ಸೃಷ್ಟಿಸಿದ್ದಾನೆ. ಆತನ ಮನಸ್ಸಿನಲ್ಲಿ ನಿಮಗಾಗಿ ಇರುವ ತನ್ನ ಉದ್ದೇಶವನ್ನು ನೀವು ನೆರವೇರಿಸಲು ನಿಮ್ಮನ್ನು ಶಕ್ತಗೊಳಿಸಲು ಆತನು ನಿಮ್ಮನ್ನು ರಚಿಸಿದ್ದಾನೆ.

ಫಿಲಿಪ್ಪಿಯವರಿಗೆ 3:12
**ಇಷ್ಟರೊಳಗೆ ನಾನು ಬಿರುದನ್ನು ಪಡಕೊಂಡು ಸಿದ್ಧಿಗೆ ಬಂದವನೆಂದು ಹೇಳುವುದಿಲ್ಲ: ನಾನು ಯಾವದನ್ನು ಹೊಂದುವದಕ್ಕಾಗಿ ಕ್ರಿಸ್ತಯೇಸು ನಿಮ್ಮನ್ನು ಹಿಡಿದುಕೊಂಡನೋ ಅದನ್ನು ಹಿಡಿದುಕೊಳ್ಳುವುದಕ್ಕೋಸ್ಕರ ಓಡುತ್ತಾ ಇದ್ದೇನೆ.**

ಯಾವದನ್ನು ಹೊಂದುವದಕ್ಕಾಗಿ ಕ್ರಿಸ್ತ ಯೇಸು ನಿಮ್ಮನ್ನು ಹಿಡಿದುಕೊಂಡನೋ ಎಂಬುದಿದೆ. ಆತನು ನಿಮಗಾಗಿ ಒಂದು ಯೋಜನೆ ಮತ್ತು ಉದ್ದೇಶ ಹೊಂದಿದ್ದಾನೆ.

ಎಫೆಸದವರಿಗೆ 2:10
**ಸತ್ಕಾರ್ಯಗಳನ್ನು ಮಾಡುವದಕ್ಕಾಗಿ ಕ್ರಿಸ್ತಯೇಸುವಿನಲ್ಲಿ ಸೃಷ್ಟಿಸಲ್ಪಟ್ಟೆವು. ನಾವು ಸತ್ಕಾರ್ಯಗಳನ್ನು ನಡಿಸುವವರಾಗಿ ಬದುಕಬೇಕೆಂದು ದೇವರು ನಮ್ಮನ್ನು ಮೊದಲೇ ನೇಮಿಸಿದನು.**

‘‘ನೀವು ಭೂಮಿಯ ಮೇಲೆ ಸಾಧಿಸಬೇಕಾದ, ನಿಮಗಾಗಿ ಇರುವ ದೇವರ ಪೂರ್ವಾಯೋಜಿತ ‘‘ಸತ್ಕಾರ್ಯಗಳು’’ ಇವೆ.

ನೀವು ಹೋಗಬೇಕೆಂಬುದಾಗಿ ದೇವರು ಅಪೇಕ್ಷಿಸುವ ಸ್ಥಳಗಳಿವೆ; ನೀವು ಸ್ಪರ್ಶಿಸಬೇಕೆಂದು ಅಪೇಕ್ಷಿಸುವ ಜನರು ಇದ್ದಾರೆ; ನೀವು ಪ್ರಭಾವ ಬೀರಬೇಕೆಂದು ಆತನು ಅಪೇಕ್ಷಿಸುವಂತಹ ಜೀವಗಳು ಇವೆ. ನೀವು ಸಾಧಿಸಬೇಕಾದ ಆತನ ಅಪೇಕ್ಷೆಯ ವಿಷಯಗಳು ಇವೆ. ಬದಲಾಯಿಸಬೇಕೆಂಬ ನಗರಗಳಿವೆ. ಅಲುಗಾಡಿಸಬೇಕೆಂಬ ದೇಶಗಳಿವೆ!

ಜೀವಿತವನ್ನು ಜೀವಿಸುವುದು ಬಹಳ ಸರಳ ನಿಮ್ಮ ಜೀವಿತಕ್ಕೆ ದೇವರು ಹೊಂದಿರುವ ಉದ್ದೇಶವೇನು ಎಂಬುದನ್ನು ಗುರುತಿಸಿ ಅದರಲ್ಲಿ ನಡೆಯಿರಿ!

2 ತಿಮೊಥೆಯನಿಗೆ 1:9

**ಆತನು ನಮ್ಮಲ್ಲಿ ಸುಕೃತ್ಯಗಳನ್ನು ನೋಡಿದ್ದರಿಂದಲ್ಲ, ತನ್ನ ಸಂಕಲ್ಪವನ್ನು ಅನುಸರಿಸಿ ಕೃಪೆಯಿಂದಲೇ ನಮ್ಮನ್ನು ರಕ್ಷಿಸಿ ಪರಿಶುದ್ಧರಾಗುವದಕ್ಕೆ ಕರೆದನು.**

''ಆತನ ಸ್ವಂತ ಉದ್ದೇಶಕ್ಕನುಸಾರವಾಗಿ'' ನಿಮ್ಮನ್ನು ದೇವರು ಕರೆದಿದ್ದಾನೆ. ನೀವು ದೇವರೊಡನೆ ಜೊತೆಗೂಡಿ ಆತನ ಉದ್ದೇಶ ನೆರವೇರಿಸಲು ಕರೆಯಲ್ಪಟ್ಟಿದ್ದೀರಿ ಇದು ಒಂದು ಗಂಭೀರ ಸತ್ಯ. ನಾವು ಬರೇ ನಮ್ಮ ಸ್ವಂತ ಉದ್ದೇಶಕ್ಕಾಗಿ ಜೀವಿಸುತ್ತಿಲ್ಲ ಆದರೆ ಮಹತ್ವವುಳ್ಳ ಉದ್ದೇಶ - ''ಆತನ ಸ್ವಂತ ಉದ್ದೇಶಕ್ಕಾಗಿಯೇ!

ಆತನ ಉದ್ದೇಶದ ಜೊತೆಗೆ ಆ ಉದ್ದೇಶವನ್ನು ನೆರವೇರಿಸಲು ಆತನ ಕೃಪೆಯು ಸಹ ಬರುತ್ತದೆ. ಆತನ ದೈವಿಕ ಶಕ್ತಿಗೊಳಿಸುವಿಕೆಯು ಯಾವಾಗಲು ಆತನ ದೈವಿಕ ಕರೆಯುವಿಕೆಯನ್ನು ಸಹಚರಿಸುತ್ತದೆ. ನಮಗೆ ''ಯೇಸುಕ್ರಿಸ್ತನಲ್ಲಿ'' ಆತನ ಉದ್ದೇಶ ಮತ್ತು ಕೃಪೆಯು ಕೊಡಲ್ಪಟ್ಟಿವೆ. ನಾವು ಕ್ರಿಸ್ತನ ಬಳಿಗೆ ಬರುವಾಗ ಮಾತ್ರ ನಾವು ದೇವರೊಂದಿಗೆ ಆತನ ಉದ್ದೇಶವನ್ನು ನಡೆಸುವುದಕ್ಕೆ ಶಕ್ತರಾಗುತ್ತೇವೆ.

ಆತನ ಮೇರು ಯೋಜನೆಯಲ್ಲಿ ನಮಗಾಗಿರುವ ದೇವರ ನಿರ್ದಿಷ್ಟ ಯೋಜನೆಯಲ್ಲಿ ಒಂದು ಭಾಗವಾಗದೆ, ನಿಮ್ಮ ಜೀವಿತಕ್ಕಿರುವ ದೇವರ ನಿರ್ದಿಷ್ಟ ಯೋಜನೆಯನ್ನು ನೆರವೇರಿಸುತ್ತಾ ಹೋದಂತೆ ನೀವು ದೇವರ ಸಾಮಾನ್ಯ ಉದ್ದೇಶವನ್ನು ಭೂಮಿಯ ಮೇಲೆ ಆಚರಣೆಗೆ ತರಲು ಸಹಾಯ ಮಾಡುತ್ತಿರಿ.

## 1.4 ನಮಗಾಗಿರುವ ದೇವರ ಯೋಜನೆಯು ಯಾವಾಗಲು ಒಳ್ಳೆಯದು

ಯೆರೆಮೀಯ 29:11

**ನಾನು ನಿಮ್ಮ ವಿಷಯದಲ್ಲಿ ಮಾಡಿಕೊಳ್ಳುತ್ತಿರುವ ಆಲೋಚನೆಗಳನ್ನು ನಾನೇ ಬಲ್ಲೆನು; ಅವು ಅಹಿತದ ಯೋಚನೆಗಳಲ್ಲ, ಹಿತದ ಯೋಚನೆಗಳೇ.**

ರೋಮಾಪುರದವರಿಗೆ 8:28

**ಇದಲ್ಲದೆ ದೇವರ ಸಂಕಲ್ಪದ ಮೇರೆಗೆ ಕರೆಯಲ್ಪಟ್ಟು ಆತನನ್ನು ಪ್ರೀತಿಸುವವರ ಹಿತಕ್ಕಾಗಿ ಎಲ್ಲಾ ಕಾರ್ಯಗಳು ಅನುಕೂಲವಾಗುತ್ತವೆ. ಎಂದು ನಿಮಗೆ ಗೊತ್ತಿದೆ.**

ಇಂತಹ ಅಲುಗಿಸಲಾಗದ ಆತ್ಮವಿಶ್ವಾಸವನ್ನು ನಿಮ್ಮೊಳಗೆ ಹೊಂದಿಕೊಳ್ಳಬೇಕು. ನಿಮಗಾಗಿರುವ ದೇವರ ಯೋಜನೆಗಳು ಒಳ್ಳೆಯವುಗಳಾಗಿವೆ.!

ದೇವರು ನಮ್ಮ ವಿರುದ್ಧವಾಗಿರದೇ ನಮ್ಮ ಪರವಾಗಿದ್ದಾನೆ. ನಿಮಗಾಗಿ ಇರುವ ಆತನ ಯೋಜನೆಗಳು ಯಾವಾಗಲೂ ನಿಮ್ಮ ಒಳ್ಳೆಯದಕ್ಕಾಗಿಯೇ ಮತ್ತು ನಿಮ್ಮ ''ಶಾಂತಿಗಾಗಿ'' ಯೇ (ಶಾಲೋಮ್) (ಶ್ರೇಯಸ್ಸು, ಆರೋಗ್ಯ, ಅಭಿವೃದ್ಧಿ, ಜಯ, ಶಾಂತಿ) ನಿಮಗಿರುವ ದೇವರ ಯೋಜನೆಗಳಿಗಿಂತ ಉತ್ತಮವಾದುದು ಯಾವುದೂ ಇಲ್ಲ !

## 1.5 ಆತನ ಯೋಜನೆ ನೆರವೇರಿಸಲು ನಾವು ದೇವರೊಡನೆ ಸಹಕರಿಸಬೇಕು

1 ಕೊರಿಂಥದವರಿಗೆ 3:9

**ನಾವು ದೇವರ ಜೊತೆ ಕೆಲಸದವರು; ನೀವು ದೇವರ ಹೊಲವೂ ದೇವರ ಕಟ್ಟಡವೂ ಆಗಿದ್ದೀರಿ.**

ನಮ್ಮ ಜೀವಿತಗಳಲ್ಲಿನ ದೇವರ ಯೋಜನೆಗಳ ನೆರವೇರಿಕೆಯು ಸ್ವಯಂಚಾಲಿತವಾಗಿರುವುದಿಲ್ಲ. ನಮ್ಮ ಜೀವಿತಕ್ಕಾಗಿ ಆತನ ಯೋಜನೆಯನ್ನು ನಡೆಯಿಸಬೇಕಾದರೆ ನಾವು ದೇವರೊಂದಿಗೆ ಸಹಕರಿಸಬೇಕು. ನಮ್ಮ ಜೀವಿತಕ್ಕಿರುವ ದೇವರ ಯೋಜನೆ ಮತ್ತು ಉದ್ದೇಶಗಳ ನೆರವೇರಿಕೆಯು ನಮ್ಮ ಅಧೀನದಲ್ಲಿದೆ. ಕೆಲವರು ದೇವರ ಯೋಜನೆ ಮಾಡಲು ಪ್ರಾರಂಭಮಾಡದೇ ಇರುವರು. ಕೆಲವರು ಆತನ ಯೋಜನೆಯ ಸಣ್ಣ ಪ್ರಮಾಣ ಮಾತ್ರ ಮಾಡುತ್ತಾರೆ. ಅಪೊಸ್ತಲನಾದ ಪೌಲನು ''ಆತನ ಓಟವನ್ನು ಮುಗಿಸಿದನು'' ಎಂಬುದಾಗಿ ಬೈಬಲ್ ಹೇಳುತ್ತದೆ.

ದೇವರು ಪರಲೋಕದಲ್ಲಿ ಆತನ ಚಿತ್ತವನ್ನು ವ್ಯಕ್ತಪಡಿಸುತ್ತಾನೆ. ಆದರೆ ಆತನ ಜನರು ಭೂಮಿಯ ಮೇಲೆ ಅದನ್ನು ಕಾರ್ಯರೂಪಕ್ಕೆ ತರಬೇಕೆಂಬುದಾಗಿ ಆತನು ನೋಡುತ್ತಾನೆ.

## 1.6 ನಮ್ಮ ಜೀವಿತಗಳಿಗಿರುವ ದೇವರ ಯೋಜನೆಯನ್ನು ನಾವು ಗುರುತಿಸಬೇಕು ಮತ್ತು ಅನುಸರಿಸಬೇಕು

ನಮ್ಮ ಜೀವಿತಕ್ಕಿರುವ ದೇವರ ಉದ್ದೇಶ ಮತ್ತು ಯೋಜನೆಗಳು ರಹಸ್ಯವಾದವುಗಳಾಗಿರಬೇಕಾಗಿಲ್ಲ.!

ಕೆಲವು ಜನರು ದೇವರ ಚಿತ್ತವು ರಹಸ್ಯವಾದವು ನಾವು ಅವುಗಳನ್ನು ತಿಳಿಯಲಾಗುವುದಿಲ್ಲ ಎಂಬ ಅಭಿಪ್ರಾಯ ಹೊಂದಿದ್ದಾರೆ! ಇದು ನಿಜವಾಗಿಯೂ ಅಸತ್ಯವಾದುದು!

ನಮ್ಮ ಜೀವಿತಕ್ಕಿರುವ ಆತನ ಯೋಜನೆ ಮತ್ತು ಉದ್ದೇಶಗಳ ನಿಮಿತ್ತವಾಗಿ ನಾವು ಆತನನ್ನು ಹುಡುಕಲು ಇಷ್ಟ ಹೊಂದಿದ್ದರೆ ದೇವರು ಆತನ ಚಿತ್ತವನ್ನು ಪ್ರಕಟ ಪಡಿಸುತ್ತಾನೆ.

ನಾವು ಒಂಭತ್ತು ''ಮಾರ್ಗದರ್ಶಿಲೇಖನ'' ಗಳ ಕುರಿತು ಕಲಿಯುತ್ತೇವೆ. ಅವುಗಳು ನಮ್ಮ ಜೀವಿತಕ್ಕಿರುವ ದೇವರ ನಡೆಸುವಿಕೆ ಮತ್ತು ಮಾರ್ಗದರ್ಶನವನ್ನು ಸೂಕ್ಷ್ಮಗ್ರಹಿಗಳಾಗಿ ತಿಳಿಯಲು ಸಹಾಯ ಮಾಡುತ್ತೇವೆ.

- ದೇವರ ವಾಕ್ಯದ ಸಾಮಾನ್ಯ ಬೋಧನೆಗಳು ಮತ್ತು ಉಪದೇಶಗಳನ್ನು ಗುರುತಿಸಿರಿ
- ನಿಮ್ಮ ಜೀವಿತದಲ್ಲಿನ ''ಬೀಜಗಳನ್ನು'' ಗುರುತಿಸಿರಿ.
- ಆಂತರ್ಯದ ಪ್ರೇರಣೆಗಳನ್ನು ಗುರುತಿಸಿರಿ
- ನಿಮಗೆ ಕೊಡಲ್ಪಟ್ಟ ದೇವರ ಕೃಪೆಯನ್ನು ಗುರುತಿಸಿರಿ.
- ಪರಿಸ್ಥಿತಿಗಳನ್ನು ಗುರುತಿಸಿರಿ
- ದೇವರ ಆತ್ಮನ ನಡೆಸುವಿಕೆ ಗುರುತಿಸಿರಿ
- ದೈವಿಕ ಸಲಹೆ ಮತ್ತು ಜ್ಞಾನವನ್ನು ಗುರುತಿಸಿರಿ
- ಕಾಲವನ್ನು ಮತ್ತು ಋತುಗಳ ಗುರುತಿಸಿರಿ
- ನಿಮ್ಮ ಜೀವಿತದಲ್ಲಿ ದೇವರು ಕಾರ್ಯನಡೆಸುವ ಮಾದರಿಯನ್ನು ಗುರುತಿಸಿರಿ.

## 1.7 ಆತನ ಯೋಜನೆ ಮತ್ತು ಉದ್ದೇಶವನ್ನು ನೆರವೇರಿಸಲು ದೇವರು ನಿಮ್ಮನ್ನು ಸಿದ್ಧಮಾಡುತ್ತಾನೆ.

ನಿಮ್ಮ ಸಿದ್ಧತೆಯು ಅಧಿಕವಾಗಿ ಸಮಗ್ರವಾಗಿದ್ದರೆ, ನೀವು ಜಯ ಹೊಂದುವ ಸಂಭವ ಅಧಿಕ.

ಸಿದ್ಧತೆಯ ಸಮಯವು ನಿರರ್ಥಕ ಸಮಯವಲ್ಲ.

ಕರೆಯು ಮಹತ್ವವುಳ್ಳದ್ದಾಗಿದ್ದರೆ, ಬೇಕಾದ ಸಿದ್ಧತೆಯು ಮಹತ್ವವಾದುದಾಗಿರುವುದು

## 1.8 ನಾವು ತಪ್ಪುಗಳನ್ನು ಮಾಡಬಹುದು - ಆದರೆ ನಮ್ಮ ಸೋಲುಗಳಿಂದ ಹೊರಬರಲು ಮತ್ತು ಆತನ ಕರೆಯನ್ನು ಪರಿಪೂರ್ಣಗೊಳಿಸಲು ದೇವರು ಸಹಾಯ ಮಾಡುತ್ತಾನೆ.

ನೀವು ಜಯಿಸದ ಯಾವುದೇ ಬಲಹೀನತೆಯು ನಿಮ್ಮ ವಿರುದ್ಧವಾಗಿ ಸೈತಾನನಿಂದ ಉಪಯೋಗಿಸಲ್ಪಡುವುದು.

ದೇವರು ಸಮಯಕ್ಕಿಂತಲೂ ದೊಡ್ಡವನು. ದೇವರು ತಪ್ಪುಗಳಿಗಿಂತಲೂ ದೊಡ್ಡವನು.

2 ತಿಮೊಥೆಯನಿಗೆ 4:6-8

**ಈಗಲೇ ಪಾನದ್ರವ್ಯವಾಗಿ ಅರ್ಪಿತನಾಗುತ್ತಾ ಇದ್ದೇನೆ. ನಾನು ಹೊರಟು ಹೋಗಬೇಕಾದ ಸಮಯವು ಸಮೀಪಕ್ಕೆ ಬಂದಿದೆ. ಶ್ರೇಷ್ಟ ಹೋರಾಟವನ್ನು ಮಾಡಿದ್ದೇನೆ, ನನ್ನ ಓಟವನ್ನು ಕಡೆಗಾಣಿಸಿದ್ದೇನೆ, ಕ್ರಿಸ್ತ ನಂಬಿಕೆಯನ್ನು ಕಾಪಾಡಿಕೊಂಡಿದ್ದೇನೆ.  ನೀತಿವಂತರಿಗೆ ದೊರಕುವ ಜಯಮಾಲೆಯು ಮುಂದೆ ನನಗೆ ಸಿದ್ಧವಾಗಿದೆ; ಅದನ್ನು ನೀತಿಯುಳ್ಳ ನ್ಯಾಯಾಧಿಪತಿಯಾಗಿರುವ ಕರ್ತನು ಆ ದಿನದಲ್ಲಿ ನನಗೆ ಕೊಡುವನು; ಮಾತ್ರವಲ್ಲದೆ ತನ್ನ ಪ್ರತ್ಯಕ್ಷತೆಯನ್ನು ಪ್ರೀತಿಸುವವರೆಲ್ಲರಿಗೂ ಕೊಡುವನು.**

ಅಪೊಸ್ತಲನಾದ ಪೌಲನು 35 ವರ್ಷದವನಾಗಿದ್ದಾಗ ಕರ್ತನಾದ ಯೇಸು ಕ್ರಿಸ್ತನ ಬಳಿ ಬಂದನು. ಆದಾಗ್ಯೂ ಅವನು ತನ್ನ ಓಟವನ್ನು ಕಡೆಗಾಣಿಸಿದ್ದೇನೆ ಎಂಬುದಾಗಿ ಹೇಳಿದ್ದಾನೆ. ದೇವರ ಕರೆಯನ್ನು ನೆರವೇರಿಸಲು ವಯಸ್ಸು ಅಡ್ಡಿಯನ್ನುಂಟುಮಾಡುವುದಿಲ್ಲ.

2 ತಿಮೊಥೆಯನಿಗೆ 1:9

**ಆತನು ನಮ್ಮಲ್ಲಿ ಸುಕೃತ್ಯಗಳನ್ನು ನೋಡಿದ್ದರಿಂದಲ್ಲ, ತನ್ನ ಸಂಕಲ್ಪವನ್ನು ಅನುಸರಿಸಿ ಕೃಪೆಯಿಂದಲೇ, ನಮ್ಮನ್ನು ರಕ್ಷಿಸಿ ಪರಿಶುದ್ಧರಾಗುವದಕ್ಕೆ ಕರೆದನು.**

ದೇವರು ಪರಿಪೂರ್ಣ ಪಾತ್ರೆಗಳನ್ನು ಎದುರುನೋಡುತ್ತಿಲ್ಲ ಆತನು ಅಧೀನನಾದ ಅಥವಾ ಫಲಕೊಡುವ ಪಾತ್ರೆಗಳನ್ನು ನೋಡುತ್ತಿದ್ದಾನೆ.

2 ಕೊರಿಂಥದವರಿಗೆ 4:7

**ಬಲಾಧಿಕ್ಯವು ದೇವರದೇ ಹೊರತು ನಮ್ಮೊಳಗಿಂದ ಬಂದದ್ದಲ್ಲವೆಂದು ತೋರುವದಕ್ಕಾಗಿ ಈ ನಿಕ್ಷೇಪವು ಮಣ್ಣಿನ ಘಟಗಳಲ್ಲಿ ನಮಗುಂಟು.**

ದೇವರ ಬಲವು ನಮ್ಮ ಮೂಲಕ ಕಾರ್ಯಮಾಡುವುದಾಗಿದೆ. ನಾವು ಮಣ್ಣಿನ ಮಡಕೆಗಳಾಗಿದ್ದೇವೆ.

## 1.9 ನಾವು ದೇವರ ಉದ್ದೇಶವನ್ನು ನೆರವೇರಿಸದಂತೆ ಅದನ್ನು ನಿಲ್ಲಿಸುವ ಕಾರ್ಯವನ್ನು ಸೈತಾನನು ಮಾಡುತ್ತಾನೆ.

ದೇವದತ್ತ ಒಂದು ಕನಸು ಯಾವಾಗಲೂ ದುರಾತ್ಮನ ವಿರೋಧವನ್ನು ಎದುರಿಸುತ್ತದೆ.

ನಿಧಾನಿಸುವುದು ಯಾವಾಗಲೂ ದೇವರಿಂದಲ್ಲ (ದಾನಿಯೇಲನು 10:2-14) ಸೈತಾನನು ನಿಮ್ಮ ಅದ್ಭುತಕಾರ್ಯವನ್ನು ನಿಧಾನಗೊಳಿಸಲು ಪ್ರಯತ್ನಿಸುತ್ತಾನೆ. ಮತ್ತು ನೀವು ದೇವರ ಮಹತ್ವಕ್ಕೂ ಉತ್ತಮತ್ವಕ್ಕೂ ಹೋಗದಂತೆ ನಿಮ್ಮ ಇಚ್ಛೆಗಳನ್ನು ದುರ್ಬಲಗೊಳಿಸುತ್ತಾನೆ.

## 1.10 ನಾವು ದೇವರ ಕರೆಯಲ್ಲಿ ಕೇಂದ್ರೀಕೃತವಾಗಿರಬೇಕು

ಚಿತ್ತಭ್ರಮಣೆ - ಅಪೂರ್ಣವಾದ ಕೇಂದ್ರೀಕರಣ ಸಮಯ ಮತ್ತು ಶಕ್ತಿಯನ್ನು ನಿರರ್ಥಕಗೊಳಿಸುತ್ತದೆ. ''ಎಡಕ್ಕಾಗಲಿ ಬಲಕ್ಕಾಗಲಿ ತಿರುಗಬೇಡ'' ಎಂದು ದೇವರು ತಾನೇ ಹೇಳಿದ್ದಾನೆ. (ಜ್ಞಾನೋಕ್ತಿಗಳು 4:27)

## 1.11 ನಾವು ಸಹನೆ ಹೊಂದಿರಬೇಕು

ಜಯದ ರುಚಿಯು ನಿಮ್ಮ ಪ್ರಯಾಸದ ನೆನಪುಗಳನ್ನು ಬಾರದಂತೆ ಮಾಡುತ್ತದೆ. (ಮೈಕ್ ಮುರ್‌ಡೋಕ್) (mike murdeck).

ನಿಮ್ಮ ಸಹನೆಯು ಸೈತಾನನನ್ನು ಕುಂಠಿಸುತ್ತವೆ. ಹೀನ ಪಡಿಸುತ್ತದೆ. (ಮೈಕ್ ಮುರ್ ಡೋಕ್)

# 2

# ನಿಮ್ಮ ಜೀವಿತಕ್ಕಿರುವ ದೇವರ ಉದ್ದೇಶವನ್ನು ಗುರುತಿಸುವುದು

ಎಫೆಸದವರಿಗೆ 5:15 - 17

**ಆದಕಾರಣ ನೀವು ನಡಕೊಳ್ಳುವ ರೀತಿಯನ್ನು ಕುರಿತು ಚೆನ್ನಾಗಿ ನೋಡಿಕೊಳ್ಳಿರಿ ಜ್ಞಾನವಂತರಾಗಿರಿ. ಈ ದಿನಗಳು ಕೆಟ್ಟವುಗಳಾಗಿವೆ; ಆದ್ದರಿಂದ ಕಾಲವನ್ನು ಸುಮ್ಮನೆ ಕಳೆಕೊಳ್ಳದೆ ಅದನ್ನು ಬೆಲೆಯುಳ್ಳದ್ದೆಂದು ಉಪಯೋಗಿಸಿಕೊಳ್ಳಿರಿ**

ದೇವರ ವಾಕ್ಯವು ನಮಗೆ ಕರ್ತನ ಚಿತ್ತ (ಉದ್ದೇಶ)ವನ್ನು ಅರ್ಥಮಾಡಿ ಕೊಳ್ಳಬೇಕೆಂಬುದಾಗಿ (ಒಟ್ಟಿಗೆ ಇರಿಸು, ಮಾನಸಿಕವಾಗಿ ಗ್ರಹಿಸು) ಎಂದು ತಿಳಿಸುತ್ತದೆ.

ದೇವರ ಚಿತ್ತವೇನಾಗಿದೆ ಎಂಬುದಾಗಿ ನಾವು ಅರ್ಥಮಾಡಿಕೊಳ್ಳಬಹುದು!

ಕೊಲೊಸ್ಸೆಯವರಿಗೆ 1:9-11

**ಆದಕಾರಣ ನಾವು ನಿಮ್ಮ ಸುದ್ದಿಯನ್ನು ಕೇಳಿದ ದಿವಸದಿಂದ ನಿಮಗೋಸ್ಕರ ಪ್ರಾರ್ಥಿಸುವುದನ್ನು ಬಿಡದೆ ನೀವು ಸಕಲ ಆತ್ಮೀಯ ಜ್ಞಾನವನ್ನೂ ಗ್ರಹಿಕೆಯನ್ನೂ ಹೊಂದಿ ಕರ್ತನ ಚಿತ್ತದ ವಿಷಯವಾದ ತಿಳುವಳಿಕೆಯಿಂದ ತುಂಬಿಕೊಂಡು ಆತನಿಗೆ ಯೋಗ್ಯರಾಗಿ ನೆಡೆದು ಎಲ್ಲಾ ವಿಧದಲ್ಲಿ ಆತನನ್ನು ಸಂತೋಷಪಡಿಸುವವರಾಗಿರಬೇಕೆಂತಲೂ ನೀವು ಸಕಲ ಸತ್ಕಾರ್ಯವೆಂಬ ಫಲವನ್ನು ಕೊಡುತ್ತಾ ದೇವಜ್ಞಾನದಿಂದ ಅಭಿವೃದ್ಧಿಯಾಗುತ್ತಿರಬೇಕೆಂತಲೂ ಆತನ ಮಹಿಮೆಶಕ್ತಿಯ ಪ್ರಕಾರ ಪರಿಪೂರ್ಣ ಬಲ ಹೊಂದಿ ಬಲಿಷ್ಟರಾಗಿ ಆನಂದಪೂರ್ವಕವಾದ ತಾಳ್ಮೆಯನ್ನು ದೀರ್ಘಶಾಂತಿಯನ್ನೂ ಯಾವಾಗಲೂ ತೋರಿಸುವವರಾಗಿರಬೇಕೆಂತಲೂ.**

ಆತನ ಚಿತ್ತದ ಜ್ಞಾನದಿಂದ ತುಂಬಿರುವುದು ಸಾಧ್ಯವಾದುದಾಗಿದೆ. ನಮ್ಮ ಜೀವಿತಕ್ಕಿರುವ ದೇವರ ಚಿತ್ತದ ವಿಷಯದಲ್ಲಿ ನಮ್ಮಲ್ಲಿ ಒಬ್ಬನೂ ಸಹ ''ಕತ್ತಲೆಯಲ್ಲಿರುವುದು'' ಅವಶ್ಯವಿಲ್ಲ!

ಆತನ ಚಿತ್ತವನ್ನು ಅರ್ಥಮಾಡಿಕೊಳ್ಳಲು ಆತ್ಮಿಕ ಪ್ರಜ್ಞೆ ಮತ್ತು ಜ್ಞಾನ ಅಗತ್ಯವಾಗಿದೆ.

ನಮಗೆ ಆತನ ಚಿತ್ತವು ತಿಳಿದಿದ್ದರೆ ಆಮೇಲೆ ನಾವು!

(ಅ) ಆತನಿಗೆ ಯೋಗ್ಯರಾಗಿ ನಡೆಯಬೇಕು

(ಆ) ಆತನಿಗೆ ಮೆಚ್ಚಿಕೆಯಾಗಿರಬೇಕು

(ಇ) ಪ್ರತಿ ಒಳ್ಳೆಯ ಕೆಲಸದಲ್ಲೂ ಫಲಭರಿತನಾಗಿರಬೇಕು

(ಈ)ಆತನ ಜ್ಞಾನದಲ್ಲಿ ವೃದ್ಧಿಯಾಗುತ್ತಿರಬೇಕು

1ಕೊರಿಂಥದವರಿಗೆ 2:9,10
**ಆದರೆ ಬರೆದಿರುವ ಪ್ರಕಾರ - ದೇವರು ತನ್ನನ್ನು ಪ್ರೀತಿಸುವವರಿಗಾಗಿ ಸಿದ್ಧಮಾಡಿರುವಂಥದೆಲ್ಲವನ್ನು ಕಣ್ಣುಕಾಣಲಿಲ್ಲ, ಕಿವಿ ಕೇಳಲಿಲ್ಲ ಅದರ ಭಾವನೆಯು ಮನುಷ್ಯನ ಹೃದಯದಲ್ಲಿ ಹುಟ್ಟಲಿಲ್ಲ. ನಮಗಾದರೋ ದೇವರು ತನ್ನ ಆತ್ಮನ ಮೂಲಕ ಅದನ್ನು ಪ್ರಕಟಿಸಿದನು. ಆ ಆತ್ಮನು ಎಲ್ಲಾ ವಿಷಯಗಳನ್ನು, ದೇವರ ಆಗಾಧವಾದ ವಿಷಯಗಳನ್ನು ಕೂಡ ಪರಿಶೋಧಿಸುವವನಾಗಿದ್ದಾನೆ.**

ಆತನ ಜನರಾಗಿ ಮತ್ತು ವೈಯಕ್ತಿಕವಾಗಿ, ನಮಗಾಗಿ ದೇವರು ಯೋಜಿಸಲ್ಪಟ್ಟಂತಹ ಅನೇಕ ವಿಷಯಗಳಿವೆ. ಪವಿತ್ರಾತ್ಮನು ಅವುಗಳನ್ನು ನಮಗೆ ಪ್ರಕಟಿಸುತ್ತಾನೆ.!

1ಕೊರಿಂಥದವರಿಗೆ 2:16
**ಕರ್ತನ ಮನಸ್ಸನ್ನು ತಿಳುಕೊಂಡು ಆತ್ಮನಿಗೆ ಉಪದೇಶಿಸುವವನಾರು ಎಂದು ಬರೆದದೆಯಲ್ಲಾ ನಮಗಾದರೋ ಕ್ರಿಸ್ತನ ಮನಸ್ಸು ದೊರಕಿತು.**

ಆತ್ಮನು ಪ್ರಕಟಪಡಿಸುವ ಕಾರ್ಯದಿಂದಾಗಿ ನಾವು ಕ್ರಿಸ್ತನ ಮನಸ್ಸು ಹೊಂದಿದ್ದೇವೆ. ಕ್ರಿಸ್ತನ ಆಲೋಚನೆ, ಯೋಜನೆ ಮತ್ತು ಉದ್ದೇಶ ನಮಗೆ ಗೊತ್ತಿವೆ.

ನಿಮ್ಮ ಜೀವಿತಕ್ಕಿರುವ ದೇವರ ಯೊಜನೆ ಮತ್ತು ಉದ್ದೇಶವನ್ನು ನೀವು ನಿಖರವಾಗಿ, ಪರಿಪೂರ್ಣವಾಗಿ ಮತ್ತು ಸ್ಪಷ್ಟವಾಗಿ ತಿಳಿಯಬಹುದು.

ಸಂಪೂರ್ಣವಾಗಿ ದೇವರ ಉದ್ದೇಶ ಮತ್ತು ಯೋಜನೆಯೊಡನೆ ಅಪರಿಚಿತವಾದ ಕುರುಡ ಮನುಷ್ಯನು, ಜೀವಿತದುದ್ದಕ್ಕೂ ತಡವರಿಸುವ ಹಾಗೆ ನೀವು ತಡವರಿಸುವುದು ಅವಶ್ಯವಲ್ಲ. ನೀವು ಕರ್ತನ ಚಿತ್ತವನ್ನು ಅರ್ಥಮಾಡಿಕೊಳ್ಳಬಹುದು. ಆತನು ನಿಮಗಾಗಿ ಸಿದ್ಧಮಾಡಿರುವಂತಹ ವಿಷಯಗಳನ್ನು ನೀವು ತಿಳಿಯಬಹುದು ''ಕ್ರಿಸ್ತನ ಮನಸ್ಸನ್ನು ತಿಳಿಕೊಂಡು'' ನೀವು ನಡೆಯಬಹುದು.

ಜ್ಞಾನೋಕ್ತಿಗಳು 4:18
**ನೀತಿವಂತರ ಮಾರ್ಗವು ಮಧ್ಯಾಹ್ನದವರೆಗೂ ಹೆಚ್ಚುತ್ತಾ ಬರುವ ಬೆಳಗಿನ ಬೆಳಕಿನಂತಿದೆ.**

ಅನೇಕ ಪರಿಸ್ಥಿತಿಗಳಲ್ಲಿ ನಮ್ಮ ಜೀವಿತಕ್ಕಿರುವ ಆತನ ಯೋಜನೆ ಮತ್ತು ಉದ್ದೇಶಗಳ ದೇವರ ಪ್ರಕಟಣೆಯು ಪ್ರಗತಿಪರವಾಗಿರುತ್ತದೆ.

ಇಬ್ರಿಯರಿಗೆ 11:8
**ನಂಬಿಕೆಯಿಂದಲೇ ಅಬ್ರಹಾಮನು ಕರೆಯಲ್ಪಟ್ಟು ಕೂಡಲೆ ಕರೆದಾತನ ಮಾತನ್ನು ಕೇಳಿ ತಾನು ಬಾಧ್ಯವಾಗಿ ಹೊಂದಬೇಕಾಗಿದ್ದ ಸ್ಥಳಕ್ಕೆ ಹೊರಟು ಹೋದನು; ತಾನು ಹೋಗಬೇಕಾದ ಸ್ಥಳವು ಯಾವದೆಂದು ತಿಳಿಯದೆ ಹೊರಟನು.**

ನೀವು ಮೊದಲ ಹೆಜ್ಜೆ ಹಿಡಬೇಕೆಂಬುದಾಗಿ ಆತನು ಅಪೇಕ್ಷಿಸುವದಕ್ಕೆ ವಿಧೇಯರಾದರೆ ಅಮೇಲೆ ಸರಿಯಾದ ಸಮಯದಲ್ಲಿ ಆತನು ಮುಂದಿನ ಹೆಜ್ಜೆಯನ್ನು ಪ್ರಕಟಿಸುತ್ತಾನೆ.

ಆದಿಕಾಂಡ 24:27
**ನನ್ನ ಧಣಿಯಾದ ಅಬ್ರಹಾಮನ ದೇವರಾಗಿರುವ ಯೆಹೋವನಿಗೆ ಸ್ತೋತ್ರವಾಗಲಿ, ಆತನು ತನ್ನ ಪ್ರೀತಿಯನ್ನೂ ಸತ್ಯತೆಯನ್ನೂ ನನ್ನ ದಣಿಯಿಂದ ತೆಗೆಯಲಿಲ್ಲ ನನ್ನನ್ನು ನನ್ನ ಧಣಿಯ ಬಂಧುಗಳ ಮನೆಗೆ ನೀಟಾದ ದಾರಿಯಿಂದಲೇ ಕರಕೊಂಡು ಬಂದಿದ್ದಾನೆ ಅಂದನು.**

ದೇವರು ಅಪೇಕ್ಷಿಸುವಂತಹ ಮಾರ್ಗದಲ್ಲಿ ನಾವು ಇದ್ದರೆ ನಾವು ಬೇಕೆಂದು ಆತನು ಅಪೇಕ್ಷಿಸುವ ಆತನ ಯೋಜನೆ ಮತ್ತು ಉದ್ಧೇಶಗಳ ಕಡೆಗೆ ನಮ್ಮನ್ನು ನಡಿಸುತ್ತಾನೆ.

ನಮ್ಮ ಜೀವಿತಕ್ಕಿರುವ ದೇವರ ಉದ್ದೇಶ ಮತ್ತು ಯೋಜನೆಯನ್ನು ನಾವು ಹೇಗೆ ಗುರುತಿಸುವುದು? ನಾವು ಒಂಭತ್ತು ''ಮಾರ್ಗ ಸೂಚಿಗಳ'' ಕುರಿತು ಪ್ರಸ್ತಾಪಿಸೋಣ ಅವು ನಮಗೆ ಪ್ರಯೋಜನಕರವಾಗಿರುತ್ತವೆ.

ನೀವು ಹೋಗಬೇಕೆಂಬುದಾಗಿ ಆತನು ಅಪೇಕ್ಷಿಸುವ ಮಾರ್ಗವನ್ನು ತೋರಿಸಲು. ಈ ಮಾರ್ಗಸೂಚಿಯಲ್ಲಿರುವ ಒಂದು ಅಥವಾ ಹೆಚ್ಚಿನವುಗಳ ಒಂದುಗೂಡುವಿಕೆಯ ಬಳಕೆಯನ್ನು ಭಿನ್ನ ಸಮಯಗಳಲ್ಲಿ ದೇವರು ಉಪಯೋಗಿಸುತ್ತಾನೆ.

1. ದೇವರ ವಾಕ್ಯ ಸಾಮಾನ್ಯ ಬೋಧನೆಗಳು ಮತ್ತು ಉಪದೇಶಗಳನ್ನು ಗುರುತಿಸುವುದು
2. ನಿಮ್ಮ ಜೀವಿತದಲ್ಲಿನ ''ಬೀಜಗಳನ್ನು'' (ಪ್ರಾರಂಭವನ್ನು) ಗುರುತಿಸುವುದು

3. ಆಂತರ್ಯದ ಪ್ರೇರಣೆಯನ್ನು ಗುರುತಿಸುವುದು
4. ನಿನಗೆ ಕೊಡಲ್ಪಟ್ಟ ದೇವರ ಕೃಪೆಯನ್ನು ಗುರುತಿಸುವುದು
5. ದೇವರ ಆತ್ಮನ ನಡೆಸುವಿಕೆಯನ್ನು ಗುರುತಿಸುವುದು
6. ಸನ್ನಿವೇಶವನ್ನು ಗುರುತಿಸುವುದು
7. ದೈವಿಕ ಸಲಹೆ ಮತ್ತು ಜ್ಞಾನವನ್ನು ಗುರುತಿಸುವುದು
8. ಕಾಲ ಮತ್ತು ಋತುಗಳನ್ನು ಗುರುತಿಸುವುದು
9. ನಿಮ್ಮ ಜೀವಿತಗಳಲ್ಲಿ ದೇವರು ಕಾರ್ಯ ನಡೆಸುವ ಮಾದರಿಯನ್ನು ಗುರುತಿಸುವುದು

## 2.1 ದೇವರ ವಾಕ್ಯದ ಉಪದೇಶಗಳು ಮತ್ತು ಬೋಧನೆಗಳನ್ನು ಗುರುತಿಸುವುದು

2 ತಿಮೊಥೆಯನಿಗೆ 3:16, 17
**ದೈವ ಪ್ರೇರಿತವಾದ ಪ್ರತಿಯೊಂದು ಶಾಸ್ತ್ರವು ಉಪದೇಶಕ್ಕೂ ಖಂಡನೆಗೂ ತಿದ್ದುಪಾಟಿಗೂ ನೀತಿ ಶಿಕ್ಷೆಗೂ ಉಪಯುಕ್ತವಾಗಿದೆ. ಆದರಿಂದ ದೇವರ ಮನುಷ್ಯನು ಪ್ರವೀಣನಾಗಿ ಸಕಲ ಸತ್ಕಾರ್ಯಕ್ಕೆ ಸನ್ನದ್ಧನಾಗುವನು.**

ನಮ್ಮ ಜೀವಿತಕ್ಕಿರುವ ದೇವರ ನಡೆಸುವಿಕೆ ಮತ್ತು ಮಾರ್ಗದರ್ಶನ ಯಾವಾಗಲೂ ಬರೆಯಲ್ಪಟ್ಟ ದೇವರ ವಾಕ್ಯಕ್ಕೆ ಒಪ್ಪುವಂತಿರುತ್ತದೆ.

ರೋಮಾಪುರದವರಿಗೆ 12:2
**ಇಹಲೋಕದ ನಡವಳಿಕೆಯನ್ನು ಅನುಸರಿಸದೇ ನೂತನ ಮನಸ್ಸನ್ನು ಹೊಂದಿಕೊಂಡು ಪರಲೋಕಭಾವದವರಾಗಿರಿ ಹೀಗಾದರೆ ದೇವರ ಚಿತ್ತಕ್ಕನುಸಾರವಾದದ್ದು ಅಂದರೆ ಉತ್ತಮವಾದದ್ದೂ ಮೆಚ್ಚಿಕೆಯಾದದ್ದೂ ದೋಷವಿಲ್ಲದ್ದೂ ಯಾವಯಾವದೆಂದು ವಿವೇಚಿಸಿ ತಿಳುದುಕೊಳ್ಳುವಿರಿ.**

"Prove' ದೃಢಪಡಿಸು ಗ್ರೀಕ್‌ನಲ್ಲಿ ಡೋಕಿಮಜೋ ಪರೀಕ್ಷಿಸು ಎಂಬುದಾಗಿದೆ.

'ಡೋಕಿಮೆಜೋ' ಎಂಬ ಗ್ರೀಕ್ ಪದವು ಸಾಮಾನ್ಯವಾಗಿ ಲೋಹಗಳಿಗೆ ಅನ್ವಯಿಸುತ್ತದೆ. ಪರೀಕ್ಷಿಸುವ ಕ್ರಿಯೆ ಅಥವಾ ಅವುಗಳನ್ನು ತೀವ್ರ ಬೆಂಕಿಯಲ್ಲಿ ಹಾಕಿ ಪರೀಕ್ಷಿಸುವ ಮುಂತಾದ ಕಾರ್ಯಗಳಿಗೂ ಅನ್ವಯಿಸುತ್ತದೆ. ಹೀಗಾಗಿ ಇದು ಪರೀಕ್ಷಿಸು,

ಪರಿಶೋಧಿಸು, ಮತ್ತು ಕಂಡುಹಿಡಿಯುವುದಾಗಿದೆ. ಎಂಬುದು ಇಲ್ಲಿರುವ ಅರ್ಥವಾಗಿದೆ.

ವಿವೇಚನೆಯು ನೂತನ ಮನಸ್ಸು ದೇವರ ಚಿತ್ತಕ್ಕನುಸಾರವಾದ ಯಶಸ್ವಿ ವಿಚಾರಣೆಗೆ ಅವಶ್ಯಕವಾದುದು (ಬಾರ್ನೇಸ್).

ನಾನು ದೃಡಪಡಿಸುವುದಕ್ಕೆ (ಪರೀಕ್ಷಿಸು) ನನ್ನ ಮನಸ್ಸಿನ ನವೀಕರಣ ಅಗತ್ಯವಾದುದಾಗಿದೆ ದೇವರ ಮುಂದೆ ಯಾವುದು ಒಳ್ಳೆಯದು ಪರಿಪೂರ್ಣವಾದುದು ಮತ್ತು ಅಂಗೀಕರಿಸಲ್ಪಡುವುದು ಎಂದು.

ಈ ವಚನವು ದೇವರ ಚಿತ್ತದಲ್ಲಿ ಆತನು ಮೂರು ಭಿನ್ನ ವರ್ಗಗಳನ್ನು ಹೊಂದಿದ್ದಾನೆ. ಎಂಬುದಾಗಿ ಬೋಧಿಸುವುದಿಲ್ಲ. ಆತನ ಚಿತ್ತ ಅಥವಾ ಆತನ ಚಿತ್ತವಲ್ಲ ಇದರಲ್ಲಿ ಯಾವುದಾದರೊಂದಾಗಿರುತ್ತದೆ. ದೇವರ ಚಿತ್ತವೂ ಯಾವಾಗಲೂ ಒಳ್ಳೆಯದೂ ಅಂಗೀಕೃತವಾದದ್ದೂ ಪರಿಪೂರ್ಣವಾದದೂ ಆಗಿದೆ.

ಒಳ್ಳೆಯದು - ಶ್ರೇಷ್ಟ, ನೀತಿಯುಳ್ಳದ್ದು ಗೌರವಾನ್ವಿತವಾದದ್ದು

ಸ್ವೀಕಾರಾರ್ಹ(ಅಂಗೀಕೃತ) = ಪೂರ್ಣವಾಗಿ ಒಪ್ಪುವಂತಹ ಅಂದರೆ ದೇವರಿಗೆ ಮೆಚ್ಚಿಕೆಯಾಗಿರುವುದು ಅಥವಾ ಆತನು ದೃಢಪಡಿಸುವಂತದ್ದು (ಅಂಗೀಕರಿಸುವುದು).

ಪರಿಪೂರ್ಣ = ಸಂಪೂರ್ಣ, ಅಂದರೆ ದೋಷವಿಲ್ಲದ್ದು ಅಥವಾ ನ್ಯೂನತೆಯಿಲ್ಲದಿರುವದು ಒಳ್ಳೆಯದಾದುದು, ಅಂಗೀಕೃತವಾದದು ಮತ್ತು ಪರಿಪೂರ್ಣವಾದ ವಿಷಯಗಳು ಆತನ ಚಿತ್ತವಾಗಿರುವ ವಿಷಯಗಳು.

ನವೀಕರಣಗೊಂಡ ಮನಸ್ಸು ಶೀಘ್ರವಾಗಿ ಪರೀಕ್ಷಿಸಬಲ್ಲದು (ವಿಶ್ಲೇಷಿಸು, ದೃಢಪಡಿಸು, ಗ್ರಹಿಸು) ಯಾವುದಾದರೊಂದು ಉತ್ತಮವಾದದ್ದು, ಅಂಗೀಕೃತವಾದದ್ದು ಮತ್ತು ಪರಿಪೂರ್ಣವಾದದ್ದು, ದೇವರ ಚಿತ್ತವನ್ನು ನಿಶ್ಚಯಿಸುತ್ತವೆ.

ಎಫೆಸದವರಿಗೆ 5:10
**ಕರ್ತನಿಗೆ ಮೆಚ್ಚಿಗೆಯಾದದ್ದು ಏನೆಂಬುದನ್ನು ಪರಿಶೋಧಿಸಿ ತಿಳುಕೊಳ್ಳಿರಿ.**

'ಪರಿಶೋಧಿಸುವುದು' ಡೋಕಿಮಜೋ (ಗ್ರೀಕ್‌ನಲ್ಲಿ) ಪರೀಕ್ಷಿಸು.

ನಾವು ಮಾಡುವಂತಹ ಮುಖ್ಯ ವಿಷಯವು - ಏನಾದರೊಂದು ದೇವರನ್ನು ಮೆಚ್ಚಿಸುತ್ತದೋ ಎಂದು ಪರೀಕ್ಷಿಸಲು ನಾವು ನೋಡುವಂತಹ ಮುಖ್ಯ ವಿಷಯವು ಅದು ದೇವರ ವಾಕ್ಯಕ್ಕೆ ಒಪ್ಪುತ್ತದೋ ಎಂಬುದು.

ಇಬ್ರಿಯರಿಗೆ 5:14

**ಗಟ್ಟಿಯಾದ ಆಹಾರವು ಪ್ರಾಯಸ್ಥರಿಗೊಸ್ಕರ ಅಂದರೆ ಜ್ಞಾನೇಂದ್ರಿಯಗಳನ್ನು ಸಾಧನೆಯಿಂದ ಶಿಕ್ಷಿಸಿಕೊಂಡು ಇದು ಒಳ್ಳೇದು ಅದು ಕೆಟ್ಟದ್ದು ಎಂಬ ಬೇಧವನ್ನು ತಿಳಿದವರಿಗೋಸ್ಕರವಾಗಿದೆ.**

ವಾಕ್ಯದ ಸತತ ಬಳಕೆಗಳ ಮೂಲಕ ನೀವು ನಿಮ್ಮ ವಿವೇಚನೆಯುನ್ನು ತರಭೇತಿಗೊಳಿಸಿಕೊಳ್ಳಬಹುದು (ಶರೀರದ ಅವಯವದ ಬುದ್ಧಿ). ಅಲ್ಲದೆ ಒಳ್ಳೇದು ಮತ್ತು ಕೆಟ್ಟದ್ದರ ನಡುವಿನ ವ್ಯತ್ಯಾಸವನ್ನು ಕೂಡಲೇ ಗ್ರಹಿಸಬಹುದು.

ಇದಕ್ಕಾಗಿಯೇ ದೇವರ ವಾಕ್ಯದಲ್ಲಿ ಸ್ಥಿರವಾಗಿರುವುದು ಮತ್ತು ನಮ್ಮ ಜೀವಿತಗಳಲ್ಲಿ ದೇವರ ವಾಕ್ಯವು ಬಹು ಮುಖ್ಯ ಭಾಗವಾಗಲು ಅವಕಾಶವನ್ನು ನಾವು ನೀಡುವುದು ಬಹಳ ಮುಖ್ಯವಾಗಿದೆ.

## ಪ್ರಾಯೋಗಿಕ ಉದಾಹರಣೆಗಳು

### ಮದುವೆ

ಆದಿಕಾಂಡ 2:24

**ಈ ಕಾರಣದಿಂದ ಪುರುಷನು ತಂದೆ ತಾಯಿಗಳನ್ನು ಬಿಟ್ಟು ತನ್ನ ಹೆಂಡತಿಯನ್ನು ಸೇರಿಕೊಳ್ಳುವನು ಅವರಿಬ್ಬರು ಒಂದೇ ಶರೀರವಾಗುವರು.**

2 ಕೊರಿಂಥದವರಿಗೆ 6:14,15

**ನೀವು ಕ್ರಿಸ್ತ ನಂಬಿಕೆಯಿಲ್ಲದವರೊಂದಿಗೆ ಸೇರಿ ಇಜ್ಜೋಡಾಗಬೇಡಿರಿ ಧರ್ಮಕ್ಕೂ ಅಧರ್ಮಕ್ಕೂ ಜೊತೆಯೇನು? ಬೆಳಕಿಗೂ ಕತ್ತಲೆಗೂ ಐಕ್ಯವೇನು? ಕ್ರಿಸ್ತನಿಗೂ ಸೈತಾನನಿಗೂ ಒಡನಾಟವೇನು? ನಂಬುವವನಿಗೂ ನಂಬದೇ ಇರುವವನಿಗೂ ಪಾಲುಗಾರಿಕೆ ಏನು?**

ಆಮೋಸ 3:3

**ಗೊತ್ತು ಮಾಡಿಕೊಳ್ಳದೆ ಇಬ್ಬರು ಜೊತೆಯಾಗಿ ನಡೆಯುವರೋ?**

ನೀನು ವಿಶ್ವಾಸಿಯನ್ನು ಮದುವೆಯಾಗುವುದೇ ದೇವರ ಚಿತ್ತವಾಗಿದೆ.

### ವಿವಾಹ ವಿಚ್ಛೇದನ

ಮಲಾಕಿಯ 2:16

**ಇಸ್ರಾಯೇಲಿನ ದೇವರಾದ ಯೆಹೋವನು ಇಂತೆನ್ನುತ್ತಾನೆ - ನಾನು ಪತ್ನಿತ್ಯಾಗವನ್ನು ಹೆಂಡತಿಗೆ ಅನ್ಯಾಯ ಮಾಡುವವನನ್ನೂ ಹಗೆ ಮಾಡುತ್ತೇನೆ. ಇದು ಸೇನಾಧೀಶ್ವರ ಯೆಹೋವನ ನುಡಿ; ಆದಕಾರಣ ನಿಮ್ಮ ಆತ್ಮವನ್ನು ಎಚ್ಚರಿಕೆಯಿಂದ ನೋಡಿಕೊಳ್ಳಿರಿ, ದ್ರೋಹ ಮಾಡಬೇಡಿರಿ.**

ವಿವಾಹ ವಿಚ್ಛೇದನವನ್ನು ದೇವರು ಅಂಗೀಕರಿಸುವುದಿಲ್ಲ

### ಅನಾಚಾರದ ಕೃತ್ಯಗಳು:

ಎಫೆಸದವರಿಗೆ 4:28

**ಕಳವು ಮಾಡುವವನು ಇನ್ನು ಮೇಲೆ ಕಳವು ಮಾಡದೆ ಕೈಯಿಂದ ಯಾವುದೊಂದು ಒಳ್ಳೇ ಉದ್ಯೋಗವನ್ನು ಮಾಡಿ ದುಡಿಯಲಿ; ಆಗ ಕಷ್ಟದಲ್ಲಿರುವವರಿಗೆ ಕೊಡುವದಕ್ಕೆ ಅವನಿಂದಾಗುವದು.**

ಕೀರ್ತನೆಗಳು 23:3

**ನನ್ನ ಪ್ರಾಣವನ್ನು ಉಜ್ಜೀವಿಸಮಾಡಿ ತನ್ನ ಹೆಸರಿಗೆ ತಕ್ಕಂತೆ ನೀತಿಮಾರ್ಗದಲ್ಲಿ ನನ್ನನ್ನು ನಡಿಸುತ್ತಾನೆ.**

'ಒಳ್ಳೆಯ ಕಾರಣ' ಗಳಿಗಾಗಿ ಪಾಪ ಮಾಡುವ ಕ್ರಿಯೆಗೆ ದೇವರು ಎಂದಿಗೂ ನಡೆಸುವುದಿಲ್ಲ.

## 2.2 ನಿಮ್ಮ ಜೀವಿತದಲ್ಲಿರುವ ''ಬೀಜಗಳನ್ನು'' ಗುರುತಿಸಿರಿ

ಮಾರ್ಕನು 4:26- 32

**ಇನ್ನೂ ಆತನು ಅವರಿಗೆ ಹೇಳಿದ್ದು ಒಬ್ಬನು ಭೂಮಿಯಲ್ಲಿ ಬೀಜವನ್ನು ಹಾಕಿ ರಾತ್ರಿ ಮಲಗುತ್ತಾ ಹಗಲು ಎದ್ದಿರುತ್ತಾ ಇರಲು ಅವನಿಗೆ ತಿಳಿಯದ ರೀತಿಯಲ್ಲಿ ಆ ಬೀಜವು ಹುಟ್ಟಿ ಬೆಳೆಯುವುದು ಇದರಂತೆ ದೇವರ ರಾಜ್ಯ ಭೂಮಿಯು ಮೊದಲು ಗರಿಯನ್ನೂ ಆ ಮೇಲೆ ಹೊಡೆಯನ್ನು ತರುವಾಯ ತೆನೆಯಲ್ಲಿ ತುಂಬಾ ಕಾಳನ್ನು ತನ್ನಷ್ಟಕ್ಕೆ ತಾನೇ ಹುಟ್ಟಿಸುತ್ತದೆ. ಆದರೆ ಫಲ ಮಾಗಿದ ಕೂಡಲೆ ಅವನು ಸುಗ್ಗಿ ಕಾಲ ಬಂತೆಂದು ಕೊಯಿಸುತ್ತಾನೆ ಅಂದನು. ಇನ್ನೂ ಆತನು ಹೇಳಿದ್ದು - ದೇವರ ರಾಜ್ಯವನ್ನು ಯಾವದಕ್ಕೆ ಹೋಲಿಸೋಣ? ಯಾವ ಸಾಮ್ಯದಿಂದ ಅದನ್ನು ತೋರಿಸಿ ಕೊಡೋಣ? ಅದು ಸಾಸಿವೆಕಾಳಿನಂತಿರುತ್ತದೆ. ಭೂಮಿಯಲ್ಲಿ ಬಿತ್ತುವಾಗ ಅದು ಭೂಮಿಯಲ್ಲಿರುವ ಎಲ್ಲಾ ಜೀಜಗಳಿಗಿಂತಲೂ ಸಣ್ಣದಾಗಿದೆ. ಬಿತ್ತಿದ ಮೇಲೆ ಅದು ಬೆಳೆದು ಎಲ್ಲಾ ಕಾಯಿಪಲ್ಯದ ಗಿಡಗಳಿಗಿಂತ ದೊಡ್ಡದಾಗಿ ದೊಡ್ಡ ದೊಡ್ಡ ಕೊಂಬೆಗಳನ್ನು ಬಿಡುವದರಿಂದ ಆಕಾಶದಲ್ಲಿ ಹಾರಾಡುವ ಹಕ್ಕಿಗಳು ಅದರ ನೆರಳಿನಲ್ಲಿ ವಾಸಮಾಡುವದಕ್ಕಾಗುತ್ತದೆ. ಅಂದನು.**

ದೇವರು ''ಬೀಜ ತತ್ವಕ್ಕೆ'' ಹೊಂದಿಕೆಯಾಗಿ ಕೆಲಸ ಮಾಡುತ್ತಾನೆ.

ಪ್ರಾರಂಭದಲ್ಲಿ ನಿಮ್ಮ ಜೀವಿತಗಳಿಗೆ ಹಾಕಲ್ಪಟ್ಟ ವಿಷಯಗಳನ್ನು ಪ್ರಸ್ತಾಪಿಸುವುದಕ್ಕಾಗಿ ನಾವು ''ಬೀಜಗಳು'' ಎಂಬ ಪದವನ್ನು ಉಪಯೋಗಿಸಿದ್ದೇವೆ. ಬಳಿಕ ಇದು ನೀವು ಮಾಡಿದಂತಹ ಅನೇಕ ತೀರ್ಮಾನಗಳ ಮತ್ತು ಆಯ್ಕೆಗಳ ಮೇಲೆ ಪ್ರಭಾವ ಬೀರಲು ಪ್ರಾರಂಭ ಮಾಡಿದ್ದಂತವುಗಳಾಗಿವೆ.

''ಬೀಜಗಳು'' ವಿಶೇಷ ತಲಾಂತುಗಳು ಅಥವಾ ಆಸಕ್ತಿಗಳ ಪ್ರಾರಂಭದ ಗುರುತಿಸುವಿಕೆಯಾಗಿದೆ. ನಿಮ್ಮ ಜೀವಿತದ ಮೊದಲ ಹಂತದಲ್ಲಿ ಬಂದ ಅವಕಾಶಗಳಿರಬಹುದು. ಇತರ ''ಬೀಜಗಳು'' ಅನಂತರದ ಸಂಪರ್ಕಗಳಾಗಿರಬಹುದು. (ನಿಮ್ಮ ಜೀವಿತಗಳಿಗೆ ದೇವರು ತಂದಂತಹ ಜನರು), ಕನಸುಗಳು ಪ್ರವಾದನೆ ವಾಕ್ಯಗಳು ಮುಂತಾದವುಗಳು.

**ಉದಾರಣೆಗಳು**

ಯೋಸೇಫನು - ಯೋಸೇಫನು ತನ್ನ ಚಿಕ್ಕ ವಯಸ್ಸಿನಲ್ಲೇ ಕನಸು ಕಂಡನು ಅದು ಆತನ ಭವಿಷ್ಯದಲ್ಲಿನ ವಿಷಯಗಳ ಸೂಚಕವಾಗಿತ್ತು (ಆದಿಕಾಂಡ 37)

ಮೋಶೆಯು - ದೇವರು, ಮೋಶೆಗೆ ಫರೋಹನ ಅರಮನೆಯಲ್ಲಿ ವಿದ್ಯಾಭ್ಯಾಸ ಮತ್ತು ತರಬೇತಿ ಹೊಂದಲು ಅತ್ಯದ್ಭುತ ರೀತಿಯಲ್ಲಿ ಏರ್ಪಾಟು ಮಾಡಿದನು. ಇದು ಮೋಶೆಯ ಜೀವಿತದಲ್ಲಿನ ದೇವರ ''ಆತ್ಮಿಕ ವಿಧಾತ ಬೀಜ'' ವಾಗಿದೆ. (ಅಪೊಸ್ತಲರ ಕೃತ್ಯಗಳು 7:22)

ದಾವೀದನು - ಪ್ರವಾದಿಯಾದ ಸಮುವೇಲನಿಂದ ದಾವೀದನು ಬಾಲಕನಾಗಿದ್ದಾಗಲೆ ಅಭಿಷೇಕಿಲ್ಪಟ್ಟಿದ್ದನು. (1 ಸಮುವೇಲನು 16:13) ದಾವೀದನು ಚಿಕ್ಕ ಹುಡುಗನಾಗಿಯೇ ಸಂಗೀತ ಬಾರಿಸುವುದರಲ್ಲಿ ದಕ್ಷತೆಯುಳ್ಳವನಾಗಿ ಬಲಿಷ್ಟ ವೀರನಾಗಿ, ಅವನ ಮಾರ್ಗಗಳಲ್ಲಿ ಬುದ್ಧಿವಂತನಾಗಿ ಮತ್ತು ನೋಟಕ್ಕೆ ರಮಣೀಯನಾಗಿಯೂ ಗುರುತಿಸಲ್ಪಟ್ಟಿದ್ದನು. (1 ಸಮುವೇಲನು 16:18) ಇಂತಹ ''ಬೀಜಗಳು'' ದಾವೀದನು ಏನಾದನು ಮತ್ತು ಅವನು ತನ್ನ ಜೀವಿತದಲ್ಲಿ ನೆರವೇರಿಸಿದವುಗಳಿಗೆ ರೂಪು ಕೊಟ್ಟವು.

ಎಸ್ತೇರಳು:-ಎಸ್ತೇರಳ ಸೌಂದರ್ಯವು ಅವಳ ''ಬೀಜ''ವಾಗಿದ್ದು ಆಕೆಯು ರಾಣಿಯಾಗಲು ಅದು ಸಮರ್ಥಗೊಳಿಸಿತು. ಈ ಪದವಿಯು ಆಕೆಯು ಯೆಹೂದ್ಯ ಜನರ ನಿಮಿತ್ತವಾಗಿ ಪ್ರಭಾವಬೀರುವ ಸ್ತ್ರೀಯಾಗಿ ಕಂಡುಬರುವಂತೆ ಮಾಡಿತು.

ನಿಮ್ಮ ಜೀವಿತಕ್ಕಿರುವ ''ಆತ್ಮಿಕ ವಿಧಾತದ ಬೀಜಗಳನ್ನು'' ಗುರುತಿಸಿರಿ.

ನಿಮ್ಮ ಜೀವಿತದಲ್ಲಿರುವ ಜೀಜಗಳು ದೇವರ ಯೋಜನೆ, ಉದ್ದೇಶ ಮತ್ತು ನಿಮ್ಮ ಜೀವಿತಕ್ಕಿರುವ ಮಾರ್ಗದರ್ಶನದ ಕಾಳಜಿಯ ಸಂದೇಶವನ್ನು ತಿಳಿಯಪಡಿಸುತ್ತದೆ.

## 2.3 ಆಂತರ್ಯದ ಪ್ರೇರಣೆಯನ್ನು ಗುರುತಿಸುವುದು

ನೆಹೆಮಿಯ 1:1-4

**ಹಕಲ್ಯನ ಮಗನಾದ ನೆಹೆಮಿಯನ ಮಾತುಗಳು ಇಪ್ಪತ್ತನೆಯ ವರುಷದ ಮಾರ್ಗಶೀರ್ಷ ಮಾಸದಲ್ಲಿ ನಾನು ಶೂಷನ್ ಪಟ್ಟಣದ ಅರಮನೆಯಲ್ಲಿದ್ದಾಗ ನನ್ನ ಸಹೋದರರಲ್ಲಿ ಒಬ್ಬನಾದ ಹನಾನೀಯನು ಬೇರೆ ಕೆಲವು ಜನರೂ ಯೆಹೂದದಿಂದ ನನ್ನ ಬಳಿಗೆ ಬಂದರು. ಸೆರೆಯವರೊಳಗೆ ತಪ್ಪಿಸಿಕೊಂಡ ಯೆಹೂದ್ಯರ ಮತ್ತು ಯೆರೂಸಲೇಮಿನ ಸಮಾಚಾರವನ್ನು ನಾನು ಅವರ ಹತ್ತಿರ ವಿಚಾರಿಸುವಲ್ಲಿ ಅವರು ನನಗೆ ಸೆರೆಯವರೊಳಗೆ ತಪ್ಪಿಸಿಕೊಂಡು ಆ ಸಂಸ್ಥಾನದಲ್ಲಿ ವಾಸಿಸುತ್ತಿರುವವರು ಮಹಾಕಷ್ಟನಿಂದೆಗಳಿಗೆ ಒಳಗಾಗಿದ್ದಾರೆ. ಯೆರೋಸಲೇಮಿನ ಪೌಳಿಗೋಡೆಯು ಕೆಡವಲ್ಪಟ್ಟಿರುತ್ತದೆ; ಅದರ ಬಾಗಿಲುಗಳು ಬೆಂಕಿಯಿಂದ ಸುಡಲ್ಪಟ್ಟಿರುತ್ತವೆ. ಎಂದು ಹೇಳಿದರು. ನಾನು ಈ ವರ್ತಮಾನವನ್ನು ಕೇಳಿದಾಗ ನೆಲದ ಮೇಲೆ ಕೂತುಕೊಂಡು ಅತ್ತೆನು; ಕೆಲವು ದಿವಸಗಳವರೆಗೂ ಶೋಕಿಸುತ್ತಾ ಉಪವಾಸವಾಗಿದ್ದು ಪರಲೋಕದ ದೇವರ ಮುಂದೆ ವಿಜ್ಞಾಪನೆ ಮಾಡುತ್ತಾ ಇದ್ದೇನೆ.**

ನೆಹೆಮಿಯ 2:12

**ಅಲ್ಲಿ ಮೂರು ದಿನಗಳಿದ್ದ ಮೇಲೆ ಯೆರೂಸಲೇಮಿಗೋಸ್ಕರ ಮಾಡತಕ್ಕ ಕಾರ್ಯದ ವಿಷಯವಾಗಿ ನನ್ನ ದೇವರು ನನ್ನಲ್ಲಿ ಯಾವ ಆಲೋಚನೆಯನ್ನು ಹುಟ್ಟಿಸಿದ್ದಾನೆಂದು ಯಾರಿಗೂ ತಿಳಿಸದೆ ರಾತ್ರಿಯಲ್ಲೆದ್ದು ಕೆಲವು ಜನರನ್ನು ಮಾತ್ರ ಕರಕೊಂಡು ಹೊರಟೆನು ನನ್ನ ವಾಹನಪಶುವಿನ ಹೊರತು ಬೇರೆ ಯಾವ ಪಶುವೂ ನನ್ನೊಂದಿಗಿರಲಿಲ್ಲ.**

ನೆಹಮಿಯನಂತೆ, ಬಹುಶಃ ಅನೇಕರು ಸೆರೆಯಿಂದ ತಪ್ಪಿಸಿಕೊಂಡವರು ಯೆರೂಸಲೇಮಿನ ಸ್ಥಿತಿಯ ಬಗ್ಗೆ ಕೇಳಿದ್ದರು ಆದಾಗ್ಯೂ ಯೆರೂಸಲೇಮಿನ ಪೌಳಿಗೋಡೆಗಳು ನಾಶವಾಗಿರುವುದನ್ನು ನೆಹೆಮಿಯನು ಕೇಳಿದಾಗ ಅವನೊಳಗೆ ಏನೋ ಪ್ರೇರಣೆ ಉಂಟಾಯಿತು ಏನೋ ಅವನೊಳಗೆ ಪ್ರೇರಿಸಿತು ಮತ್ತು ಅವನು ನಗರದ ಪೌಳಿಗೋಡೆಯನ್ನು ತಿರುಗಿಕಟ್ಟಲು ಅಪೇಕ್ಷೆಯುಳ್ಳವನಾದನು.

ದೇವರು ಇದನ್ನು ತನ್ನ ಹೃದಯದಲ್ಲಿರಿಸಿದ್ದಾನೆ ಎಂಬುದಾಗಿ ನೆಹೆಮಿಯನು ಗುರುತಿಸಿಕೊಂಡನು.

ಅನೇಕ ಬಾರಿ, ನಮ್ಮ ಜೀವಿತಕ್ಕಿರುವ ದೇವರ ಮಾರ್ಗದರ್ಶನವು ರೂಢಿಯಿಲ್ಲದೆ ಪಟ್ಟು ಹಿಡಿದು ಕೆಲಸ ಸಾಧಿಸುವ ಸ್ವಭಾವ ಮತ್ತು ನಮ್ಮ ಹೃದಯದೊಳಗಿನ ಆಳವಾದ ಹುರಿದುಂಬಿಸುವಿಕೆಯ ಮೂಲಕ ಬರುತ್ತದೆ. ಯಾವುದಾದರೊಂದು ವಿಷಯದ ಬಗ್ಗೆ ''ಭಾವನಾತ್ಮಕ'' ಹುರಿದುಂಬಿಸುವಿಕೆ ಪಡೆಯುವುದಕ್ಕಿಂತಲೂ ಇದು ಹೆಚ್ಚಾದದು. ಭಾವನಾತ್ಮಕ ಹುರಿದುಂಬಿಸುವಿಕೆಯು ಹವಾಮಾನದಂತಿರುತ್ತದೆ ಅಥವಾ ವಾಯುಗುಣದಂತಿರುತ್ತದೆ. ಇದು ಬದಲಾಗುತ್ತದೆ ಮತ್ತು ಸೊರಗಿ ಹೋಗುತ್ತದೆ. ಆದರೂ ಪರಲೋಕದಿಂದ ಹುರಿದುಂಬಿಸುವುದು ಆಳವಾಗಿರುತ್ತದೆ. ಇದು ಬಾಳಿಕೆ ಬರುವಂತದ್ದು. ಇದು ತಿರುಗಿ ಬರುತ್ತದೆ ಮತ್ತು ಇದು ಕಾರ್ಯನಡಿಸುವಂತೆ ಮಾಡುತ್ತದೆ.

ಅಪೊಸ್ತಲರ ಕೃತ್ಯಗಳು 17:16,17

**ಪೌಲನು ಅವರಿಗೋಸ್ಕರ ಅಥೇನೆಯಲ್ಲಿ ಕಾದುಕೊಂಡಿರುವಾಗ ಆ ಪಟ್ಟಣದಲ್ಲಿ ಎಲ್ಲೆಲ್ಲಿಯೂ ವಿಗ್ರಹಗಳೇ ಇರುವುದನ್ನು ನೋಡಿ ಅವನ ಮನಸ್ಸು ಕುದಿಯಿತು. ಆದದರಿಂದ ಅವನು ಸಭಾಮಂದಿರದಲ್ಲಿ ಯೆಹೂದ್ಯ ಮತಾವಲಂಬಿಗಳ ಸಂಗಡಲೂ ಪ್ರತಿದಿನ ಪೇಟೆಯಲ್ಲಿ ಕಂಡು ಬಂದವರ ಸಂಗಡಲೂ ವಾದಿಸಿದನು.**

ಅಪೊಸ್ತಲರ ಕೃತ್ಯಗಳು 18:5

**ಸೀಲನು ತಿಮೊಥೆಯನೂ ಮೆಕೆದೋನ್ಯದಿಂದ ಬಂದಾಗ ಪೌಲನು ದೇವರ ವಾಕ್ಯವನ್ನು ಬೋಧಿಸುವದರಲ್ಲಿ ಅತ್ಯಾಸಕ್ತಿಯುಳ್ಳವನಾಗಿ ಯೇಸುವೇ ಬರಬೇಕಾದ ಕ್ರಿಸ್ತನೆಂದು ಯೆಹೂದ್ಯರಿಗೆ ಖಂಡಿತವಾಗಿ ಸಾಕ್ಷಿ ಹೇಳಿದನು.**

ಇಲ್ಲಿ ಭಿನ್ನವಾದ ''ಆಂತರಿಕ ಹೃದಯದ ಭಾವನೆಗಳ'' ಹುರಿದುಂಬಿಸುವಿಕೆ, ಉದ್ರೇಕಿಸುವಿಕೆ ಮತ್ತು ಆಗ್ರಹಿಸುವಿಕೆಯನ್ನು ಗಮನಿಸಬಹುದು.

ಆತನ ಆಂತರ್ಯದ ಭಾವನೆಗಳೇನು ಎಂಬುದನ್ನು ನೀವು ಅನುಭವಿಸಿ ತಿಳಿಯುವಾಗ ಪರಲೋಕದ ಮಿಡಿತಗಳ ಅನುಭವದ ಸ್ಪರ್ಷ ಪಡೆಯುವಾಗ ಮತ್ತು ಅದು ಕ್ರಿಯೆಗಳಿಗೆ ಮುನ್ನಡೆಯುವಾಗ - ಇಂತಹ ಆಂತರಿಕ ಹೃದಯದ ಭಾವನೆಗಳು ದೇವರ ಹೃದಯದಲ್ಲಿ ಉತ್ಪತ್ತಿಯಾಗುತ್ತವೆ.

## 2.4 ನಿಮಗೆ ಕೊಟ್ಟಂತಹ ದೇವರ ಕೃಪೆಯನ್ನು ಗುರುತಿಸಿರಿ

### 2.4.1 ಹೊಸ ಒಡಂಬಡಿಕೆಯಲ್ಲಿ ''ಕೃಪೆ'' ಎಂಬ ಪದವು ಇವನ್ನು ವ್ಯಕ್ತಪಡಿಸುತ್ತವೆ.

#### *2.4.1.1 ದೈವಿಕ ದಯೆ*

ಎಫೆಸದವರಿಗೆ 2:8

**ನಂಬಿಕೆಯ ಮೂಲಕ ಕೃಪೆಯಿಂದಲೇ ರಕ್ಷಣೆ ಹೊಂದಿದವರಾಗಿದ್ದೀರಿ. ಆ ರಕ್ಷಣೆಯು ನಿಮ್ಮಿಂದುಂಟಾದದ್ದಲ್ಲ, ಅದು ದೇವರ ವರವೇ.**

#### *2.4.1.2 ದೈವಿಕ ಗುಣಸ್ವಭಾವ*

2 ಪೇತ್ರನು 3:18

**ನೀವು ಕೃಪೆಯಲ್ಲಿಯೂ ನಮ್ಮ ಕರ್ತನೂ ರಕ್ಷಕನೂ ಆಗಿರುವ ಯೇಸುಕ್ರಿಸ್ತನ ವಿಷಯವಾದ ಜ್ಞಾನದಲ್ಲಿಯೂ ಅಭಿವೃದ್ಧಿಯನ್ನು ಹೊಂದುತ್ತಾ ಇರ್ರಿ. ಆತನಿಗೆ ಈಗಲೂ ಸದಾಕಾಲವೂ ಸ್ತೋತ್ರ. ಆಮೆನ್**

#### *2.4.1.3 ದೈವಿಕ ಶಕ್ತಗೊಳಿಸುವಿಕೆ*

ಎಫೆಸದವರಿಗೆ 4:7

**ಆದರೆ ಕ್ರಿಸ್ತನು ನಮ್ಮಲ್ಲಿ ಒಬ್ಬೊಬ್ಬನಿಗೆ ಅನುಗ್ರಹಿಸಿದ ಪ್ರಕಾರವೇ ಅವನವನಿಗೆ ಕೃಪಾವರವು ದೊರಕಿದೆ.**

ಒಂದೇ ವರದಲ್ಲಿ ಭಿನ್ನವಾದ ಅಳತೆಗಳಿರಬಹುದು

ರೋಮಾಪುರದವರಿಗೆ 12:4-6

**ಯಾಕೆಂದರೆ ನಮಗೆ ಒಂದೇ ದೇಹದಲ್ಲಿ ಬಹಳ ಅಂಗಗಳಿರಲಾಗಿ ಆ ಎಲ್ಲಾ ಅಂಗಗಳಿಗೆ ಹೇಗೆ ಒಂದೇ ಕೆಲಸ ಇರುವದಿಲ್ಲವೋ ಹಾಗೆಯೇ ನಾವೆಲ್ಲರೂ ಒಟ್ಟಾಗಿ ಕ್ರಿಸ್ತನಲ್ಲಿ ಒಂದೇ ದೇಹವಾಗಿದ್ದು ಒಬ್ಬೊಬ್ಬರಾಗಿ ಪರಸ್ಪರ ಅಂಗಗಳಾಗಿದ್ದೇವೆ. ದೇವರು ನಮಗೆ ಕೃಪೆ ಮಾಡಿದ ಪ್ರಕಾರ ನಾವು ಬೇರೆ ಬೇರೆ ವರಗಳನ್ನು ಹೊಂದಿದ್ದೇವೆ. ಹೊಂದಿದ ವರವು ಪ್ರವಾದನೆಯ ರೂಪವಾಗಿದ್ದರೆ ನಮ್ಮ ವಿಶ್ವಾಸ ವರಕ್ಕೆ ತಕ್ಕ ಹಾಗೆ ಪ್ರವಾದನೆ ಹೇಳೋಣ.**

- ನಿಮ್ಮ ಜೀವಿತದಲ್ಲಿರುವ ವರಗಳು, ನಿಮಗೆ ಕೊಡಲ್ಪಟ್ಟ ಕೃಪೆಯ ಗುರುತಾಗಿದೆ.
- ನಿಮಗೆ ಕೊಡಲ್ಪಟ್ಟ ಕೃಪೆಯು, ನೀವು ಕಾರ್ಯದೊಡನೆ ಕ್ರಿಸ್ತನ ದೇಹದಲ್ಲಿ ಪ್ರದರ್ಶಿಸಬೇಕೆಂಬುದಾಗಿ ದೇವರು ಕೊಟ್ಟುದಾಗಿದೆ.
- ದೇವರ ''ವರಗಳು ಮತ್ತು ಕರೆಯು'' ಒಟ್ಟಾಗಿ ಮುಂದುವರೆಯುತ್ತವೆ. (ರೋಮಾಪುರದವರಿಗೆ 11:29) ನೀವು ಒಂದು ನಿರ್ದಿಷ್ಟ ಕೆಲಸಕ್ಕಾಗಿ

ಕರೆಯಲ್ಪಟ್ಟಿದ್ದೀ ಎಂಬುದು ನಿಮಗೆ ತಿಳಿದಿದೆಯೋ ನಿಮಗೆ ವರಗಳಿರುವಾಗ ಅದು ನಿಮ್ಮ ಕೆಲಸ ನೆರವೇರಿಸಲು ಸಹಾಯಿಸುತ್ತದೆ.

- ಸ್ವಭಾವದಲ್ಲಿ ಎಲ್ಲಾ ವರಗಳು ''ಆತ್ಮಿಕ''ವಾಗಿರುವುದಿಲ್ಲ

ಎಫೆಸದವರಿಗೆ 3:1,7,8

**[1]ಹೀಗಿರುವದರಿಂದ ಅನ್ಯ ಜನರಾಗಿರುವ ನಿಮ್ಮ ನಿಮಿತ್ತ ಕ್ರಿಸ್ತಯೇಸುವಿನ ಸೆರೆಯವನಾದ ಪೌಲನೆಂಬ ನಾನು ನಿಮಗೋಸ್ಕರ ಪ್ರಾರ್ಥಿಸುತ್ತೇನೆ. ದೇವರು ತನ್ನ ಶಕ್ತಿಯ ಪ್ರಯೋಗದಲ್ಲಿ ನನಗೆ ಉಚಿತಾರ್ಥವಾಗಿ ಅನುಗ್ರಹಿಸಿದ ಕೆಲಸವನ್ನನುಸರಿಸಿ ನಾನು ಈ ಸುವಾರ್ತೆಗೆ ಸೇವಕನಾದೆನು ನಾನು ಕ್ರಿಸ್ತನ ಅಪ್ರಮೇಯವಾದ ಐಶ್ವರ್ಯದ ವಿಷಯವಾದ ಶುಭ ಸಮಾಚಾರವನ್ನು ಅನ್ಯ ಜನರಿಗೆ ಪ್ರಸಿದ್ಧಿ ಪಡಿಸುವ ಹಾಗೆಯೂ...**

- ಏನಾದರೊಂದು ನಿರ್ದಿಷ್ಟ ಉದ್ದೇಶ ಸಾಧಿಸುವುದಕ್ಕಾಗಿಯೇ ದೇವರ ಕೃಪೆಯು ಯಾವಾಗಲೂ ನಿಮಗೆ ಕೊಡಲ್ಪಟ್ಟಿದೆ. ಉದಾಹರಣೆಗೆ ರೋಗಿಗಳಿಗೆ, ಹಿರಿಯರಿಗೆ ಅಥವಾ ಮಕ್ಕಳಿಗೆ ಸೇವೆ ಮಾಡುವುದಕ್ಕಾಗಿ
- ದೇವರ ಕೃಪೆಯು ನಮಗೆ ಯಾವ ಕ್ಷೇತ್ರದಲ್ಲಿ ಕೊಡಲ್ಪಟ್ಟಿದೆಯೋ ನಿಮ್ಮ ಜೀವಿತದಲ್ಲಿ ಅದರಲ್ಲಿ ದೇವರ ಬಲವು ಪರಿಣಾಮಕಾರಿಯಾಗಿ ಕೆಲಸ ಮಾಡುವುದನ್ನು ನೀವು ಗುರುತಿಸಬಹುದು.

ಎಫೆಸದವರಿಗೆ 4:7-11

**ಆದರೆ ಕ್ರಿಸ್ತನು ನಮ್ಮಲ್ಲಿ ಒಬ್ಬೊಬ್ಬನಿಗೆ ಅನುಗ್ರಹಿಸಿದ ಪ್ರಕಾರವೇ ಅವನವನಿಗೆ ಕೃಪಾವರವು ದೊರಕಿದೆ ಆದದರಿಂದ ಆತನು ಉನ್ನತ ಸ್ಥಾನಕ್ಕೆ ಏರಿದಾಗ ತಾನು ಜಯಿಸಿದ್ದ ಬಹು ಜನರನ್ನು ಸೆರೆಹಿಡುಕೊಂಡು ಹೋಗಿ ಮನುಷ್ಯರಿಗೆ ದಾನಗಳನ್ನು ಮಾಡಿದನು ಎಂಬುದಾಗಿ ಪ್ರವಾದಿಯು ಹೇಳುತ್ತಾನೆ. (ಏರಿಹೋದನೆಂದು ಹೇಳಿದ್ದರಲ್ಲಿ ಭೂಮಿಯ ಅಧೋಭಾಗಕ್ಕೆ ಇಳಿದಿದ್ದನೆಂತಲೂ ಹೇಳಿದ ಹಾಗಾಯಿತಲ್ಲಾ ಇಳಿದು ಬಂದವನು ಮೇಲಣ ಎಲ್ಲಾ ಲೋಕಗಳಿಗಿಂತ ಉನ್ನತವಾಗಿ ಏರಿಹೋದವನೇ ಆದುದರಿಂದ ಸಮಸ್ತ ಲೋಕಗಳನ್ನು ತುಂಬಿದವನಾದನು). ಆತನು ಕೆಲವರನ್ನು ಅಪೊಸ್ತಲರನ್ನಾಗಿಯೂ ಕೆಲವರನ್ನು ಪ್ರವಾದಿಗಳನ್ನಾಗಿಯೂ ಕೆಲವರನ್ನು ಸೌವಾರ್ತಿಕರನ್ನಾಗಿಯೂ ಕೆಲವರನ್ನು ಸಭಾಪಾಲಕರನ್ನಾಗಿಯೂ, ಉಪದೇಶಿಗಳನ್ನಾಗಿಯೂ ಅನುಗ್ರಹಿಸಿದನು.**

ಕೆಲವರು ನಿರ್ದಿಷ್ಟ ಸೇವೆಗಾಗಿ / ಹುದ್ದೆಗಳಿಗಾಗಿ ಕರೆಯಲ್ಪಟ್ಟಿದ್ದಾರೆ.
ನಿಮಗೆ ಕೊಡಲ್ಪಟ್ಟ ದೇವರ ಕೃಪೆಯನ್ನು ಗುರುತಿಸಿರಿ.
ನಿಮ್ಮ ಕೃಪೆಯ ವರವು ದೇವರ ಶಕ್ತಿಯನ್ನು ಮತ್ತು ನಿಮ್ಮ ಜೀವಿತಕ್ಕಿರುವ ಆತನ ಉದ್ದೇಶವನ್ನು ಪ್ರಕಟಮಾಡುತ್ತದೆ.

ನೀವು ಯಾವ ಮಾದರಿಯಲ್ಲಿ ರಚಿಸಲ್ಪಟ್ಟಿದ್ದಿರೋ ಅದು ನೀವು ಯಾವುದಕ್ಕಾಗಿ ರಚಿಸಲ್ಪಟ್ಟಿದ್ದಿರಿ ಎಂಬುದನ್ನು ಪ್ರಕಟಮಾಡುತ್ತದೆ.
ದೇವರ ಕೃಪಾವರವು ಪಾಲನೆ ಹೊಂದಬೇಕು, ಪ್ರಗತಿ ಹೊಂದಬೇಕು ಮತ್ತು ಆತನ ಉದ್ದೇಶಗಳನ್ನು ನೆರವೇರಿಸಲು ಉಪಯೋಗಿಸಲ್ಪಡಬೇಕು.

### 2.4.2 ಕೃಪೆ । ಕೆಲಸ

1 ಕೊರಿಂಥದವರಿಗೆ 15:10

**ಆದರೆ ನಾನು ಎಂಥವನಾಗಿದ್ದೇನೋ ದೇವರ ಕೃಪೆಯಿಂದ ಅಂಥವನಾಗಿದ್ದೇನೆ. ನನಗುಂಟಾದ ಆತನ ಕೃಪೆಯು ನಿಷ್ಫಲವಾಗಲಿಲ್ಲ; ನಾನು ಅವರೆಲ್ಲರಿಗಿಂತಲೂ ಹೆಚ್ಚಾಗಿ ಪ್ರಯಾಸಪಟ್ಟೆನು. ಆದರೆ ಪ್ರಯಾಸ ಪಟ್ಟವನು ನಾನಲ್ಲ, ನನ್ನೊಂದಿಗಿರುವ ದೇವರ ಕೃಪೆಯೇ.**

## 2.5 ದೇವರ ಆತ್ಮನ ನಡೆಸುವಿಕೆಯನ್ನು ಗುರುತಿಸುವುದು

ರೋಮಾಪುರದವರಿಗೆ 8:14-16

**ಯಾರಾರು ದೇವರ ಆತ್ಮನಿಂದ ನಡಿಸಿಕೊಳ್ಳುತ್ತಾರೋ ಅವರು ದೇವರ ಮಕ್ಕಳು. ನೀವು ತಿರುಗಿ ಭಯದಲ್ಲಿ ಬೀಳುವ ಹಾಗೆ ದಾಸನ ಭಾವವನ್ನು ಹೊಂದಿದವರಲ್ಲ ಮಗನ ಭಾವವನ್ನು ಹೊಂದಿದವರಾಗಿದ್ದೀರಿ. ಈ ಭಾವದಿಂದ ನಾವು ದೇವರನ್ನು ಅಪ್ಪಾ ತಂದೆಯೇ ಎಂದು ಕೂಗುತ್ತೇವೆ. ನಾವು ದೇವರ ಮಕ್ಕಳಾಗಿದ್ದೇವೆಂಬುದನ್ನು ಪವಿತ್ರಾತ್ಮನೇ ನಮ್ಮ ಆತ್ಮದೊಂದಿಗೆ ಸಾಕ್ಷಿ ಹೇಳುತ್ತಾನೆ.**

ಯೋಹಾನನು 16:13-15

**ಸತ್ಯದ ಆತ್ಮನು ಬಂದಾಗ ಆತನು ನಿಮ್ಮನ್ನು ನಡಿಸಿಕೊಂಡು ಹೋಗಿ ಸಕಲ ವಿಷಯದಲ್ಲಿಯೂ ಸತ್ಯಕ್ಕೆ ಸೇರಿಸುವನು ಆತನು ತನ್ನಷ್ಟಕ್ಕೆ ತಾನೇ ಮಾತಾಡದೆ ಕೇಳಿದ ಮಾತುಗಳನ್ನೇ ಆಡುವನು ; ಮತ್ತು ಮುಂದಾಗುವ ಸಂಗತಿಗಳನ್ನು ನಿಮಗೆ ತಿಳಿಸುವನು ಆತನು ನನ್ನದರೊಳಗಿಂದ ತೆಗೆದುಕೊಂಡು ನಿಮಗೆ ತಿಳಿಸುತ್ತಾ ನನ್ನನ್ನೇ ಮಹಿಮೆಪಡಿಸುವನು ತಂದೆಗೆ ಇರುವದೆಲ್ಲಾ ನನ್ನದು ಆದುದರಿಂದಲೇ ನನ್ನದರೊಳಗಿಂದ ತೆಗೆದುಕೊಂಡು ನಿಮಗೆ ತಿಳಿಸುವೆನೆಂದು ಹೇಳಿದೆನು.**

1 ಕೊರಿಂಥದವರಿಗೆ 2:9,10

**ಆದರೆ ಬರೆದಿರುವ ಪ್ರಕಾರ ದೇವರು ತನ್ನನ್ನು ಪ್ರೀತಿಸುವವರಿಗಾಗಿ ಸಿದ್ದ ಮಾಡಿರುವಂಥದೆಲ್ಲವನ್ನು ಕಣ್ಣು ಕಾಣಲಿಲ್ಲ ಕಿವಿ ಕೇಳಲಿಲ್ಲ ಅದರ ಭಾವನೆಯು ಮನುಷ್ಯನ ಹೃದಯದಲ್ಲಿ ಹುಟ್ಟಲಿಲ್ಲ ನಮಗಾದರೂ ದೇವರು ತನ್ನ ಆತ್ಮನ ಮೂಲಕ ಅದನ್ನು ಪ್ರಕಟಿಸಿದನು. ಆ ಆತ್ಮನು ಎಲ್ಲಾ ವಿಷಯಗಳನ್ನು ದೇವರ ಆಗಾಧವಾದ ವಿಷಯಗಳನ್ನು ಕೂಡ ಪರಿಶೋಧಿಸುವವನಾಗಿದ್ದಾನೆ.**

ಯೋಹಾನ 3:8

**ಗಾಳಿಯು ಮನಸ್ಸು ಬಂದ ಕಡೆ ಬೀಸುತ್ತದೆ. ಅದರ ಸಪ್ಪಳವನ್ನು ಕೇಳುತ್ತೀ ಆದರೆ ಅದು ಎಲ್ಲಿಂದ ಬರುತ್ತದೋ ಎಲ್ಲಿಗೆ ಹೋಗುತ್ತದೋ ನಿನಗೆ ತಿಳಿಯದು ಆತ್ಮನಿಂದ ಹುಟ್ಟಿದವರೆಲ್ಲರೂ ಅದರಂತೆಯೇ ಅಂದನು.**

## 2.5.1 ಪವಿತ್ರಾತ್ಮನು ನಮ್ಮೊಂದಿಗೆ ಹೇಗೆ ಮಾತಾಡುತ್ತಾನೆ?

- ಪವಿತ್ರಾತ್ಮನು ನಮ್ಮ ಆತ್ಮದೊಂದಿಗೆ ಸಾಕ್ಷಿ ಹೇಳುತ್ತಾನೆ.
- ಸಜೀವವಾದ ದೇವರ ಬರೆಯಲ್ಪಟ್ಟ/ನುಡಿದ ವಾಕ್ಯದ ಮೂಲಕ
- ವಿಚಾರಗಳು, ಮುದ್ರೆ (ಗುರುತು) ಮತ್ತು ಚಿತ್ರಗಳು
- ಕನಸು ಮತ್ತು ದರ್ಶನಗಳು
- ಪ್ರವಾದನಾ ವಾಕ್ಯದೊಡನೆ

## 2.5.2 ಪವಿತ್ರಾತ್ಮನೇ ನಮ್ಮೊಂದಿಗೆ ಮಾತಾಡುತ್ತಿದ್ದಾನೆ ಎಂಬುದಾಗಿ ನಮಗೆ ಹೇಗೆ ಗೊತ್ತಾಗುತ್ತದೆ?

ಪವಿತ್ರಾತ್ಮನು ಮಾತಾಡುವಾಗ ಆತನು ಯಾವಾಗಲೂ ಯೇಸುವನ್ನು ಮಹಿಮೆಪಡಿಸುತ್ತಾನೆ. ನೀವು ಪವಿತ್ರಾತ್ಮನಿಂದ ಅಥವಾ ನಿಮ್ಮ ಮನೋಭಾವದಿಂದ ಸತ್ಯವಾಗಿ ಕೇಳುತ್ತಿದ್ದಿರಾ ಎಂಬುದಾಗಿ ತಿಳಿಯುವ ಉತ್ತಮ ಪರೀಕ್ಷೆ ಇದಾಗಿದೆ.

## 2.6 ಪರಿಸ್ಥಿತಿಗಳನ್ನು ಗುರುತಿಸಿರಿ

2 ಪೂರ್ವಕಾಲ ವೃತ್ತಾಂತ 16.9

**ಯೆಹೋವನು ಭೂಲೋಕದ ಎಲ್ಲಾ ಕಡೆಗಳಲ್ಲಿಯೂ ದೃಷ್ಟಿಯನ್ನು ಪ್ರಸರಿಸುತ್ತಾ ತನ್ನ ಕಡೆಗೆ ಯಥಾರ್ಥ ಮನಸ್ಸುಳ್ಳವರ ರಕ್ಷಣೆಗಾಗಿ ತನ್ನ ಪ್ರತಾಪವನ್ನು ತೋರ್ಪಡಿಸುತ್ತಾನೆ. ನೀನು ಈ ಕಾರ್ಯದಲ್ಲಿ ಬುದ್ಧಿಹೀನನಾಗಿ ನಡೆದುಕೊಂಡಿದ್ದೀ, ಇಂದಿನಿಂದ ನಿನಗೆ ಯುದ್ಧಗಳು ಇದ್ದೇ ಇರುವವು ಎಂದು ಹೇಳಿದನು.**

ಕೀರ್ತನೆಗಳು 37:23,24

**ಸತ್ಪುರುಷನ ಗತಿ ಸ್ಥಾಪನೆಯು ಯೆಹೋವನಿಂದಲೇ ಆಗಿದೆ, ಆತನು ಅವನ ಪ್ರವರ್ತನೆಯನ್ನು ಮೆಚ್ಚುತ್ತಾನೆ. ಅವನು ಕೆಳಗೆ ಬಿದ್ದರೂ ಏಳದೆ ಹೋಗುವುದಿಲ್ಲ ಯೆಹೋವನು ಅವನನ್ನು ಕೈಹಿಡಿದು ಉದ್ಧಾರ ಮಾಡುವನು.**

- ದೇವರು ಪರಿಸ್ಥಿತಿಗಳನ್ನು ಮೇಳೈಸುತ್ತಾನೆ. ಆದರೆ ನಾವು ಮತ್ತು ನಾನು ಅದಕ್ಕೆ ಪ್ರತಿಕ್ರಿಯೆ ತೋರಿಸಬೇಕು.
- ದೇವರು ಪರಿಸ್ಥಿತಿಗಳನ್ನು ಮತ್ತು ಘಟನೆಗಳನ್ನು ಆದೇಶಿಸುತ್ತಾನೆ. ಅವುಗಳು ನವುಗಾಗಿರುವ ಆತನ ಯೋಜನೆ ಮತ್ತು ಉದ್ದೇಶದೊಂದಿಗೆ ಸಮರೇಖೆಯಲ್ಲಿರುತ್ತವೆ.
- ನೀವು ಆತನ ಮಾರ್ಗದಲ್ಲಿ ನಡೆಯಬೇಕೆಂಬುದಾಗಿ ಜನರನ್ನು, ಸ್ಥಳಗಳನ್ನು ಮತ್ತು ವಿಷಯಗಳನ್ನು ದೇವರು ಪ್ರವೃತ್ತಿಗೊಳಿಸುತ್ತಾನೆ.
- ಪರಿಸ್ಥಿತಿಗಳನ್ನು ಗ್ರಹಿಸಬೇಕು ಮತ್ತು ಪ್ರತಿಕ್ರಿಯೆ ತೋರಿಸಬೇಕು
- ದೇವರು ನಿಮ್ಮ ಜೀವಿತಗಳಲ್ಲಿ ಆದೇಶಿಸುವ ಪ್ರತಿಯೊಂದು ಪರಿಸ್ಥಿತಿಯು ಸುಲಭ ಅಥವಾ ಮನೋಹರವಾಗಿರುವುದಿಲ್ಲ. ಆದರೆ ಇದು ಯಾವಾಗಲೂ ಶಾಶ್ವತ ಮೌಲ್ಯವನ್ನು ಹೊಂದಿದೆ. ಉದಾಹರಣೆಗೆ, ಸೋಮಾರಿತನವನ್ನು ತೆಗೆದು ಹಾಕುವ ಪರಿಸ್ಥಿತಿಗಳು, ಹಣವನ್ನು ಬುದ್ಧಿವಂತಿಕೆಯಿಂದ ಬಳಸಬೇಕೆಂಬುದಾಗಿ ಬೋಧಿಸುವ, ತಾಳ್ಮೆಯನ್ನು ಬೆಳೆಸುವ ಪರಿಸ್ಥಿತಿಗಳು ಮುಂತಾದವುಗಳು.

ಇಬ್ರಿಯರಿಗೆ 12:5-11

**ಮಕ್ಕಳಿಗೆ ಹೇಳುವಂತೆ ನಿಮಗೆ ಹೇಳಿದ ಎಚ್ಚರಿಕೆಯ ಮಾತನ್ನು ಮರೆತುಬಿಟ್ಟಿದ್ದೀರೋ? ಏನೆಂದರೆ ಮಗನೇ ಕರ್ತನ ಶಿಕ್ಷೆಯನ್ನು ತಾತ್ಸಾರ ಮಾಡಬೇಡ; ಆತನು ನಿನ್ನನ್ನು ಗದರಿಸುವಾಗ ಬೇಸರಗೊಳ್ಳಬೇಡ; ಕರ್ತನು ತಾನು ಪ್ರೀತಿಸುವವನನ್ನೇ ಶಿಕ್ಷಿಸುತ್ತಾನೆ; ತಾನು ಸೇರಿಸಿಕೊಳ್ಳುವ ಪ್ರತಿಯೊಬ್ಬ ಮಗನನ್ನು ಹೊಡೆಯುತ್ತಾನೆ ಎಂಬುದು. ನೀವು ಶಿಕ್ಷಿತರಾಗುವದಕ್ಕಾಗಿಯೇ ನಿಮಗೆ ಶಿಕ್ಷೆಯಾಗುತ್ತದೆಂದು ತಿಳಿದು ಅದನ್ನು ಸಹಿಸಿಕೊಳ್ಳಿರಿ; ದೇವರು ನಿಮ್ಮನ್ನು ಮಕ್ಕಳೆಂದು ನಡಿಸುತ್ತಾನೆ. ತಂದೆಯಿಂದ ಶಿಕ್ಷೆಹೊಂದದ ಮಗನೆಲ್ಲಿ? ಮಕ್ಕಳೆಲ್ಲರೂ ಹೊಂದುವ ಶಿಕ್ಷೆಯು ನಿಮಗುಂಟಾಗದಿದ್ದರೆ ನೀವು ಹಾದರದಿಂದ ಹುಟ್ಟಿದವರೇ ಹೊರತು ಪುತ್ರರಲ್ಲ ಇದು ಮಾತ್ರವಲ್ಲದೇ ನಮ್ಮನ್ನು ಶಿಕ್ಷಿಸಿದಂಥ ಶರೀರ ಸಂಬಂಧವಾದ ತಂದೆಗಳನ್ನು ಸನ್ಮಾನಿಸಿದೆವಷ್ಟೆ ನಮ್ಮ ಆತ್ಮಗಳಿಗೆ ತಂದೆಯಾಗಿರುವಾತನಿಗೆ ನಾವು ಇನ್ನೂ ಹೆಚ್ಚಾಗಿ ಒಳಪಟ್ಟು ಜೀವಿಸಬೇಕಲ್ಲವೇ. ಆ ತಂದೆಗಳು ಕೆಲವು ದಿವಸಗಳ ಪ್ರಯೋಜನವನ್ನು ಲಕ್ಷ್ಯಕ್ಕೆ ತೆಗೆದುಕೊಂಡು ತಮ್ಮ ಮನಸ್ಸಿಗೆ ತೋರಿದಂತೆ ನಮ್ಮನ್ನು ಶಿಕ್ಷಿಸಿದರು; ಆತನಾದರೋ ನಾವು ತನ್ನ ಪರಿಶುದ್ಧತೆಯಲ್ಲಿ ಪಾಲುಗಾರರಾಗಬೇಕೆಂದು ನಮ್ಮ ಹಿತಕ್ಕಾಗಿಯೇ ಶಿಕ್ಷಿಸುತ್ತಾನೆ. ಯಾವ ಶಿಕ್ಷೆಯಾದರೂ ತತ್ಕಾಲಕ್ಕೆ ಸಂತೋಷಕರವಾಗಿ ತೋಚದೆ ದುಃಖಕರವಾಗಿ ತೋಚುತ್ತದೆ; ಆದರೂ ತರುವಾಯ ಅದು ಶಿಕ್ಷೆ ಹೊಂದಿದವರಿಗೆ ನೀತಿಯೆಂಬ ಫಲವನ್ನು ಕೊಟ್ಟು ಮನಸ್ಸಿಗೆ ಸಮಾಧಾನವನ್ನು ಉಂಟು ಮಾಡುತ್ತದೆ.**

ಧರ್ಮೋಪದೇಶಕಾಂಡ 8:1-10

**ನಾನು ಈಗ ನಿಮಗೆ ಬೋಧಿಸುವ ಧರ್ಮೋಪದೇಶವನ್ನೆಲ್ಲಾ ನೀವು ಅನುಸರಿಸಬೇಕು. ಅನುಸರಿಸಿದರೆ ನೀವು ಬದುಕಿಕೊಂಡು ಹೆಚ್ಚಿ ಯೆಹೋವನು ನಿಮ್ಮ ಪಿತೃಗಳಿಗೆ ಪ್ರಮಾಣರೂಪವಾಗಿ ಕೊಟ್ಟ ದೇಶವನ್ನು ಸೇರಿ ಸ್ವಾಧೀನ ಮಾಡಿಕೊಳ್ಳುವಿರಿ. ನಿಮ್ಮ ದೇವರಾದ ಯೆಹೋವನು ನಿಮ್ಮನ್ನು ಈ ನಾಲ್ವತ್ತು ವರುಷ ಅರಣ್ಯದಲ್ಲಿ ನಡಿಸಿದ್ದನ್ನೂ ನೀವು ತನ್ನ ಆಜ್ಞೆಗಳನ್ನು ಕೈಕೊಳ್ಳುವವರೋ ಅಲ್ಲವೋ ಎಂದು ತಿಳಿದುಕೊಳ್ಳುವದಕ್ಕೆ ನಿಮ್ಮನ್ನು ಕಷ್ಟಕ್ಕೆ ಒಳಪಡಿಸಿ ನಿಮ್ಮ ಮನೋಭಾವವನ್ನು ಪರೀಕ್ಷಿಸಿದ್ದನ್ನೂ ನೆನಪಿಗೆ ತಂದುಕೊಳ್ಳಿರಿ. ಮನುಷ್ಯರು ಆಹಾರ ಮಾತ್ರದಿಂದಲ್ಲ, ಯೆಹೋವನ ಬಾಯಿಂದ ಹೊರಡುವ ಪ್ರತಿಯೊಂದು ಮಾತಿನಿಂದಲೂ ಬದುಕುತ್ತಾರೆಂಬದು ನಿಮಗೆ ತಿಳಿಯುವಂತೆ ಆತನು ನಿಮ್ಮನ್ನು ಕಷ್ಟಕ್ಕೆ ಒಳಪಡಿಸಿ ಹಸಿವೆಯಿಂದ ಬಳಲಿಸಿ ನಿಮಗೂ ನಿಮ್ಮ ಪೂರ್ವಿಕರಿಗೂ ಗೊತ್ತಿಲ್ಲದ ಮನ್ನವನ್ನು ಕೊಟ್ಟು ಪೋಷಿಸಿದನು. ಈ ನಾಲ್ವತ್ತು ವರುಷ ನಿಮ್ಮ ಮೈಮೇಲಿದ್ದ ಉಡುಪು ಜೀರ್ಣವಾಗಲಿಲ್ಲ ನಿಮ್ಮ ಕಾಲುಗಳು ಬಾತುಹೋಗಲಿಲ್ಲ ತಂದೆ ಮಗನನ್ನು ಹೇಗೋ ಹಾಗೆಯೇ ನಿಮ್ಮ ದೇವರಾದ ಯೆಹೋವನು ನಿಮ್ಮನ್ನು ಶಿಕ್ಷಿಸುತ್ತಾ ಬಂದನೆಂಬದನ್ನು ನೀವು ಆಲೋಚಿಸಿಕೊಂಡು ಆತನ ಆಜ್ಞೆಗಳನ್ನು ಅನುಸರಿಸುವವರಾಗಿ ಆತನು ಹೇಳಿದ ಮಾರ್ಗದಲ್ಲೇ ನಡೆದು ಆತನಲ್ಲಿ ಭಯಭಕ್ತಿಯುಳ್ಳವರಾಗಿರಬೇಕು. ನಿಮ್ಮ ದೇವರಾದ ಯೆಹೋವನು ಉತ್ತಮದೇಶಕ್ಕೆ ನಿಮ್ಮನ್ನು ಸೇರಿಸುತ್ತಾನೆ. ಆ ದೇಶದ ಹಳ್ಳಗಳಲ್ಲಿ ನೀರು ಯಾವಾಗಲೂ ಹರಿಯುತ್ತದೆ; ಮತ್ತು ತಗ್ಗುಗಳಲ್ಲಾಗಲಿ ಗುಡ್ಡಗಳಲ್ಲಾಗಲಿ ಎಲ್ಲಾ ಕಡೆಯೂ ಬಾವಿಗಳಲ್ಲಿಯೂ ಬುಗ್ಗೆಗಳಿಂದಲೂ ನೀರು ಉಕ್ಕುತ್ತದೆ. ಆ ದೇಶದಲ್ಲಿ ಗೋದಿ ಜವೆಗೋದಿ; ದ್ರಾಕ್ಷೆ, ಅಂಜೂರ, ದಾಳಿಂಬೆ ಇವುಗಳು ಬೆಳೆಯುತ್ತವೆ; ಎಣ್ಣೆ ಮರಗಳೂ ಜೇನೂ ಸಿಕ್ಕುತ್ತದೆ.**

- ನೀವು ಎದುರಿಸುವ ಎಲ್ಲಾ ಕಷ್ಟದ ಪರಿಸ್ಥಿತಿಗಳು ದೇವರಿಂದ ತರಲ್ಪಟ್ಟವುಗಳಲ್ಲ. ಕೆಲವು ನಿಮ್ಮ ಸ್ವಂತ ಕ್ರಿಯೆಗಳ ಕಾರ್ಯದ ಫಲಗಳಾಗಿರುತ್ತವೆ. ಮತ್ತೇ ಕೆಲವು ಇತರ ಜನರ ಕ್ರಿಯೆಗಳ ಫಲಿತಾಂಶವಾಗಿರುತ್ತವೆ. ಇನ್ನೂ ಕೆಲವು ದೆವ್ವದಿಂದ (ದುರಾತ್ಮ) ಏರ್ಪಡಿಸಲ್ಪಟ್ಟಿರುತ್ತವೆ. ನೀವು ಪರಿಸ್ಥಿತಿಗಳನ್ನು ಸೂಕ್ಷ್ಮಗ್ರಹಿಯಾಗಿ ಗ್ರಹಿಸಬೇಕು.
- ನೀವು ಯಾವ ಕೆಟ್ಟ ಪರಿಸ್ಥಿತಿಯನ್ನು ಎದುರಿಸುತ್ತಿರಬಹುದು ಕೆಡುಕಿನ ಕಷ್ಟ ಪರಿಸ್ಥಿತಿಗಳಿರುವುದು ವಿಷಯವಲ್ಲ, ದೇವರು ನಿಮ್ಮ ಜೀವಿತದಲ್ಲಿ ಆತನ ಉದ್ದೇಶದಲ್ಲಿ ನೀವು ಮುಂದೆ ಚಲಿಸಲು ಸಹಾಯ ಮಾಡಲು ಅದನ್ನು ಪುನರ್ ಏರ್ಪಡಿಸುತ್ತಾನೆ. ಉದಾಹರಣೆಗೆ, ಯೋಸೇಫನು (ಆದಿಕಾಂಡ 37:50:15)
- ಪರಿಸ್ಥಿತಿಯನ್ನು ಗುರುತಿಸಿ ಅಥವಾ ಗ್ರಹಿಸಿ ಅದಕ್ಕೆ ಸೂಕ್ತವಾದ ಕ್ರಿಯೆಗಳನ್ನು ತೆಗೆದುಕೊಳ್ಳಿರಿ

ಜ್ಞಾನೋಕ್ತಿಗಳು 4:26 ''ನೀನು ನಡೆಯುವ ದಾರಿಯನ್ನು ಸಮಮಾಡು ನಿನ್ನ ಮಾರ್ಗಗಳೆಲ್ಲಾ ದೃಢವಾಗಿರಲಿ'' ಎಂದು ಹೇಳುತ್ತದೆ.

## 2.7 ದೈವಿಕ ಸಲಹೆ ಮತ್ತು ಜ್ಞಾನಗಳನ್ನು ಗುರುತಿಸಿರಿ

- ಸಲಹೆಯು ಹಿತವಚನ, ಉಪದೇಶ, ನಿನಗೆ ಕೊಡಲ್ಪಟ್ಟ ಜ್ಞಾನವನ್ನು ಹಂಚಿಕೊಳ್ಳುವುದಾಗಿದೆ.
- ಸಲಹೆ ಆಜ್ಞೆಯಲ್ಲ
- ದೈವಿಕ ಸಲಹೆಯು, ಜ್ಞಾನ ಮತ್ತು ಅನುಭವದ ಆಧಾರದ ಮೇಲೆ ದೇವರೊಂದಿಗೆ ಆಳವಾದ, ಬಲವಾದ, ದೃಢವಾದ ಪರೀಕ್ಷಿಸಿಕೊಂಡ ಸಂಬಂಧ ಹೊಂದಿರುವ ಪುರುಷ ಅಥವಾ ಸ್ತ್ರೀಯರಿಂದ ನಿಮಗೆ ಕೊಡಲ್ಪಟ್ಟಿದೆ.

**ಉದಾಹರಣೆ:**

1 ಕೊರಿಂಥದವರಿಗೆ 7:10-14; 25-28 (ವಚನ 10,12,25ನ್ನು ಗಮನಿಸಿ)

**ಮದುವೆ ಮಾಡಿಕೊಂಡಿರುವವರಿಗೆ ನನ್ನ ಅಪ್ಪಣೆ ಮಾತ್ರವಲ್ಲದೆ ಕರ್ತನ ಅಪ್ಪಣೆಯು ಏನೆಂದರೆ - ಹೆಂಡತಿಯು ಗಂಡನನ್ನು ಬಿಟ್ಟು ಅಗಲಬಾರದು, ಒಂದು ವೇಳೆ ಅಗಲಿದರೂ ಪುರುಷ ಸಹವಾಸವಿಲ್ಲದೆ ಇರಬೇಕು, ಇಲ್ಲವೆ ಗಂಡನ ಸಂಗಡ ಸಮಾಧಾನವಾಗಬೇಕು; ಮತ್ತು ಗಂಡನು ಹೆಂಡತಿಯನ್ನು ಬಿಡಬಾರದು ಮಿಕ್ಕಾದವರ ವಿಷಯದಲ್ಲಿ ಕರ್ತನ ಮಾತು ಇಲ್ಲವಾದರೂ ನನ್ನ ಅಭಿಪ್ರಾಯವೇನಂದರೆ - ಒಬ್ಬ ಸಹೋದರನಿಗೆ ಕ್ರಿಸ್ತ ನಂಬಿಕೆಯಿಲ್ಲದ ಹೆಂಡತಿಯಿರಲಾಗಿ ಆಕೆ ಅವನೊಂದಿಗೆ ಒಗತನ ಮಾಡುವದಕ್ಕೆ ಸಮ್ಮತಿಸಿದರೆ ಅವನು ಆಕೆಯನ್ನು ಬಿಡಬಾರದು ಒಬ್ಬ ಸ್ತ್ರೀಗೆ ಕ್ರಿಸ್ತ ನಂಬಿಕೆಯಿಲ್ಲದ ಗಂಡನಿರಲಾಗಿ ಅವನು ಆಕೆಯೊಂದಿಗೆ ಒಗತನ ಮಾಡುವದಕ್ಕೆ ಸಮ್ಮತಿಸಿದರೆ ಆಕೆಯು ಅವನನ್ನು ಬಿಡಬಾರದು. ಯಾಕೆಂದರೆ ಕ್ರಿಸ್ತ ನಂಬಿಕೆಯಿಲ್ಲದ ಗಂಡನು ತನ್ನ ಹೆಂಡತಿಯಲ್ಲಿ ದೇವಜನಕ್ಕೆ ಸಂಬಂಧಪಟ್ಟವನಾದನು; ಮತ್ತು ಕ್ರಿಸ್ತನಂಬಿಕೆಯಿಲ್ಲದ ಹೆಂಡತಿಯು ನಮ್ಮ ಸಹೋದರನಾದ ತನ್ನ ಗಂಡನಲ್ಲಿ ದೇವಜನಕ್ಕೆ ಸಂಬಂಧಪಟ್ಟವಳಾದಳು ಹಾಗಲ್ಲದಿದ್ದರೆ ನಿಮ್ಮ ಮಕ್ಕಳು ಅಪವಿತ್ರರಾಗುತ್ತಿದ್ದರು ಈಗಲಾದರೋ ಅವರು ದೇವಜನರಲ್ಲಿ ಸೇರಿದವರೇ ಆಗಿದ್ದಾರೆ. ಕನ್ನಿಕೆಯರನ್ನು ಕುರಿತು ಕರ್ತನಿಂದ ಬಂದ ಆಜ್ಞೆ ನನಗೆ ಯಾವುದೂ ಇಲ್ಲ; ಆದರೆ ನಂಬಿಗಸ್ತನಾಗಿರುವದಕ್ಕೆ ಕರ್ತನಿಂದ ಕರುಣೆಯನ್ನು ಹೊಂದಿದವನಾಗಿ ನನ್ನ ಅಭಿಪ್ರಾಯವನ್ನು ಹೇಳುತ್ತೇನೆ. ಈಗಿನ ಕಷ್ಟಕಾಲದ ನಿಮಿತ್ತ ಜನರು ಇದ್ದ ಹಾಗೇ ಇರುವುದು ಒಳ್ಳೇದೆಂದು ಭಾವಿಸುತ್ತೇನೆ. ಹೆಂಡತಿಯನ್ನು ಕಟ್ಟಿ ಕೊಂಡಿದ್ದೀಯೋ? ಬಿಡುಗಡೆಯಾಗುವದಕ್ಕೆ ಪ್ರಯತ್ನಿಸಬೇಡ. ಹೆಂಡತಿಯ ಕಟ್ಟಿಲ್ಲದವನಾಗಿದ್ದೀಯೋ? ಹೆಂಡತಿಯನ್ನು ದೊರಕಿಸಿಕೊಳ್ಳುವುದಕ್ಕೆ ಪ್ರಯತ್ನಿಸಬೇಡ ಒಂದು ವೇಳೆ ನೀನು ಮದುವೆ ಮಾಡಿಕೊಂಡರೂ ಪಾಪವಿಲ್ಲ, ಕನ್ನಿಕೆಯು ಮದುವೆ ಮಾಡಿಕೊಂಡರೂ ಪಾಪವಿಲ್ಲ ಆದರೆ ಮದುವೆ ಮಾಡಿಕೊಂಡವರಿಗೆ ಶರೀರ ಸಂಬಂಧವಾಗಿ ಕಷ್ಟ ಸಂಭವಿಸುವದು; ಇದು ನಿಮಗೆ ಉಂಟಾಗಬಾರದೆಂದು ನನ್ನ ಅಪೇಕ್ಷೆ.**

- ಸಲಹೆಗಳನ್ನು ಪಡೆಯುವುದರ ಮೌಲ್ಯ

ಜ್ಞಾನೋಕ್ತಿಗಳು 5:23

**ಸದುಪದೇಶದ ಕೊರತೆಯಿಂದಲೇ ಸಾಯುವನು, ತನ್ನ ಅತಿ ಮೂರ್ಖತನದಿಂದ ಭ್ರಾಂತನಾಗುವನು**

ಜ್ಞಾನೋಕ್ತಿಗಳು 10:17

**ಶಿಕ್ಷೆಯನ್ನು ಕೈಗೊಳ್ಳುವವನು ಜೀವದ ಮಾರ್ಗವನ್ನು ತೋರಿಸುವನು, ಗದರಿಕೆಯನ್ನು ಕೈಕೊಳ್ಳದವನು ಸನ್ಮಾರ್ಗದಿಂದ ತಪ್ಪಿಸುವನು.**

ಜ್ಞಾನೋಕ್ತಿಗಳು 11:14

**ಉಚಿತಾಲೋಚನೆಯಿಲ್ಲದ ಕಡೆ ಪ್ರಜೆಯು ಬಿದ್ದು ಹೋಗುವದು; ಬಹು ಸುಮಂತ್ರಿಗಳು ಇರುವಲ್ಲಿ ಸುರಕ್ಷಣೆಯಿರುವದು.**

ಜ್ಞಾನೋಕ್ತಿಗಳು 15:22

**ಯೋಚನೆ ಹೇಳುವವರಿಲ್ಲದೆ ಉದ್ದೇಶಗಳು ನೆರವೇರವು, ಬಹು ಮಂದಿ ಆಲೋಚನಾಪರರಿರುವಲ್ಲಿ ಈಡೇರುವವು**

ಜ್ಞಾನೋಕ್ತಿಗಳು 20:18

**ಉದ್ದೇಶಗಳು ಮಂತ್ರಾಲೋಚನೆಯಿಂದ ನೆರವೇರುವವು; ಮಂತ್ರಾಲೋಚನೆಯಿಂದಲೇ ಯುದ್ದವನ್ನು ನಡಿಸು**

ಜ್ಞಾನೋಕ್ತಿಗಳು 24:6

**ಮೂಢನ ಮೂಲಕ ಮಾತನ್ನು ಹೇಳಿ ಕಳುಹಿಸುವವನು ತನ್ನ ಕಾಲುಗಳನ್ನು ತಾನೇ ಕಡಿದುಕೊಂಡು ಕೇಡನ್ನು ಕುಡಿಯುವನು.**

- ದೇವರು ನಿಮ್ಮ ಜೀವಿತಕ್ಕೆ ದೈವಿಕ ಜನರನ್ನು ಇರಿಸಿ ನಿಮ್ಮ ಜೀವಿತಕ್ಕಿರುವ ಆತನ ಯೋಜನೆ ಮತ್ತು ಉದ್ದೇಶದ ಮಾರ್ಗದರ್ಶನದ ಸಹಾಯಕ್ಕಾಗಿ ಅವರನ್ನು ಸಲಹೆ ನೀಡಲು ಉಪಯೋಗಿಸಬಹುದು.
- ಸಲಹೆಗಳನ್ನು ಪಡೆಯುವುದರಲ್ಲಿ ತಗ್ಗಿಸಿಕೊಂಡವರಾಗಿರಿ

**ಉದಾಹರಣೆಗೆ**: ಮೋಶೆ ಮತ್ತು ಇತ್ರೋವನು (ವಿಮೋಚನಾ ಕಾಂಡ 18:13-27)

**ಮೂರು ಬಗೆಯ ಸಲಹೆಗಳು:**

### 2.7.1 ಒಬ್ಬ ವ್ಯಕ್ತಿಯ ತಿಳುವಳಿಕೆ ಮತ್ತು ಅನುಭವದ ಆಧಾರದ ಮೇಲಿನ ಸಲಹೆಗಳು

- ನೀವು ಯಾರಿಂದ ಸಲಹೆಗಳನ್ನು ಪಡೆದುಕೊಳ್ಳುತ್ತೀರಿ ಅನ್ನುವುದರಲ್ಲಿ ಜಾಗರೂಕರಾಗಿರಿ

ಕೀರ್ತನೆಗಳು 1:1

**ಯಾವನು ದುಷ್ಟರ ಆಲೋಚನೆಯಂತೆ ನಡೆಯದೆ ಪಾಪಾತ್ಮರ ಮಾರ್ಗದಲ್ಲಿ ನಿಂತುಕೊಳ್ಳದೇ ಧರ್ಮನಿಂದಕರೊಡನೆ ಕೂತು ಕೊಳ್ಳದೆ ... ಅವನು ಎಷ್ಟೋ ಧನ್ಯನು.**

### 2.7.2. ಬರೆಯಲ್ಪಟ್ಟ ದೇವರ ವಾಕ್ಯದ ಮೇಲೆ ಆಧಾರಿತಕೊಂಡ ಸಲಹೆ

### 2.7.3 ಪ್ರವಾದನೆ ಪ್ರೇರಣೆಗಳ ಮೇಲೆ ಆಧಾರಿತಗೊಂಡ ಸಲಹೆ

- ಮೊದಲನೆಯದು ಮತ್ತು ಮೂರನೆಯದು ಪರೀಕ್ಷಿಸಲ್ಪಡಬೇಕು ಪ್ರಮಾಣೀಕರಿಸಲ್ಪಡಬೇಕು ಮತ್ತು ವಿವರಿಸಲ್ಪಡಬೇಕು.
- ಪ್ರವಾದಿಯು ಹೇಳುವ ಪ್ರತಿಯೊಂದು ಸಹ ಪ್ರವಾದನೆಯಾಗಿರುವುದಿಲ್ಲ.

1 ಪೂರ್ವಕಾಲ ವೃತ್ತಾಂತ 17:1-5

**ದಾವೀದನು ತನ್ನ ಅರಮನೆಯಲ್ಲಿ ವಾಸಿಸುತ್ತಿದ್ದಾಗ ಒಂದು ದಿವಸ ಪ್ರವಾದಿಯಾದ ನಾತಾನನಿಗೆ ನೋಡು ನಾನು ದೇವದಾರುಮರದ ಮನೆಯಲ್ಲಿ ವಾಸವಾಗಿದ್ದೇನೆ; ಯೆಹೋವನ ನಿಂಬಂಧನ ಮಂಜೂಷವಾದರೋ ಬಟ್ಟೆಯ ಮನೆಯಲ್ಲಿ ಇರುತ್ತದೆ ಎಂದು ಹೇಳಿದನು ನಾತಾನನು ದಾವೀದನಿಗೆ - ಮನಸ್ಸಿದ್ದಂತೆ ಮಾಡು, ದೇವರು ನಿನ್ನ ಸಂಗಡ ಇರುತ್ತಾನೆ ಅಂದನು. ಅದೇ ರಾತ್ರಿಯಲ್ಲಿ ದೇವರು ನಾತಾನನಿಗೆ ಆಜ್ಞಾಪಿಸಿದ್ದೇನೆಂದರೆ - ಹೋಗಿ ನನ್ನ ಸೇವಕನಾದ ದಾವೀದನಿಗೆ ನೀನು ನನಗೆ ಆಲಯವನ್ನು ಕಟ್ಟಬಾರದು, ನಾನು ಇಸ್ರಾಯೇಲ್ಯರನ್ನು (ಐಗುಪ್ತದೇಶದಿಂದ) ಬರಮಾಡಿದಂದಿನಿಂದ ಇಂದಿನವರೆಗೂ ಮನೆಯಲ್ಲಿ ವಾಸಮಾಡಲಿಲ್ಲ; ಗುಡಾರಗಳಲ್ಲಿ ವಾಸಿಸುತ್ತಾ ಇದ್ದೆನು. ಎಂದು ಹೇಳು ಅಂದನು.**

## 2.8 ಸಮಯಗಳನ್ನು ಮತ್ತು ಋತುಗಳನ್ನು ಗುರುತಿಸಿರಿ

- ದೇವರು ಒಂದು ಕ್ಯಾಲೆಂಡರ್ ಹೊಂದಿದ್ದಾನೆ. ಆತನ ಕಾಲ ನಿಯಮಕ ಪಟ್ಟಿಯನ್ನು ಸಹ ಹೊಂದಿದ್ದಾನೆ, ಆತನ ಕ್ಯಾಲೆಂಡರ್ ಪ್ರಕಾರವಾಗಿ ದೇವರು ಕೆಲಸಮಾಡುತ್ತಾನೆ.
- ದೇವರು, ತಾನು ಮಾಡುವಂತಹ ವಿಷಯಗಳಿಗೆ ತನ್ನದೇ ಆದ ನೇಮಿತ ಸಮಯ ಮತ್ತು ಋತುಗಳನ್ನು ಹೊಂದಿದ್ದಾನೆ.

ಆದಿಕಾಂಡ 3:15 — "**ನಿನಗೂ ಈ ಸ್ತ್ರೀಗೂ ನಿನ್ನ ಸಂತಾನಕ್ಕೂ ಈ ಸ್ತ್ರೀ ಸಂತಾನಕ್ಕೂ ಹಗೆತನವಿರುವ ಹಾಗೆ ಮಾಡುವೆನು ಈಕೆಯ ಸಂತಾನವು ನಿನ್ನ ತಲೆಯನ್ನು ಜಜ್ಜುವುದು, ನೀನು ಅದರ ಹಿಮ್ಮಡಿಯನ್ನು ಕಚ್ಚುವಿ**" → (4000 ವರ್ಷಗಳು) → ಗಲಾತ್ಯದವರಿಗೆ 4:4 — "**ಆದರೆ ಕಾಲವು ಪರಿಪೂರ್ಣವಾದಾಗ ದೇವರು ತನ್ನ ಮಗನನ್ನು ಕಳುಹಿಸಿಕೊಟ್ಟನು ಧರ್ಮಶಾಸ್ತ್ರಾಧೀನರಾದವರನ್ನು ವಿಮೋಚಿಸಬೇಕೆಂತಲೂ ಪುತ್ರರ ಪದವಿಯನ್ನು ನಮಗೆ ದೊರಕಿಸಬೇಕೆಂತಲೂ ಆತನು ಸ್ತ್ರೀಯಲ್ಲಿ ಹುಟ್ಟಿದವನಾಗಿಯೂ ಧರ್ಮಶಾಸ್ತ್ರಧೀನನಾಗಿಯೂ ಬಂದನು.**"

- ದೇವರು ನಿಮ್ಮ ಜೀವಿತಗಳಿಗೆ ಆತನ ಸಮಯ ಮತ್ತು ಋತುಗಳನ್ನು ಹೊಂದಿದ್ದಾನೆ.

ಕೀರ್ತನೆಗಳು 31:15
**ನನ್ನ ಆಯುಷ್ಕಾಲವು ನಿನ್ನ ಕೈಯಲ್ಲಿದೆ; ಹಿಂದಟ್ಟುವ ಶತ್ರುಗಳಿಗೆ ನನ್ನನ್ನು ತಪ್ಪಿಸಿ ಕಾಪಾಡು**

ಪ್ರಸಂಗಿ 3:1,11
**ಪ್ರತಿಯೊಂದು ಕಾರ್ಯಕ್ಕೂ ಕಾಲವು ಕ್ಲುಪ್ತವಾಗದೆ; ಆಕಾಶದ ಕೆಳಗೆ ನಡೆಯುವ ಒಂದೊಂದು ಕೆಲಸಕ್ಕೂ ತಕ್ಕ ಸಮಯವುಂಟು. ಒಂದೊಂದು ವಸ್ತುವನ್ನು ಸಮಯಕ್ಕೆ ತಕ್ಕ ಹಾಗೆ ಅಂದವಾಗಿ ನಿರ್ಮಿಸಿದ್ದಾನೆ. ಇದಲ್ಲದೆ ಮನುಷ್ಯರ ಹೃದಯದಲ್ಲಿ ಅನಂತ ಕಾಲದ ಯೋಚನೆಯನ್ನು ಇಟ್ಟಿದ್ದಾನೆ; ಆದರೂ ದೇವರು ಆದ್ಯಂತವಾಗಿ ನಡಿಸುತ್ತಿರುವ ಕೆಲಸವನ್ನು ಅವರು ಗ್ರಹಿಸಲಾರದಂತೆ ಮಾಡಿದ್ದಾನೆ.**

ಪ್ರಸಂಗಿ 8:5,6
**ಆಜ್ಞೆಯನ್ನು ಕೈಕೊಳ್ಳುವವನು ಕೇಡನ್ನು ಅನುಭವಿಸನು; ಕಾಲವೂ ನ್ಯಾಯತೀರ್ಪೂ ಉಂಟೆಂಬದು ಜ್ಞಾನಿಯ ಬುದ್ದಿಗೆ ಗೊತ್ತು ಪ್ರತಿಯೊಂದು ಕಾರ್ಯಕ್ಕೆ ಕಾಲವೂ ನ್ಯಾಯತೀರ್ಪೂ ಇರುವವಲ್ಲವೆ; ಮನುಷ್ಯನು ಪಡುವ ಕಷ್ಟವು ಅವನಿಗೆ ಘೋರವಾಗಿದೆ.**

- ಪ್ರತಿಯೊಂದು ಋತುವು ತನ್ನದೇ ಆದ ನೇಮಿತ ಕಾರಣ ಹೊಂದಿದೆ
- ನಾವೀರುವ ಜೀವಿತದ ಋತುವನ್ನು ನಾವು ಯಾವಾಗ ಗುರುತಿಸುತ್ತೇವೋ ಆಗ ದೇವರ ಉದ್ದೇಶಗಳನ್ನು ಗುರುತಿಸಲು ಸುಲಭವಾಗಿಬಿಡುತ್ತದೆ.

1 ಪೂರ್ವಕಾಲ ವೃತ್ತಾಂತ 12:32
**ಇಸ್ಸಾಕಾರ್ಯರಿಂದ ಇನ್ನೂರು ಮಂದಿ ಮುಖ್ಯಸ್ಥರು; ಇವರು ಸಮಯೋಚಿತ ಜ್ಞಾನವುಳ್ಳವರಾಗಿ ಇಸ್ರಾಯೇಲ್ಯರು ಮಾಡತಕ್ಕದ್ದನ್ನು ಅರಿತವರು; ಇವರ ಸಹೋದರರೆಲ್ಲರೂ ಇವರ ಆಜ್ಞೆಗೆ ಒಳಗಾಗಿದ್ದರು.**

- ಪ್ರಸಕ್ತದಲ್ಲಿ ನೀವಿರುವಂತಹ ಋತುವಿನಲ್ಲಿ ದೇವರ ನೇಮಿತ ಉದ್ದೇಶಗಳನ್ನು ನೆರವೇರಿಸಿರಿ. ಆಮೇಲೆ ಆತನು ನಿಮ್ಮನ್ನು ಮುಂದಿನ ಋತುವಿನ ಜೀವಿತಕ್ಕೆ ಕೊಂಡೊಯ್ಯುತ್ತಾನೆ.

**ಉದಾಹರಣೆಗೆ**

- ಅಸ್ತಿವಾರ ಸ್ಥಾಪನೆಯ ಒಳಪಡುವ ಋತುಗಳು:
  - ♦ ಅಗೆಯುತ್ತಿರುವುದು, ಕಟ್ಟದೇ ಇರುವುದು
  - ♦ ಮೋಹಕ ಲಾವಣ್ಯವಿಲ್ಲ, ಬರೀ ಪರಿಶ್ರಮದ ಕೆಲಸ
  - ♦ ಹೊಗಳಿಕೆ ಇಲ್ಲಾ, ಬರೀ ಪ್ರೇಕ್ಷಕರು.
- ಧ್ಯೇಯಗಳು ಚಿತ್ತಗೋಚರವಾದವುಗಳು:
  - ♦ ಬಲವಾದ ಅಸ್ತಿವಾರ
  - ♦ ಆಳವಾದ ಅಸ್ತಿವಾರ
  - ♦ ನೀವು ವಿಸ್ತರಿಸಲು ಅವಕಾಶ ನೀಡುವ ಅಸ್ತಿವಾರ
- ಸುರಂಗ ಋತು

  ನೀವು ಸುರಂಗಮಾರ್ಗವಾಗಿ ಹೋಗುವಾಗ ಮುಂದೆ ಒಂದೇ ಮಾರ್ಗ ಮಾತ್ರವಿರುತ್ತದೆ. ಮುಂದುವರಿಕೆ, ಎಡಗಡೆಯ ಬಲಗಡೆಯ ಮಾರ್ಗವಿಲ್ಲ ಹಿಂತುರುಗಿ ಹೋಗಲೂ ಆಗುವುದಿಲ್ಲ ಇದು ಕತ್ತಲೆಯಾಗಿದೆ. 'ಕಣ್ಣಿನ ನಂಬಿಕೆ' ಎಂಬ ಬೆಳಕನ್ನು ಮಾತ್ರ ನೀವು ಹೊಂದಿರುತ್ತೀರಿ. ಅಲ್ಲಿ ಕದಲಿಸಲು ಪರ್ವತಗಳಿರುವುದಿಲ್ಲ ಇದರಿಂದ ಹೊರಬರುವುದೆಂದರೆ ಇದರೊಳಗೆ ಹೋಗುವುದೊಂದೇ ಮಾರ್ಗ. ನಂಬಿಗಸ್ತರಾಗಿರಿ!
- ಬರೀ ಸಾಕಾಗುವಷ್ಟು ಋತು ಮತ್ತು ಸಮೃದ್ಧಿ ಸುಗ್ಗಿ
- ದುಃಖ ಮತ್ತು ಸಂಕಟಗಳ ಋತು
- ಶೋಧನೆಗಳು ಮತ್ತು ಸವಾಲುಗಳ ಸಮಯ
- ತಾಯ್ತನದ ಋತು

ಬೇರೆ ವ್ಯಕ್ತಿಯು ಇರುವ ಜೀವಿತದ ಋತುವನ್ನು ನಾವು ಗೌರವಿಸಲು ಕಲಿಯಬೇಕು.

## 2.9 ದೇವರು ಕಾರ್ಯಮಾಡುವ ಮಾದರಿಯನ್ನು ಗುರುತಿಸಿರಿ

ದೇವರು ನಾವು ಹಿಂಬಾಲಿಸಲು ಬೇಕಾದ ಉದಾಹರಣೆಗಳನ್ನು ಆದರ್ಶಗಳನ್ನು, ಚೌಕಟ್ಟುಗಳನ್ನು ಮತ್ತು ಮಾದರಿಗಳನ್ನು ಸ್ಥಾಪಿಸುವ ''ಹವ್ಯಾಸ''ದಲ್ಲಿದ್ದಾನೆ.

ನಮ್ಮ ಜೀವಿತಗಳಲ್ಲಿ ನಾವು ಕಾರ್ಯ ಮಾಡಬೇಕಾದ ಮಾದರಿಯನ್ನು ದೇವರು ತೋರಿಸುತ್ತಾನೆಂಬುದಾಗಿ ನಾನು ನಂಬುತ್ತೇನೆ.

1 ತಿಮೊಥೆಯನಿಗೆ 1:15,16

**ಕ್ರಿಸ್ತ ಯೇಸು ಪಾಪಿಗಳನ್ನು ರಕ್ಷಿಸುವದಕ್ಕೋಸ್ಕರ ಈ ಲೋಕಕ್ಕೆ ಬಂದನು ಎಂಬ ವಾಕ್ಯವು ನಂಬತಕ್ಕದ್ದಾಗಿಯೂ ಸರ್ವಾಂಗೀಕಾರಕ್ಕೆ ಯೋಗ್ಯವಾದದ್ದಾಗಿಯೂ ಅದೆ; ಆ ಪಾಪಿಗಳಲ್ಲಿ ನಾನೇ ಮುಖ್ಯನು ಆದರೆ ಇನ್ನು ಮುಂದೆ ನಿತ್ಯ ಜೀವಕ್ಕಾಗಿ ತನ್ನ ಮೇಲೆ ನಂಬಿಕೆಯಿಡುವವರಿಗೆ ತನ್ನ ದೀರ್ಘಶಾಂತಿಯ ದುಷ್ಟಾಂತವಿರಬೇಕೆಂದು ಕ್ರಿಸ್ತ ಯೇಸು ಮುಖ್ಯ ಪಾಪಿಯಾದ ನನ್ನನ್ನು ಕರುಣಿಸಿ ನನ್ನಲ್ಲಿ ತನ್ನ ಪೂರ್ಣ ದೀರ್ಘಶಾಂತಿಯನ್ನು ತೋರ್ಪಡಿಸಿದನು.**

ಅಬ್ರಹಾಂನ ನಂಬಿಕೆಯ ಹೆಜ್ಜೆ ಜಾಡಿನಲ್ಲಿ ನಾವು ನಡೆಯುತ್ತೇವೆ.

ರೋಮಾಪುರದವರಿಗೆ 4:11,12

**ಆಮೇಲೆ ಸುನ್ನತಿಯೆಂಬ ಸಂಸ್ಕಾರವನ್ನು ಗುರುತಾಗಿ ಹೊಂದಿದ್ದನು. ಇದು ಸುನ್ನತಿಯಾಗುವದಕ್ಕೆ ಮೊದಲೇ ಅವನಿಗಿದ್ದ ನಂಬಿಕೆಯಿಂದಾದ ನೀತಿಗೆ ಮುದ್ರೆಯಾಗಿತ್ತು. ಹೀಗಿರುವದರಿಂದ ಅವನು ನಂಬುವವರೆಲ್ಲರಿಗೂ ಅವರು ಸುನ್ನತಿಯಿಲ್ಲದವರಾದಾಗ್ಯೂ ಮೂಲ ತಂದೆಯಾದನು ಅವರೂ ನೀತಿವಂತರೆಂದು ಎಣಿಸಲ್ಪಡುವರು ಇದಲ್ಲದೆ ಸುನ್ನತಿಯವರಲ್ಲಿ ಯಾರಾರು ಸುನ್ನತಿ ಹೊಂದಿದ್ದಲ್ಲದೆ ನಮ್ಮ ಪಿತೃವಾಗಿರುವ ಅಬ್ರಹಾಮನಿಗೆ ಸುನ್ನತಿಯಾಗುವದಕ್ಕೆ ಮುಂಚೆ ಇದ್ದ ನಂಬಿಕೆಯ ಹೆಜ್ಜೆಗಳನ್ನು ಹಿಡಿದು ನಡೆಯುತ್ತಾರೋ ಅವರಿಗೆ ಸಹ ಮೂಲ ತಂದೆಯಗಿದ್ದಾನೆ.**

ಇತರ ಜನರ ಜೀವಿತಗಳು ನಮಗೆ ಉದಾಹರಣೆಯಾಗಿ ನಿಂತಿವೆ.

ಯಾಕೋಬನು 5:10,11

**ಸಹೋದರರೇ, ಕರ್ತನ ಹೆಸರಿನಿಂದ ಮಾತಾಡಿದ ಪ್ರವಾದಿಗಳನ್ನೇ ಮಾದರಿ ಮಾಡಿಕೊಳ್ಳಿರಿ ತಾಳಿಕೊಂಡಿರುವವರನ್ನು ಧನ್ಯರೆಂದು ಹೇಳುತ್ತೇವಲ್ಲವೇ; ನೀವು ಯೋಬನಲ್ಲಿದ್ದ ತಾಳ್ಮೆಯ ವಿಷಯವಾಗಿ ಕೇಳಿ ಕರ್ತನು ಅವನಿಗೆ ಅಂತ್ಯದಲ್ಲಿ ಮಾಡಿದ್ದನ್ನು ನೋಡಿ ಕರ್ತನು ಕರುಣಾಸಾಗರನೂ ದಯಾಳುವೂ ಆಗಿದ್ದಾನೆಂದು ತಿಳಿದಿದ್ದೀರಷ್ಟೆ**

1 ಕೊರಿಂಥದವರಿಗೆ 10:5,11

**ಆದರೂ ಅವರೊಳಗೆ ಬಹುಮಂದಿಯ ವಿಷಯದಲ್ಲಿ ದೇವರು ಸಂತೋಷಿಸಲಿಲ್ಲ. ಅವರು ಅಡವಿಯಲ್ಲಿ ಸಂಹರಿಸಲ್ಪಟ್ಟರೆಂದು ಬರೆದಿದೆಯಷ್ಟೆ. [11]ಅವರಿಗೆ ಸಂಭವಿಸಿದ ಈ ಸಂಗತಿಗಳು ನಿದರ್ಶನರೂಪವಾಗಿವೆ ಮತ್ತು ಯುಗಾಂತ್ಯಕ್ಕೆ ಬಂದಿರುವವರಾಗಿ ನಮಗೆ ಬುದ್ಧಿವಾದಗಳಾಗಿ ಬರೆದಿವೆ.**

# 3

# ದೇವರ ಸಿದ್ಧತೆಯ ಕಾರ್ಯಗತಿಯನ್ನು ಅರ್ಥಮಾಡಿಕೊಳ್ಳುವದು

ದೇವರು ತಾನು ಉಪಯೋಗಿಸುವವರನ್ನು ಪ್ರಗತಿಪರ ರೀತಿಯಲ್ಲಿ ಸಿದ್ಧಗೊಳಿಸುತ್ತಾನೆ.

## 3.1 ಸಿದ್ಧತೆಯ ಕಾರ್ಯಗತಿಯ ಮೂಲಕ ದೇವರು ಏನನ್ನು ಸಾಧಿಸಲು ಅಪೇಕ್ಷಿಸುತ್ತಾನೆ?

2 ತಿಮೊಥೆಯನಿಗೆ 2:19-21

**ಆದರೂ ದೇವರ ಸ್ಥಿರವಾದ ಅಸ್ತಿವಾರವು ನಿಲ್ಲುತ್ತದೆ ಅದರ ಮೇಲೆ ತನ್ನವರು ಯಾರಾರೆಂಬದನ್ನು ಕರ್ತನು ತಿಳಿದಿದ್ದಾನೆಂತಲೂ ಕರ್ತನ ನಾಮವನ್ನು ಹೇಳಿಕೊಳ್ಳುವವರೆಲ್ಲರು ದುರ್ಮಾರ್ಗತನವನ್ನು ಬಿಟ್ಟು ಬಿಡಬೇಕೆಂತಲೂ ಲಿಪಿಯುಂಟು ದೊಡ್ಡ ಮನೆಯಲ್ಲಿ ಬೆಳ್ಳಿ ಬಂಗಾರದ ಪಾತ್ರೆಗಳಲ್ಲದೆ ಮರದ ಪಾತ್ರೆಗಳೂ, ಮಣ್ಣಿನ ಪಾತ್ರೆಗಳೂ ಇರುತ್ತವೆ. ಅವುಗಳಲ್ಲಿ ಕೆಲವು ಉತ್ತಮವಾದ ಬಳಕೆಗೂ ಕೆಲವು ಹೀನವಾದ ಬಳಕೆಗೂ ಬರುತ್ತವೆ. ಹೀಗಿರಲಾಗಿ ಒಬ್ಬನು ಹೀನ ನಡತೆಯುಳ್ಳವರ ಸಹವಾಸವನ್ನು ಬಿಟ್ಟು ತನ್ನನ್ನು ಶುದ್ಧಮಾಡಿಕೊಂಡರೆ ಅವನು ಉತ್ತಮವಾದ ಬಳಕೆಗೆ ಯೋಗ್ಯನಾಗಿರುವನು; ಅವನು ದೇವರ ಸೇವೆಗೆ ಪ್ರತಿಷ್ಠಿತನಾಗಿಯೂ ಯಜಮಾನನಿಗೆ ಉಪಯುಕ್ತನಾಗಿಯೂ ಸಕಲ ಸತ್ಕ್ರಿಯೆಗಳನ್ನು ಮಾಡುವದಕ್ಕೆ ಸಿದ್ಧನಾಗಿಯೂ ಇರುವನು.**

- ದೇವರು ನಿಮ್ಮನ್ನು ಗೌರವಾನ್ವಿತ (ಗ್ರೀಕ್‌ನಲ್ಲಿ ಮಹತ್ವ, ಪ್ರತಿಷ್ಟೆ, ಘನತೆ), ಪಾತ್ರೆಯಾಗಿ (ಗ್ರೀಕ್‌ನಲ್ಲಿ ಉಪಕರಣ, ಸಾಧನ ಸಲಕರಣೆಗಳು) ರೂಪಿಸಲು ಅಪೇಕ್ಷಿಸುತ್ತಾನೆ.
- ನೀವು ಆತನಿಗೋಸ್ಕರ ಮುಡುಪಾಗಿ ಪವಿತ್ರವಾಗಿರಬೇಕೆಂಬುದಾಗಿ ಶುದ್ಧಿಕರಿಸಲ್ಪಟ್ಟಿರಬೇಕೆಂಬುದಾಗಿ (ಗ್ರೀಕ್‌ನಲ್ಲಿ ಪರಿಶುದ್ಧ, ಪವಿತ್ರಗೊಂಡ) ದೇವರು ಅಪೇಕ್ಷಿಸುತ್ತಾನೆ.
- ಗುರುವಿನ ಉಪಯೋಗಕ್ಕೆ ನೀವು ತಕ್ಕವನಾಗಿರಬೇಕೆಂದು (ಗ್ರೀಕ್‌ನಲ್ಲಿ ಉಪಯುಕ್ತ, ಲಾಭಕರ, ಒಪ್ಪುವ) ದೇವರು ಅಪೇಕ್ಷಿಸುತ್ತಾನೆ.

- ಪ್ರತಿಯೊಂದು ಒಳ್ಳೆಯ ಕಾರ್ಯಕ್ಕಾಗಿ ನೀವು ಸಿದ್ಧಗೊಂಡಿರುವವನಾಗಿರಬೇಕು (ಗ್ರೀಕ್‌ನಲ್ಲಿ ಸಿದ್ಧಗೊಂಡ)ಎಂಬುದಾಗಿ ದೇವರು ಅಪೇಕ್ಷಿಸುತ್ತಾನೆ.

ದೇವರ ಸಿದ್ಧತೆಯ ವಿಧಾನವು ನಿರಂತರವಾಗಿರುತ್ತದೆ. ಪ್ರತಿಯೊಂದು ಜೀವಿತದ ಹಂತದಲ್ಲೂ ಆತನು ಮುಂದಿನ ಹಂತಕ್ಕಾಗಿ ನಿಮ್ಮನ್ನು ಸಿದ್ಧಮಾಡುತ್ತಿರುತ್ತಾನೆ.

ನಾವು ಸಿದ್ಧತೆಯ ವಿಧಾನದ ಮೂಲಕವಾಗಿ ದೇವರೊಡನೆ ಸಹಕರಿಸಲು ಮತ್ತು ಕೆಲಸಮಾಡಲು ಕಲಿಯಬೇಕು.

## ಪರಿಶುದ್ಧ ಗ್ರಂಥದಿಂದ ಕೆಲವು ಉದಾಹರಣೆಗಳು:

### ಮೋಶೆ (ಅಪೊಸ್ತಲರ ಕೃತ್ಯಗಳು 7:20-34)

- ಮೋಶೆಯು ಫರೋಹನ ಅರಮನೆಯಲ್ಲಿ ವಿದ್ಯಾಭ್ಯಾಸ ಮತ್ತು ತರಭೇತಿ ಹೊಂದುವಂತೆ ದೇವರು ಅತ್ಯದ್ಭುತವಾಗಿ ಏರ್ಪಾಟು ಮಾಡಿದನು. ಇದು ಮೋಶೆಯ ಜೀವಿತದಲ್ಲಿನ ದೇವರ ''ಆತ್ಮಿಕ ವಿಧಾತದ ಬೀಜ''ವಾಗಿತ್ತು ಅ.ಕೃ.7.22 ಇವುಗಳು ಮೋಶೆಯ ಅವನ ಪರಲೋಕದ ಉದ್ದೇಶದ ಸ್ಥಾನಕ್ಕಾಗಿ. ಪ್ರಾರಂಭಿಕ ಸಿದ್ಧತೆಯಾಗಿತ್ತು
- ಮೋಶೆಯು ನಲ್ವತ್ತು (40) ನೇ ವರ್ಷದಲ್ಲಿ ಅವನ ದೈವಿಕ ಉದ್ದೇಶವನ್ನು ಅರ್ಥಮಾಡಿಕೊಳ್ಳಲು ಪ್ರಾರಂಭಿಸಿದನು. ಹಾಗಿದ್ದರೂ, ತನ್ನ ಸ್ವಂತ ಪದ್ದತಿಗಳ ಮೂಲಕ ಅವುಗಳನ್ನು ನೆರವೇರಿಸುವ ಪ್ರಯತ್ನದ ತಪ್ಪನ್ನು ಮಾಡಿದನು.
- ಪ್ರತಿಯೊಂದು ಬಾರಿಯೂ ನಾವು, ನಮ್ಮ ಸ್ವಂತ ಯೋಗ್ಯತೆಗಳಿಂದ ಏನಾದರೊಂದನ್ನು ಮಾಡಲು ಪ್ರಯತ್ನಿಸುತ್ತೇವೆ. ಆಗ ನಾವು ಮುಂದೆ ದೇವರ ವಿಸ್ತರಿಸುವ ಯೋಜನೆಯನ್ನು ನಿಧಾನ ಮಾಡುತ್ತೇವೆ. ಮೋಶೆಯು ಸ್ವತಹ ತಾನೇ ಮಾಡಲು ಪ್ರಯತ್ನಿಸಿದನು ಮತ್ತು ಅದು ಸುಮಾರು 40 ವರ್ಷಗಳು ವಿಷಯಗಳನ್ನು ನಿಧಾನಗೊಳಿಸಿತು!
- ಮೋಶೆಯು ನಲ್ವತ್ತು ವರ್ಷಗಳ ದೀರ್ಘಕಾಲವನ್ನು ಮರುಭೂಮಿಯಲ್ಲಿ ಕಳೆಯಬೇಕಾಯಿತು. (ಅಪೊಸ್ತಲರ ಕೃತ್ಯಗಳು 7:29,30 ವಿಮೋಚನಾಕಾಂಡ 2:15,23) ಯಾಕೆಂದರೆ ಅವನ ಮೇಲೆ ಕೋಪಗೊಂಡ ಅರಸನು ಸಾಯುವವರೆಗೂ ಸುಮ್ಮನೆ ಕಾಯಬೇಕಾಯಿತು.

- ಎಂಭತ್ತು ವರುಷದವನಾದಾಗ ಮೋಶೆಯು ಅವನ ದೈವಿಕ ಸೇವೆಯನ್ನು ಮತ್ತೆ ಪಡೆದನು
- ಮುಂದಿನ ನಾಲ್ವತ್ತು ವರುಷಗಳು, ತನ್ನ ಜೀವಿತದ ಉದ್ದೇಶವನ್ನು ಪಾಲಿಸಿದನು

**ದಾವೀದನು**

- ದಾವೀದನು ನವಯುವಕನಾಗಿದ್ದಾಗಲೇ ಅರಸನಾಗಿ ಅಭಿಷೇಕಿಸಲ್ಪಟ್ಟನು. ಈ ಸಮಯದಲ್ಲಿ ಹದಿನೇಳು ವರುಷವಿರಬಹುದೆಂದು ನಾವು ಹೇಳಬಹುದು.
- ತನ್ನ ತಂದೆಯ ಕುರಿಗಳನ್ನು ನೋಡಿಕೊಳ್ಳುವುದರಲ್ಲಿಯೇ ಅವನ ಪ್ರಾರಂಭಿಕ ತರಭೇತಿ ಹೊಂದಿದ್ದನು. ಈ ಸಮಯದಲ್ಲಿಯೇ ಸಂಗೀತದಲ್ಲಿ ತನ್ನ ಕೌಶಲ್ಯತೆ ಅಭಿವೃದ್ಧಿ ಪಡಿಸಿಕೊಂಡನು, ಸಿಂಹವನ್ನು ಮತ್ತು ಕರಡಿಯನ್ನು ಕೊಂದನು ಮತ್ತು ಇಸ್ರಾಯೇಲ ಜನರ ಮಧ್ಯದಲ್ಲಿ ಉತ್ತಮವಾದ ಗೌರವವನ್ನು ಸಂಪಾದಿಸಿಕೊಂಡನು.
- ದಾವೀದನು ಗೊಲಾತ್ಯನನ್ನು ಕೊಂದಾಗ ಅವನ ಪ್ರಾರಂಭಿಕ ಜಯ ಹೊಂದಿದನು ಮತ್ತು ರಾಷ್ಟ್ರೀಯ ನಾಯಕನಾದನು
- ಅರಸನಾದ ಸೌಲನು ಅವನನ್ನು ಕೊಲ್ಲಬೇಕೆಂಬುದಾಗಿ ತೀರ್ಮಾನಿಸಿದಾಗ, ದಾವೀದನು ತನ್ನ ಜೀವಿತದಲ್ಲಿ ಓಡಿಹೋಗಬೇಕಾಯಿತು ಮತ್ತು ತೊಂದರೆ ನಿವಾರಿಸಿಕೊಳ್ಳಲು ಪ್ರಯತ್ನಿಸಬೇಕಾಯಿತು.
- ಮುಂದಿನ 5-6 ವರ್ಷಗಳು ದಾವೀದನು ಸಂಚಾರಿಯಾಗಿ ಜೀವಿಸಿದನು (1 ಸಮವೇಲನು 22:1,2) ಅಭಿಷೇಕಗೊಂಡ ಮನುಷ್ಯನು ಕೆಲವು ಸಮಯ ಗುಹೆಯಲ್ಲಿ ಕಳೆಯಬೇಕಾಯಿತು!
- ಹೀಗಿದ್ದರೂ, ಈ ಸಮಯದಲ್ಲಿ ದೇವರು ಮನುಷ್ಯರನ್ನು ಅವನ ಜೊತೆಯಲ್ಲಿರಲು ಕಳುಹಿಸಿದನು ಮತ್ತು ಆ ಮನುಷ್ಯರು ಮುಂದೆ ದಾವೀದನ ಬಲಿಷ್ಟ ಸೈನ್ಯದ ಪ್ರಮುಖ ಸೇನಾನಾಯಕರಾದರು
- ದಾವೀದನು ಇಪ್ಪತ್ಮೂರು (23) ವರುಷದವನಾದಾಗ, ಅವನು ಯೆಹೂದ ರಾಜ್ಯದ ಅರಸನಾದನು (2 ಸಮುವೇಲನು 2:1-4)

- ದಾವೀದನು ಮೂವತ್ತು (30) ವರುಷದವನಾಗಿದ್ದಾಗ ಅಂತಿಮವಾಗಿ ಇಸ್ರಾಯೇಲ್ ಮತ್ತು ಯೆಹೂದದ ಮೇಲೆಲ್ಲಾ ಅರಸನಾದನು. (2 ಸಮುವೇಲನು 5:4,5) ಬಳಿಕ ಅವನು ಸುಮಾರು ಮೂವತ್ತು ಮೂರು ವರುಷ ಆಳಿದನು.
- ಪ್ರವಾದಿಯಾದ ಸಮುವೇಲನಿಂದ ತನ್ನ ''ಕರೆಯುವಿಕೆ'' ಹೊಂದಿದ ಸಮಯದಿಂದ, ಅವನು ಕರೆಗೆ ಹೆಜ್ಜೆಯಿಡಲು ''ಆದೇಶಿಸಲ್ಪಡುವ'' ವರೆಗೂ ಸುಮಾರು ಹದಿಮೂರು (13) ವರುಷಗಳು ಸಿದ್ಧತೆಗೊಳ್ಳಬೇಕಾಯಿತು.

**ಪೌಲನು**

- ಪೌಲನು ದಮಸ್ಕದ ಹಾದಿಯಲ್ಲಿ ಕರ್ತನಾದ ಯೇಸುವನ್ನು ಸಂಧಿಸಿದಾಗ ಅವನು ಸುಮಾರು 33 ವರ್ಷದವನಾಗಿದ್ದಿರಬೇಕು ಇದು ಅಷ್ಟು ವರ್ಷಗಳ ತರಭೇತಿಯನ್ನು ತೆಗೆದುಕೊಂಡಿತ್ತು.
- ಅವನ ಸಂದರ್ಶನದ ಸಮಯದಲ್ಲಿ, ಕರ್ತನಾದ ಯೇಸುವು ಅನ್ಯಜನರಿಗೆ ಬೆಳಕಾಗಿರುವ ತನ್ನ ಕರೆಯನ್ನು ಮತ್ತು ನಂಬಿಕೆಗೆ ಅಪೊಸ್ತಲನೆಂಬುದನ್ನು ಪ್ರಕಟಪಡಿಸಿದನು.
- ಪೌಲನು ಪ್ರಾರಂಭದ ಮೂರು ವರ್ಷಗಳನ್ನು ದಮಸ್ಕ ಮತ್ತು ಅರೆಬಿಯಾ (ಅರಬಸ್ಥಾನ)ದಲ್ಲಿ ಕಳೆದನು. (ಗಲಾತ್ಯದವರಿಗೆ 1:16,17 ಅಪೊಸ್ತಲರ ಕೃತ್ಯಗಳು 9:19-25) ದಮಸ್ಕದಲ್ಲಿ ಜನರು ಅವನನ್ನು ಕೊಲ್ಲಲು ಪ್ರಯತ್ನಿಸಿದರು. ಆದುದರಿಂದ ಅವನು ಅರಬಸ್ಥಾನಕ್ಕೆ ಪಲಾಯನ ಗೊಂಡನು ಮತ್ತು ಆನಂತರ ಹಿಂತುರಿಗಿದನು. ಈ ಒಂದು ಸಮಯದಲ್ಲೇ ಅವನು ಪ್ರಸಂಗಿಸಿದ ಸುವಾರ್ತೆಯ ಪ್ರಕಟನೆಗಳನ್ನು ಪಡೆದುಕೊಂಡನು.
- ಇದಾದನಂತರ ಸುಮಾರು ಹದಿನೈದು ದಿನಗಳ ಮಟ್ಟಿಗೆ ಯೆರೂಸಲೇಮನ್ನು ಸಂಧಿಸಿದನು (ಗಲಾತ್ಯದವರಿಗೆ 1:18 ಅಪೊಸ್ತಲರ ಕೃತ್ಯಗಳು 9:26-30) ಈ ಅವಧಿಯಲ್ಲಿ ಅವನು ಧೈರ್ಯವಾಗಿ ಪ್ರಸಂಗಿಸಿದನು. ಆದರೆ ಪುನಃ ಜನರು ಅವನನ್ನು ಕೊಲ್ಲಬೇಕೆಂಬುದಾಗಿ ಪ್ರಯತ್ನಿಸಿದರು ಅವನು ಅಲ್ಲಿಂದ ತಾರ್ಸಕ್ಕೆ ಹೊರಟನು.

- ಪೌಲನು ಸುಮಾರು ಹದಿಮೂರು (13) ವರ್ಷಗಳನ್ನು ತಾರ್ಸ, ಸಿರಿಯಾ, ಕಿಲಿಕ್ಯ ಪ್ರಾಂತ್ಯಗಳಲ್ಲಿ ಕಳೆದನು (ಗಲಾತ್ಯದವರಿಗೆ 1:21-24;12;1)
- ಈ ಹದಿಮೂರು ವರ್ಷಗಳ ಮುಕ್ತಾಯದ ಸಮಯದಲ್ಲಿ ಬಾರ್ನಬನು ತಾರ್ಸಕ್ಕೆ ಬಂದು ಸೌಲನನ್ನು ಅಂತಿಯೋಕ್ಯಕ್ಕೆ ಕರೆತಂದನು (ಅಪೊಸ್ತಲರ ಕೃತ್ಯಗಳು 11:25,26)
- ಪೌಲನು ಒಂದು ವರ್ಷಪೂರ್ತಿ ಅಂತಿಯೋಕ್ಯದ ಸಭೆಯಲ್ಲಿ ಬೋಧಿಸುವುದರಲ್ಲಿ ಕಳೆದನು
- ಅದೇ ವರ್ಷದ ಕೊನೆಯಲ್ಲಿ ಪೌಲನು ಬಾರ್ನಬನೊಡನೆ ಕ್ಷಾಮದ ಪರಿಸ್ಥಿತಿಯಲ್ಲಿದ್ದವರಿಗೆ ದ್ರವ್ಯ ಸಹಾಯ ತೆಗೆದುಕೊಂಡು ಯೆರೂಸಲೇಮಿಗೆ ಎರಡನೆ ಪ್ರಯಾಣ ಮಾಡುತ್ತಾನೆ.(ಅಪೊಸ್ತಲರ ಕೃತ್ಯಗಳು 11:29,30) ಹೀಗೆ ಸುಮಾರು ಹದಿನಾಲ್ಕು ವರ್ಷಗಳ ಅಂತರದ ಬಳಿಕ ಅವನು ಯೆರೂಸಲೇಮಿಗೆ ಹೋಗುತ್ತಾನೆ.
- ಈ ಒಂದು ಸಮಯದಲ್ಲಿ ದಮಸ್ಕದ ಹಾದಿಯಲ್ಲಿ ಕರ್ತನನ್ನು ಸಂಧಿಸಿದ ನಂತರ ಸುಮಾರು ಹದಿನೇಳು ವರುಷಗಳು ಕಳೆದು ಹೋಗಿದ್ದವು ಈ ಸಮಯದಲ್ಲಿ ಪೌಲನು ಸರಿಸುಮಾರು ಐವತ್ತು ವರ್ಷದವನಾಗಿದ್ದನು.
- ಪ್ರಾರಂಭದ 17 ವರ್ಷಗಳು ಪೌಲನ ಕ್ರಿಸ್ತೀಯ ಜೀವಿತದ ಮತ್ತು ದೇವರೊಂದಿಗಿನ ನಡೆಯುವಿಕೆಯ ಬಗ್ಗೆ ಹೆಚ್ಚಾಗಿ ದಾಖಲೆಗಳಿಲ್ಲ. ಪೌಲನು ಈ ಅವಧಿಯಲ್ಲಿ ಪ್ರಸಂಗಿಸಿದನು ಮತ್ತು ಬೋಧಿಸಿದನು ಎಂಬುದಾಗಿ ಖಂಡಿತವಾಗಿ ನಮಗೆ ಗೊತ್ತು. ದೇವರ ರಹಸ್ಯಾರ್ಥಗಳ ಪ್ರಕಟನೆಯನ್ನು ಮತ್ತು ತಿಳುವಳಿಕೆಯನ್ನು ಪಡೆದುಕೊಂಡನೆಂಬುದು ನಮಗೆ ಗೊತ್ತಿದೆ. ಹೇಗಿದ್ದರೂ, ಅವನು ಮಾಡಿದವುಗಳ ಮತ್ತು ಪ್ರಸಂಗಿಸಿದವುಗಳ ಬಗ್ಗೆ ಹೆಚ್ಚಾಗಿ ದಾಖಲೆಗಳಿಲ್ಲ. ಇವುಗಳು ಪೌಲನ ಜೀವಿತದ ''ನಿಶ್ಯಬ್ಧ ವರ್ಷಗಳು'' ಎಂಬುದಾಗಿ ಕರೆಯಲ್ಪಟ್ಟಿವೆ. ಇಂತಹ, ಅಂದರೆ ಇವುಗಳು ಮತ್ತು ಪೂರ್ವದ ಯೆಹೂದಿಮತದ ತರಬೇತಿಯು ಅವನ ತರಬೇತಿಗೆ ಸೇರ್ಪಡೆಗೊಂಡಿತು.
- ಅಂತಿಮವಾಗಿ ಅಪೊಸ್ತಲರ ಕೃತ್ಯಗಳು 13ನೇ ಅಧ್ಯಾಯದಲ್ಲಿ ಹದಿನೇಳು ವರ್ಷಗಳ ನಂತರ ಪೌಲನು ಬಾರ್ನಬನೊಡನೆ ಅವನ ಮೊದಲ ಸುವಾರ್ತಾ ಪ್ರಯಾಣಕ್ಕೆ ಕರೆಯಲ್ಪಟ್ಟನು. ಅಪೊಸ್ತಲರ ಕೃತ್ಯಗಳು 13:1-4.

- ಅಪೊಸ್ತಲರ ಕೃತ್ಯಗಳು 14:14 ರಲ್ಲಿ ಪೌಲನು ಬಾರ್ನಬನೊಡನೆ ಪ್ರಥಮ ಬಾರಿಗೆ ಅಪೊಸ್ತಲನೆಂದು ಪ್ರಸ್ತಾಪಿಸಲ್ಪಟ್ಟಿದ್ದಾನೆ.

ಕರ್ತನನ್ನು ಸಂಧಿಸಿದ ಹದಿನೇಳು ವರ್ಷಗಳ ನಂತರ ಪೌಲನು ನಿಜವಾಗಿ ಅವನ ಅಪೊಸ್ತಲ ಸೇವೆಗೆ ಹೆಜ್ಜೆಯಿಟ್ಟನು ಅಪೊಸ್ತಲನಾದ ಪೌಲನಿಗೂ ಹದಿನೇಳು ವರ್ಷಗಳು ಸಿದ್ಧತೆ ಮತ್ತು ತರಬೇತಿ! ದೇವರು ಅವಸರ ಮಾಡುವುದಿಲ್ಲ!

ನೀವು ದೇವರ ಸಿದ್ಧತೆಯ ಕಾರ್ಯಗತಿಯಲ್ಲಿ ಹಾದು ಹೋಗುವಾಗ ನೀವು ರಹಸ್ಯ ತಲಾಂತುಗಳು, ವರಗಳು ಮತ್ತು ನಿಮ್ಮ ಜೀವಿತದಲ್ಲಿರುವ ಕರೆಯನ್ನು ಕಂಡು ಹಿಡಿಯುತ್ತೀರಿ.

ಮತ್ತಾಯ 10:26,27
**ಮರೆಯಾಗಿರುವ ಯಾವದೂ ವ್ಯಕ್ತವಾಗದೆ ಇರುವುದಿಲ್ಲ; ಹೊರಪಡದ ರಹಸ್ಯವೂ ಇಲ್ಲ ನಾನು ಕತ್ತಲಲ್ಲಿ ನಿಮಗೆ ಹೇಳುವುದನ್ನು ನೀವು ಬೆಳಕಿನಲ್ಲಿ ಹೇಳಿರಿ ಮತ್ತು ಕಿವಿಯಲ್ಲಿ ಕೇಳಿದ್ದನ್ನು ಮಾಳಿಗೆಗಳ ಮೇಲೆ ನಿಂತು ಸಾರಿರಿ.**

ಲೂಕ 6:40
**ಗುರುವಿಗಿಂತ ಶಿಷ್ಯನು ದೊಡ್ಡವನಲ್ಲ ಆದರೆ ತೀರಾ ಕಲಿತವನಾದ ಪ್ರತಿಯೊಬ್ಬನು ತನ್ನ ಗುರುವಿನಂತಾಗಿರುವನು.**

ದೇವರು ನಿಮ್ಮನ್ನು ತೆಗೆದುಕೊಂಡು ಹೋಗುವ ಸಿದ್ಧತೆಯು ಇವನ್ನು ತರುತ್ತವೆ:

- ದೈವಿಕ ಗುಣಸ್ವಭಾವ
- ಎಲ್ಲಾ ಕ್ಷೇತ್ರಗಳಲ್ಲೂ ಪ್ರೌಢತೆ

### 3.1.1 ದೈವಿಕ ಗುಣಲಕ್ಷಣ

2 ತಿಮೊಥೆಯನಿಗೆ 2:19-21
**ಆದರೂ ದೇವರ ಸ್ಥಿರವಾದ ಅಸ್ತಿವಾರವು ನಿಲ್ಲುತ್ತದೆ. ಅದರ ಮೇಲೆ ತನ್ನವರು ಯಾರಾರೆಂಬುದನ್ನು ಕರ್ತನು ತಿಳಿದಿದ್ದಾನೆಂತಲೂ ಕರ್ತನ ನಾಮವನ್ನು ಹೇಳಿಕೊಳ್ಳುವವರೆಲ್ಲರು ದುರ್ಮಾರ್ಗತನವನ್ನು ಬಿಟ್ಟುಬಿಡಬೇಕೆಂತಲೂ ಲಿಪಿಯುಂಟು. ದೊಡ್ಡ ಮನೆಯಲ್ಲಿ ಬೆಳ್ಳಿ ಬಂಗಾರದ ಪಾತ್ರೆಗಳಲ್ಲದೆ ಮರದ ಪಾತ್ರೆಗಳೂ ಇರುತ್ತವೆ: ಅವುಗಳಲ್ಲಿ ಕೆಲವು ಉತ್ತಮವಾದ ಬಳಕೆಗೂ ಕೆಲವು ಹೀನವಾದ ಬಳಕೆಗೂ ಬರುತ್ತವೆ. ಹೀಗಿರಲಾಗಿ ಒಬ್ಬನು ಹೀನ ನಡತೆಯುಳ್ಳವರ ಸಹವಾಸವನ್ನು ಬಿಟ್ಟು ತನ್ನನ್ನು ಶುದ್ಧ**

**ಮಾಡಿಕೊಂಡರೆ ಅವನು ಉತ್ತಮವಾದ ಬಳಕೆಗೆ ಯೋಗ್ಯನಾಗಿರುವನು. ಅವನು ದೇವರ ಸೇವೆಗೆ ಪ್ರತಿಷ್ಠಿತನಾಗಿಯೂ ಯಜಮಾನನಿಗೆ ಉಪಯುಕ್ತನಾಗಿಯೂ ಸಕಲ ಸತ್ಕ್ರಿಯೆಗಳನ್ನು ಮಾಡುವದಕ್ಕೆ ಸಿದ್ಧನಾಗಿಯೂ ಇರುವನು.**

ಮತ್ತಾಯ 9:17

**ಇದಲ್ಲದೆ ಹಳೆಯ ಬುದ್ದಲಿಗಳಲ್ಲಿ ಹೊಸ ದ್ರಾಕ್ಷಾರಸವನ್ನು ಹಾಕಿಡುವುದಿಲ್ಲ; ಇಟ್ಟರೆ ಬುದ್ದಲಿಗಳು ಒಡೆದು ದ್ರಾಕ್ಷಾರಸವು ಚೆಲ್ಲಿ ಹೋಗುವದು, ಬುದ್ದಲಿಗಳು ಕೆಟ್ಟು ಹೋಗುವವು; ಆದರೆ ಹೊಸ ದ್ರಾಕ್ಷಾರಸವನ್ನು ಹೊಸ ಬುದ್ದಲಿಗಳಲ್ಲಿ ಹಾಕಿಡುತ್ತಾರೆ. ಆಗ ಎರಡೂ ಉಳಿಯುತ್ತವೆ. ಎಂದು ಹೇಳಿದನು.**

- ದೇವರು ನಮ್ಮ ವರಗಳಿಗಿಂತಲೂ, ನಮ್ಮ ಗುಣಸ್ವಭಾವದಲ್ಲಿ ಅಧಿಕವಾಗಿ ಆಸಕ್ತಿಯುಳ್ಳವನಾಗಿದ್ದಾನೆ.
- ನಿಮ್ಮ ಗುಣ-ಸ್ವಭಾವವು ನಿಮ್ಮನ್ನು ಇರಿಸಲಾಗದಂತಹವುಗಳಿಗೆ ನಿಮ್ಮ ವರವು ನಿಮ್ಮನ್ನು ಕೊಂಡ್ಯೊಯ್ಯುವುದು.
- ನಿಮ್ಮ ಜೀವಿತವು ಕಟ್ಟಲ್ಪಡುವುದಕ್ಕೆ ನಿಮ್ಮ ಗುಣ-ಸ್ವಭಾವವು ಅಸ್ತಿವಾರವಾಗಿದೆ.
- ವರಗಳು ಮತ್ತು ಅಭಿಷೇಕವು ಪರಲೋಕದಿಂದ ಕೊಡಲ್ಪಟ್ಟಿವೆ. ಆದರೆ ಗುಣಸ್ವಭಾವವು ಭೂಮಿಯ ಮೇಲೆ ಕಟ್ಟಲ್ಪಟ್ಟಿದೆ.

ಕೀರ್ತನೆಗಳು 51:6

**ಯಥಾರ್ಥಚಿತ್ತವೇ ನಿನಗೆ ಸಂತೋಷ, ಸುಜ್ಞಾನದ ರಹಸ್ಯಗಳನ್ನು ನನಗೆ ತಿಳಿಯಪಡಿಸು.**

- ಸರಿಯಾದ ವಿಷಯಗಳನ್ನು ಹೇಳುವುದಕ್ಕಿಂತಲೂ ಮತ್ತು ಯೋಗ್ಯ ಚಲನೆಗಳ ಮೂಲಕ ಹೋಗುವುದಕ್ಕಿಂತಲೂ ಕ್ರಿಸ್ತೀಯ ಜೀವಿತವು ಅತ್ಯಧಿಕವಾಗಿದೆ. ದೇವರು ದೈವಿಕ ಗುಣ-ಸ್ವಭಾವವನ್ನು ನೋಡುವವನಾಗಿದ್ದಾನೆ.

## 3.1.2 ಎಲ್ಲಾ ಕ್ಷೇತ್ರಗಳಲ್ಲೂ ಪ್ರೌಢತೆ

ಎಫೆಸದವರಿಗೆ 4:11-16

**ಆತನು ಕೆಲವರನ್ನು ಅಪೊಸ್ತಲರನ್ನಾಗಿಯೂ ಕೆಲವರನ್ನು ಪ್ರವಾದಿಗಳನ್ನಾಗಿಯೂ ಕೆಲವರನ್ನು ಸೌವಾರ್ತಿಕರನ್ನಾಗಿಯೂ ಕೆಲವರನ್ನು ಸಭಾಪಾಲಕರನ್ನಾಗಿಯೂ ಉಪದೇಶಿಗಳನ್ನಾಗಿಯೂ ಅನುಗ್ರಹಿಸಿದನು. ನಾವೆಲ್ಲರು ನಂಬಿಕೆಯಿಂದಲೂ ದೇವಕುಮಾರನ ವಿಷಯವಾದ ಜ್ಞಾನದಿಂದಲೂ**

**ಉಂಟಾಗುವ ಐಕ್ಯವನ್ನು ಹೊಂದಿ ಪ್ರವೀಣತೆಗೆ ಬಂದವರಾಗಿ ಕ್ರಿಸ್ತನ ಪರಿಪೂರ್ಣತೆಯೆಂಬ ಪ್ರಮಾಣವನ್ನು ಮುಟ್ಟುವ ತನಕ ದೇವ ಜನರನ್ನು ಯೋಗ್ಯಸ್ಥಿತಿಗೆ ತರುವ ಕೆಲಸಕ್ಕೋಸ್ಕರವೂ ಸಭೆಯ ಸೇವೆಗೋಸ್ಕರವೂ ಕ್ರಿಸ್ತನ ದೇಹವು ಅಭಿವೃದ್ಧಿಯಾಗುವುದಕ್ಕೋಸ್ಕರವೂ ಆತನು ಇವರನ್ನು ಅನುಗ್ರಹಿಸಿದನು. ನಾವು ಇನ್ನು ಮೇಲೆ ಕೂಸುಗಳಾಗಿರಬಾರದು; ದುರ್ಜನರ ವಂಚನೆಗೂ ದುರ್ಬೋಧಕರ ಕುಯುಕ್ತಿಗೂ ಒಳಬಿದ್ದು ನಾನಾ ಉಪದೇಶಗಳಿಂದ ಕಂಗೆಟ್ಟು ಗಾಳಿಯಿಂದ ಅತ್ತಿತ್ತ ನೂಕಿಸಿಕೊಂಡು ಹೋಗುವವರ ಹಾಗಿರಬಾರದು. ಪ್ರೀತಿಯಿಂದ ಸತ್ಯವನ್ನನುಸರಿಸುತ್ತಾ ಬೆಳೆದು ಎಲ್ಲಾ ವಿಷಯಗಳಿಲ್ಲಿಯೂ ಕ್ರಿಸ್ತನ ಐಕ್ಯವನ್ನು ಹೊಂದುತ್ತಾ ಬರಬೇಕು. ಆತನೇ ಶಿರಸ್ಸು; ದೇಹವೆಲ್ಲಾ ಆತನ ದೊರೆತನದಲ್ಲಿದ್ದು ತನ್ನಲ್ಲಿರುವ ಎಲ್ಲಾ ನರಗಳಿಂದ ಬಿಗಿಯಾಗಿ ಜೋಡಿಸಲ್ಪಟ್ಟು ಪ್ರತಿ ಅಂಗದಿಂದ ಅದರದರ ಶಕ್ತಿಯ ಪ್ರಕಾರ ಸಹಾಯ ಹೊಂದಿ ಪ್ರೀತಿಯಿಂದ ಐಕ್ಯವಾಗಿದ್ದು ಕ್ಷೇಮಾಭಿವೃದ್ಧಿಯನ್ನು ಹೊಂದುತ್ತದೆ.**

- ದೇವರೊಂದಿಗಿನ ನಮ್ಮ ವೈಯಕ್ತಿಕ ನಡೆಯುವಿಕೆಯಲ್ಲಿ ಪ್ರೌಢತೆ. ಎಲ್ಲಾ ಕ್ಷೇತ್ರಗಳ ವಿಧೇಯತೆ.
- ಜನರೊಂದಿಗಿನ ನಮ್ಮ ಸಂಬಂಧಗಳ ಪ್ರೌಢತೆ
- ನಮ್ಮ ವರಗಳು ಮತ್ತು ಕರೆಯುವಿಕೆಯಲ್ಲಿ ಪ್ರೌಢತೆ

ಮತ್ತಾಯ 10:16,17
**ನೋಡಿರಿ ತೋಳಗಳ ನಡುವೆ ಕುರಿಗಳನ್ನು ಹೊಗಿಸಿದಂತೆ ನಾನು ನಿಮ್ಮನ್ನು ಕಳುಹಿಸಿಕೊಡುತ್ತೇನೆ. ಆದುದರಿಂದ ಸರ್ಪಗಳಂತೆ ಜಾಣರೂ ಪಾರಿವಾಳಗಳಂತೆ ನಿಷ್ಕಪಟಿಗಳು ಆಗಿರ್ರಿ. ಇದಲ್ಲದೆ ಜನರ ವಿಷಯದಲ್ಲಿ ಎಚ್ಚರಿಕೆಯಾಗಿರ್ರಿ: ಅವರು ನಿಮ್ಮನ್ನು ನ್ಯಾಯ ವಿಚಾರಣೆಯ ಸಭೆಗಳಿಗೆ ಎಳಕೊಂಡು ಹೋಗುವರು; ತಮ್ಮ ಸಭಾಮಂದಿರಗಳಲ್ಲಿ ನಿಮ್ಮನ್ನು ಕೊರಡೆಗಳಿಂದ ಹೊಡೆಯುವರು**

- ದೈವಿಕ ಗುಣ - ಸ್ವಭಾವ ಮತ್ತು ಪ್ರೌಢತೆಯಲ್ಲಿನ ನಿಮ್ಮ ಬೆಳವಣಿಗೆಯು ಪ್ರಗತಿಪರವಾಗಿದೆ.
- ಪ್ರತಿ ಸಮಯದಲ್ಲೂ ನೀವು ಹೊಸ ವಿಧೇಯತೆಯ ಹಂತ, ಹೊಸ ದೈವಿಕತೆಯ ಹಂತ, ಹೊಸ ಪ್ರೌಢತೆಯ ಹಂತಕ್ಕೆ ಹೆಜ್ಜೆಯನ್ನಿಟ್ಟಾಗ ನಿಮ್ಮ ಜೀವಿತಗಳಲ್ಲಿ ದೇವರ ಅಭಿಷೇಕದ ಹೊಸ ಹಂತವನ್ನು ನೀವು ಕಂಡುಕೊಳ್ಳುವಿರಿ.
- ಈ ದಿನದಲ್ಲಿ ನೀವು ಕಲಿಯುವಂತಹ ವಿಷಯಗಳು, ನಾಳೆಗಾಗಿ ನಿಮ್ಮನ್ನು ಸಿದ್ಧಗೊಳಿಸುತ್ತವೆ. ಆತನ ಉದ್ದೇಶಗಳನ್ನು ನೆರವೇರಿಸಲು ದೇವರು ನಿಮ್ಮನ್ನು ಸಿದ್ಧಗೊಳಿಸುತ್ತಾನೆ.

## 3.2 ದೇವರು ನಮ್ಮನ್ನು ಹೇಗೆ ಸಿದ್ಧಮಾಡುತ್ತಾನೆ? .

### 3.2.1 ದೇವರ ವಾಕ್ಯ

2 ತಿಮೊಥೆಯನಿಗೆ 3:16,17

**ದೈವ ಪ್ರೇರಿತವಾದ ಪ್ರತಿಯೊಂದು ಶಾಸ್ತ್ರವು ಉಪದೇಶಕ್ಕೂ ಖಂಡನೆಗೂ ತಿದ್ದುಪಾಟಿಗೂ ನೀತಿಶಿಕ್ಷೆಗೂ ಉಪಯುಕ್ತವಾಗಿದೆ. ಆದರಿಂದ ದೇವರ ಮನುಷ್ಯನು ಪ್ರವೀಣನಾಗಿ ಸಕಲ ಸತ್ಕಾರ್ಯಕ್ಕೆ ಸನ್ನದ್ಧನಾಗುವನು**

### 3.2.2 ಪವಿತ್ರಾತ್ಮನು

2 ಕೊರಿಂಥದವರಿಗೆ 3:18

**ನಾವೆಲ್ಲರೂ ಮುಸುಕು ತೆಗೆದಿರುವ ಮುಖದಿಂದ ಕರ್ತನ ಪ್ರಭಾವವನ್ನು ದರ್ಪಣದಲ್ಲಿ ಕಾಣಿಸುತ್ತದೋ ಎಂಬಂತೆ ದೃಷ್ಟಿಸುವವರಾಗಿದ್ದು ಪ್ರಭಾವದಿಂದ ಅಧಿಕ ಪ್ರಭಾವಕ್ಕೆ ಹೋಗುತ್ತಾ ಆ ಪ್ರಭಾವದ ಸಾರೂಪ್ಯವುಳ್ಳವರೇ ಆಗುತ್ತೇವೆ; ಇದು ದೇವರಾತ್ಮನಾಗಿರುವ ಕರ್ತನ ಕೆಲಸಕ್ಕನುಸಾರವಾದದ್ದೇ.**

### 3.2.3 ಇತರ ಜನರು

ಜ್ಞಾನೋಕ್ತಿಗಳು 27: 17

**ಕಬ್ಬಿಣವು ಕಬ್ಬಿಣವನ್ನು ಹೇಗೋ ಮಿತ್ರನು ಮಿತ್ರನ ಬುದ್ಧಿಯನ್ನು ಹಾಗೆ ಹರಿತಮಾಡುವನು**

- ನೀವು ಮಾಡಬೇಕೆಂದು ಅಪೇಕ್ಷಿಸುವಂತಹ ಬಗೆಯ ಕಾರ್ಯಗಳನ್ನು ಮಾಡುತ್ತಿರುವ ಜನರೊಡನೆ ಜೊತೆಗೂಡಿರಿ

### 3.2.4 ಜೀವಿತದ ಅನುಭವಗಳು

- ಜೀವಿತದಲ್ಲಿ ಒಳ್ಳೆಯ ಸಮಯಗಳು ಮತ್ತು ಕೆಟ್ಟ ಸಮಯದಲ್ಲಿ ಕಲಿಯಬೇಕಾದ ಅನೇಕ ಪಾಠಗಳಿವೆ.

ರೋಮಾಪುರದವರಿಗೆ 5:3,4

**ಇದು ಮಾತ್ರವಲ್ಲದೆ ನಮಗೆ ಉಂಟಾಗುವ ಉಪದ್ರವಗಳಲ್ಲಿಯೂ ಉಲ್ಲಾಸವಾಗಿದ್ದೇವೆ. ಯಾಕೆಂದರೆ ಉಪದ್ರವದಿಂದ ತಾಳ್ಮೆ ಹುಟ್ಟುತ್ತದೆ. ತಾಳ್ಮೆಯಿಂದ ಅನುಭವಸಿದ್ಧಿ ಹುಟ್ಟುತ್ತದೆ. ಅನುಭವದಿಂದ ನಿರೀಕ್ಷಣ ಹುಟ್ಟುತ್ತದೆಂದು ಬಲ್ಲೆವು.**

ಯಾಕೋಬನು 1:2-4

**ನನ್ನ ಸಹೋದರರೇ, ನಿಮ್ಮ ನಂಬಿಕೆಗೆ ಆಗುವ ಪರಿಶೋಧನೆಯು ತಾಳ್ಮೆಯನ್ನುಂಟುಮಾಡಿತ್ತದೆಂದು ತಿಳಿದು ನೀವು ನಾನಾ ವಿಧವಾದ ಕಷ್ಟಗಳಲ್ಲಿ ಬಿದ್ದಿರುವಾಗ ಅದನ್ನು ಕೇವಲ ಆನಂದಕರವಾದದ್ದೆಂದು ಎಣಿಸಿರಿ ಆ ತಾಳ್ಮೆಯು ಸಿದ್ಧಿಗೆ ಬರಲಿ ಆಗ ನೀವು ಶಿಕ್ಷಿತರೂ ಸರ್ವಗುಣವುಳ್ಳವರೂ ಏನೂ ಕಡಿಮೆಯಿಲ್ಲದವರೂ ಆಗಿರುವಿರಿ.**

ಇಬ್ರಿಯರಿಗೆ 5:8,9

**ಹೀಗೆ ಆತನು ಮಗನಾಗಿದ್ದರೂ ಅನುಭವಿಸಿದ ಭಾಧೆಗಳಿಂದಲೇ ವಿಧೇಯತೆಯನ್ನು ಕಲಿತುಕೊಂಡನು ಇದಲ್ಲದೆ ಆತನು ಸಿದ್ಧಿಗೆ ಬಂದು ದೇವರಿಂದ ಮೆಲ್ಕಿಜೇದೇಕನ ತರಹದ ಮಹಾಯಾಜಕನೆನಿಸಿಕೊಂಡವನಾಗಿ ತನಗೆ ವಿಧೇಯರಾಗಿರುವವರೆಲ್ಲರಿಗೂ ನಿರಂತರವಾದ ರಕ್ಷಣೆಗೆ ಕಾರಣನಾದನು.**

- ನೀವು ಮತ್ತೊಂದು ಸ್ಥಳದಲ್ಲಿ ಕಲಿಯಲಾಗದಂತಹ ಪಾಠಗಳನ್ನು ಜೀವಿತದ ಅನುಭವಗಳು ಕಲಿಸುತ್ತವೆ.
- ಅನುಭವದೊಡನಿರುವ ಮನುಷ್ಯನನ್ನು ನೀವು ನಿರಾಕರಿಸಲು ಸಾಧ್ಯವಿಲ್ಲ.

## 3.3 ದೇವರ ಸಿದ್ಧತೆಯ ಕಾರ್ಯಗತಿಯನ್ನು ನೀವು ಹಾದು ಹೋಗುವಾಗ ಮನಸ್ಸಿನಲ್ಲಿರಿಸಬೇಕಾದ ವಿಷಯಗಳು

### 3.3.1 ದೇವರ ಸಿದ್ಧತೆಯ ಕಾರ್ಯಗತಿಯಲ್ಲಿ ನಾವು ದೇವರೊಂದಿಗೆ ಸಹಕರಿಸಲು ಮತ್ತು ಕೆಲಸ ಮಾಡುವುದನ್ನು ಕಲಿಯಬೇಕು.

1 ಕೊರಿಂಥದವರಿಗೆ 3:9

**ನಾವು ದೇವರ ಜೊತೆ ಕೆಲಸದವರು; ನೀವು ದೇವರ ಹೊಲವು ದೇವರ ಕಟ್ಟಡವೂ ಆಗಿದ್ದೀರಿ.**

### 3.3.2 ನಿಮ್ಮ ಮನೋಭಾವನೆಯ ವಿಚಾರಗಳಿಗೆ ಬೆಲೆಯಿದೆ.

### 3.3.3. ಬಲವು ಇದ್ದಲ್ಲಿ ಸ್ಥಿರತೆ ಇದೆ.

1 ತಿಮೊಥೆಯನಿಗೆ 4:15

**ಈ ಕಾರ್ಯಗಳನ್ನು ಸಾಧಿಸಿಕೊಳ್ಳುವುದರಲ್ಲಿ ಆಸಕ್ತನಾಗಿರು. ಇದರಿಂದ ನಿನ್ನ ಅಭಿವೃದ್ಧಿ ಎಲ್ಲರಿಗೂ ಪ್ರಸಿದ್ಧವಾಗುವುದು**

### 3.3.4 ಚಿಕ್ಕ ಚಿಕ್ಕ ವಿಷಯಗಳಲ್ಲಿ ನಂಬಿಗಸ್ತರಾಗಿರುವಾಗ ದೇವರು ನಿಮ್ಮನ್ನು ಮುಂದಿನವುಗಳಿಗೆ ಪ್ರವರ್ತಿಸುತ್ತಾನೆ.

ಮತ್ತಾಯ 25:23

**ಅವನ ಧಣಿಯು ಅವನಿಗೆ ಭಲಾ, ನಂಬಿಗಸ್ತನಾದ ಒಳ್ಳೇ ಆಳು ನೀನು ಸ್ವಲ್ಪ ಕೆಲಸದಲ್ಲಿ ನಂಬಿಗಸ್ತನಾಗಿದ್ದೀ ದೊಡ್ಡ ಕೆಲಸದಲ್ಲಿ ನಿನ್ನನ್ನು ಇಡುತ್ತೇನೆ; ನಿನ್ನ ದಣಿಯ ಸೌಭಾಗ್ಯದಲ್ಲಿ ಸೇರು ಎಂದು ಹೇಳಿದನು**

### 3.3.5 ಆತ್ಮಸಂತೃಪ್ತಿಯ ಬಗ್ಗೆ ಎಚ್ಚರಿಕೆಯಾಗಿರ್ರಿ ದೇವರು ನಿಮ್ಮನ್ನು ಹಿಗ್ಗಿಸಲು ಅವಕಾಶ ಕೊಡಿರಿ.

ಫಿಲಿಪ್ಪಿಯವರಿಗೆ 3:12

**ಇಷ್ಟರೊಳಗೆ ನಾನು ಬಿರುದನ್ನು ಪಡಕೊಂಡು ಸಿದ್ಧಿಗೆ ಬಂದವನೆಂದು ಹೇಳುವದಿಲ್ಲ; ನಾನು ಯಾವದನ್ನು ಹೊಂದುವದಕ್ಕಾಗಿ ಕ್ರಿಸ್ತಯೇಸು ನನ್ನನ್ನು ಹಿಡಿದುಕೊಂಡನೋ ಅದನ್ನು ಹಿಡಿದುಕೊಳ್ಳುವದಕ್ಕೋಸ್ಕರ ಓಡುತ್ತಾ ಇದ್ದೇನೆ.**

### 3.3.6 ಸಿದ್ಧತೆಯ ಸಮಯವು ನಿರರ್ಥಕ ಸಮಯವಲ್ಲ ಕರೆಯು ದೊಡ್ಡದಾದಷ್ಟು ಸಿದ್ದತೆಯು ಅಧಿಕ ದೊಡ್ಡದು

### 3.3.7 ಆತುರಪಡದಿರ್ರಿ ಪ್ರತಿಯೊಂದು ಸಿದ್ದತೆಯ ಸಮಯವು ತನ್ನ ಸಂಪೂರ್ಣ ಪಥದಲ್ಲಿ ಜರುಗಲಿ

ಜ್ಞಾನೋಕ್ತಿಗಳು 21:5

**ಶ್ರಮಶೀಲರಿಗೆ ತಮ್ಮ ಯತ್ನಗಳಿಂದ ಸಮೃದ್ಧಿ; ಆತುರ ಪಡುವವರಿಗೆಲ್ಲಾ ಕೊರತೆಯೇ**

**ಉದಾಹರಣೆಗೆ;** ಮೋಶೆ, ದಾವೀದ ಮತ್ತು ಪೌಲನು

### 3.3.8 ನಿಮ್ಮ ಕರೆ ಮತ್ತು ವರಗಳ ಕ್ಷೇತ್ರಗಳೊಳಗೆ ಇರ್ರಿ

ದೇವರು ರಚಿಸದೆ ಇರುವ ಏನಾದರೊಂದಾಗಿ ಕಂಡು ಬರಲು ಪ್ರಯತ್ನಿಸಬೇಡಿರಿ.

# 4

# ಆತನ ಉದ್ಧೇಶಗಳನ್ನು ನೆರವೇರಿಸಲು ನೀವು ಸ್ಥಾನದಲ್ಲಿ ನಿಲ್ಲುವುದು

ನಮ್ಮ ಜೀವಿತಕ್ಕಿರುವ ದೇವರ ಚಿತ್ತದ ನೆರವೇರಿಕೆಯ ಕಾರ್ಯಗತಿಯ ಒಂದು ಭಾಗವು, ನಾವು ತೊಡಗುವುದಾಗಿದೆ, ಆದುದರಿಂದ ನಾವು ಸರಿಯಾದ ಸಮಯದಲ್ಲಿ ಸರಿಯಾದ ಸ್ಥಾನದಲ್ಲಿರಬೇಕು.

''ಸ್ಥಾನದಲ್ಲಿ ನಿಲ್ಲುವುದು'' ಸಾಮಾನ್ಯವಾಗಿ ದೇವರಿಗೆ ಸೂಕ್ಷ್ಮ ಮನಸ್ಸಿನವರಾಗಿರುವುದು ಮತ್ತು ಸರಿಯಾದ ವಿಷಯಗಳನ್ನು ಮಾಡುವುದರಿಂದ ಸರಿಯಾದ ಸಮಯದಲ್ಲಿ ಸರಿಯಾದ ಸ್ಥಾನದಲ್ಲಿರುವುದನ್ನು ಕಲಿತುಕೊಳ್ಳಬೇಕು.

## 4.1 ಆತನ ಉದ್ಧೇಶಗಳನ್ನು ನೆರವೇರಿಸಲು ಸ್ಥಾನದಲ್ಲಿ ನಿಲ್ಲುವುದು

ಎಸ್ತೇರಳು 4:1,2

**ಹತಾಕನು ಎಸ್ತೇರಳ ಮಾತುಗಳನ್ನು ಮೋರ್ದೆಕೈಗೆ ತಿಳಿಸಿದಾಗ ಅವನು ತಿರಿಗಿ ಎಸ್ತೇರಳಿಗೆ ಯೆಹೂದ್ಯರೆಲ್ಲಾ ನಾಶವಾದರೂ ನಾನೊಬ್ಬಳು ಅರಮನೆಯಲ್ಲಿರುವುದರಿಂದ ಉಳಿಯುವೆನು ಎಂದು ಭಾವಿಸಕೊಳ್ಳಬೇಡ. ನೀನು ಸುಮ್ಮನಿದ್ದು ಬಿಟ್ಟರೆ ಬೇರೆ ಕಡೆಯಿಂದ ಯೆಹೂದ್ಯರಿಗೆ ಸಹಾಯವೂ ವಿಮೋಚನೆಯೂ ಉಂಟಾದಾವು; ನೀನಾದರೋ ನಿನ್ನ ತಂದೆಯ ಮನೆಯವರೊಡನೆ ನಾಶವಾಗುವಿ. ಇದಲ್ಲದೆ ನೀನು ಇಂಥ ಸಂದರ್ಭಕ್ಕಾಗಿಯೇ ಪಟ್ಟಕ್ಕೆ ಬಂದಿರಬಹುದು, ಯಾರು ಬಲ್ಲರು ಎಂದು ಹೇಳಿ ಕಳುಹಿಸಿದನು.**

ದೇವರು ಅಪೇಕ್ಷಿಸುವುದನ್ನು ಮಾಡಲು ನಾವು ಸರಿಯಾದ ಸಮಯದಲ್ಲಿ ಸರಿಯಾದ ಸ್ಥಾನದಲ್ಲಿರಬೇಕು.

## 4.2 ಆತನ ಒದಗಿಸುವಿಕೆಯನ್ನು ಸ್ವೀಕರಿಸಲು ಕಾದಿದ್ದು ನಿಂತಿರುವುದು

1 ಅರಸುಗಳು 17:1-9

**ಗಿಲ್ಯಾದಿನ ಪ್ರವಾಸಿಗಳಲ್ಲಿ ತಿಷ್ಬೀಯನಾದ ಎಲೀಯ ಎಂಬುವನು ಅಹಾಬನಿಗೆ ನಾನು ಸನ್ನಿಧಿಸೇವೆ ಮಾಡುತ್ತಿರುವ ಇಸ್ರಾಯೇಲ್ ದೇವರಾದ ಯೆಹೋವನಾಣೆ, ನಾನು ಸೂಚಿಸಿದ ಹೊರತು ಇಂದಿನಿಂದ ಕೆಲವು ವರುಷಗಳವರೆಗೆ ಮಳೆಯಾಗಲಿ ಮಂಜಾಗಲಿ ಬೀಳುವದಿಲ್ಲ ಅಂದನು. ತರುವಾಯ ಯೆಹೋವನು ಎಲೀಯನಿಗೆ ನೀನು ಈ ಸ್ಥಳವನ್ನು ಬಿಟ್ಟು ಪೂರ್ವದಿಕ್ಕಿಗೆ ಹೋಗಿ ಯೊರ್ದನ್ ಹೊಳೆಯ**

**ಆಚೆಯಲ್ಲಿರುವ ಕೆರೀತ್‌ಹಳ್ಳದಲ್ಲಿ ಅಡಗಿಕೋ ಆ ಹಳ್ಳದ ನೀರು ನಿನಗೆ ಪಾನವಾಗಿರುವದು; ನಿನಗೆ ಆಹಾರ ತಂದು ಕೊಡಬೇಕೆಂದು ಕಾಗೆಗಳಿಗೆ ಆಜ್ಞಾಪಿಸಿದ್ದೇನೆ ಎಂದು ಹೇಳಿದನು ಅವನು ಯೆಹೋವನ ಅಪ್ಪಣೆಯಂತೆ ಯೊರ್ದನಿನ ಪೂರ್ವಕ್ಕಿರುವ ಕೆರೀತ ಹಳ್ಳದಲ್ಲಿ ವಾಸಿಸಿದನು ಕಾಗೆಗಳು ಅವನಿಗೆ ಪ್ರಾತಃ ಕಾಲದಲ್ಲಿಯೂ ಸಾಯಂಕಾಲದಲ್ಲಿಯೂ ರೊಟ್ಟಿ, ಮಾಂಸ ಇವುಗಳನ್ನು ತಂದುಕೊಡುತ್ತಿದ್ದವು ಅವನು ಇವುಗಳನ್ನು ತಿನ್ನುತ್ತಿದ್ದನು; ಹಳ್ಳದ ನೀರು ಅವನಿಗೆ ಪಾನವಾಗಿತ್ತು ದೇಶದಲ್ಲಿ ಮಳೆಯಿಲ್ಲದ್ದರಿಂದ ಕೆಲವು ದಿವಸಗಳಾದನಂತರ ಹಳ್ಳವು ಬತ್ತಿ ಹೋಯಿತು ಆಗ ಯೆಹೋವನು ಅವನಿಗೆ - ನೀನು ಇಲ್ಲಿಂದ ಚೀದೋನ್ಯರ ಚಾರೆಪ್ತಾ ಊರಿಗೆ ಹೊರಟುಹೋಗಿ ಅಲ್ಲಿ ವಾಸಿಸು ನಿನ್ನನ್ನು ಸಾಕಬೇಕೆಂದು ಅಲ್ಲಿನ ಒಬ್ಬ ವಿಧವೆಗೆ ಆಜ್ಞಾಪಿಸಿದ್ದೇನೆ ಅಂದನು.**

ನಮ್ಮ ಜೀವಿತಕ್ಕಿರುವ ದೇವರ ಒದಗಿಸುವಿಕೆಗಳನ್ನು ಪಡೆದುಕೊಳ್ಳಲು ನಾವು ಸರಿಯಾದ ಸಮಯದಲ್ಲಿ ಸರಿಯಾದ ಸ್ಥಾನದಲ್ಲಿರಬೇಕು.

ನಾವು ಸ್ಥಾನದಲ್ಲಿರುವುದರಲ್ಲಿ ಸೋತು, ದೇವರ ಒದಗಿಸುವಿಕೆಗಳನ್ನು ಕಳೆದುಕೊಂಡರೆ ದೇವರನ್ನು ದೂಷಿಸಲು ಸಾಧ್ಯವಿಲ್ಲ.

## 4.3 ಸಂರಕ್ಷಿಸಲ್ಪಡುವ ಸ್ಥಾನದಲ್ಲಿ ನಿಂತಿದ್ದೀರಿ

ಕೀರ್ತನೆಗಳು 91

**ಪರಾತ್ಪರನ ಮರೆ ಹೊಕ್ಕಿರುವವನು ಸರ್ವಶಕ್ತನ ಆಶ್ರಯದಲ್ಲಿ ಸುರಕ್ಷಿತನಾಗಿರುವನು ನಾನು ಯೆಹೋವನಿಗೆ ನೀನೇ ನನ್ನ ಶರಣನು ನನ್ನ ದುರ್ಗವು ನಾನು ಭರವಸವಿಟ್ಟಿರುವ ನನ್ನ ದೇವರು ಎಂದು ಹೇಳುವೆನು. ನಿನ್ನನ್ನು ಬೇಟೆಗಾರನ ಬಲೆಯಿಂದಲೂ ಮರಣಕರ ವ್ಯಾಧಿಯಿಂದಲೂ ತಪ್ಪಿಸುವವನು ಆತನೇ. ಆತನು ನಿನ್ನನ್ನು ತನ್ನ ರೆಕ್ಕೆಗಳಿಂದ ಹೊದಗಿಸುವನು ಆತನ ಪಕ್ಕೆಗಳ ಮರೆಯನ್ನು ಆಶ್ರಯಿಸಿಕೊಳ್ಳುವಿ ಆತನ ಸತ್ಯತೆಯೇ ನಿನಗೆ ಖೇಡ್ಯವೂ ಗುರಾಣಿಯೂ ಆಗಿದೆ ಇರುಳಲ್ಲಿ ಭಯ ಹುಟ್ಟಿಸುವ ಯಾವದಕ್ಕೂ ಹಗಲಲ್ಲಿ ಹಾರಿಬರುವ ಬಾಣಕ್ಕೂ ಕತ್ತಲೆಯಲ್ಲಿ ಸಂಚರಿಸುವ ವಿಪತ್ತಿಗೂ ಹಾನಿಕರವಾದ ಮಧ್ಯಾಹ್ನದ ಕೇಡಿಗೂ ಅಂಜಕಾರಣವಿಲ್ಲ. ನಿನ್ನ ಮಗ್ಗುಲಲ್ಲಿ ಸಾವಿರ ಜನರು ಬಲಗಡೆಯಲ್ಲಿ ಹತ್ತು ಸಾವಿರ ಜನರು ಸತ್ತು ಬಿದ್ದರೂ ನಿನಗೇನೂ ತಟ್ಟದು. ನೀನು ಅದನ್ನು ಕಣ್ಣಾರೆ ಕಂಡು ದುಷ್ಟರಿಗೆ ಪ್ರತಿದಂಡನೆಯುಂಟೆಂಬದಕ್ಕೆ ಸಾಕ್ಷಿಯಾಗಿರುವಿಯಷ್ಟೆ ಯೆಹೂವನೇ ನನ್ನ ಶರಣನು! ಪರಾತ್ಪರನನ್ನು ನಿವಾಸಸ್ಥಾನ ಮಾಡಿಕೊಂಡಿದ್ದೀಯಲ್ಲ ಯಾವ ಕೇಡೂ ನಿನಗೆ ಸಂಭವಿಸದು, ಉಪದ್ರವವು ನಿನ್ನ ಗುಡಾರದ ಸಮೀಪಕ್ಕೂ ಬಾರದು. ನೀನು ಹೋಗುವಲ್ಲೆಲ್ಲಾ ನಿನ್ನನ್ನು ಕಾಯುವುದಕ್ಕೆ ಆತನು ನಿನ್ನ ವಿಷಯವಾಗಿ ತನ್ನ ದೂತರಿಗೆ ಅಪ್ಪಣೆಕೊಡುವನು. ನಿನ್ನ ಕಾಲು ಕಲ್ಲಿಗೆ ತಗಲದಂತೆ ಅವರು ನಿನ್ನನ್ನು ಕೈಗಳಲ್ಲಿ ಎತ್ತಿಕೊಳ್ಳುವರು. ಸಿಂಹಸರ್ಪಗಳ ಮೇಲೆ ನಡೆಯುವಿ; ಪ್ರಾಯದ ಸಿಂಹವನ್ನು ಘಟಸರ್ಪವನ್ನೂ ತುಳಿದು ಬಿಡುವಿ ಅವನು ನನ್ನಲ್ಲಿ ಆಸಕ್ತನಾಗಿರುವದರಿಂದ ಅವನನ್ನು ರಕ್ಷಿಸುವೆನು, ನನ್ನ ನಾಮವನ್ನು ಅರಿತವನಾಗಿರುವದರಿಂದ ಅವನನ್ನು ಉದ್ಧರಿಸುವೆನು. ಅವನು ನನಗೆ ಮೊರೆಯಿಡುವಾಗ ಸದುತ್ತರವನ್ನು**

**ದಯಪಾಲಿಸುವೆನು; ಇಕ್ಕಟ್ಟಿನಲ್ಲಿ ಹತ್ತಿರವಿದ್ದು ಅವನನ್ನು ತಪ್ಪಿಸಿ ಘನಪಡಿಸುವೆನು; ದೀರ್ಘಾಯುಷ್ಯವನ್ನು ಅನುಗ್ರಹಿಸಿ ಅವನನ್ನು ತೃಪ್ತಿಪಡಿಸುವೆನು; ನನ್ನ ವಿಶೇಷವಾದ ರಕ್ಷಣೆಯನ್ನು ತೋರಿಸುವೆನು.**

ದೇವರು ಅಪೇಕ್ಷಿಸುವುದನ್ನು ಮಾಡುವಂತಹ, ಆತನು ಯಾವ ಸ್ಥಳದಲ್ಲಿ ಮಾಡಬೇಕೆಂಬುದನ್ನು ಅಪೇಕ್ಷಿಸುವಂತಹ ಮತ್ತು ಆತನು ಯಾವ ಸಮಯದಲ್ಲಿ ಮಾಡಬೇಕೆಂದು ಅಪೇಕ್ಷಿಸುವಂತಹ, ದೇವರ ಚಿತ್ತದ ಕೇಂದ್ರದಲ್ಲಿರುವುದೇ ಸುರಕ್ಷಿತ ಸ್ಥಳವಾಗಿರುತ್ತದೆ.

## 4.4 ಮೇಲ್ಮಟ್ಟಕ್ಕೇರಿಸಲ್ಪಡುವ ಸ್ಥಾನದಲ್ಲಿ ನಿಂತಿದ್ದೀರಿ

2 ಸಮುವೇಲನು 2:1-4

**ಅನಂತರ ದಾವೀದನು ಯೆಹೋವನನ್ನು - ನಾನು ಯೆಹೂದ ದೇಶದ ಯಾವದಾದರೊಂದು ಪಟ್ಟಣಕ್ಕೆ ಹೋಗಬಹುದೋ ಎಂದು ಕೇಳಲು ಆತನು - ಹೋಗಬಹುದು ಅಂದನು ಅವನು ತಿರುಗಿ - ಯಾವ ಊರಿಗೆ ಹೋಗಲಿ ಎಂದು ಕೇಳಿದ್ದಕ್ಕೆ ಹೆಬ್ರೋನಿಗೆ ಹೋಗು ಎಂಬ ಉತ್ತರ ಸಿಕ್ಕಿತು. ಆಗ ದಾವೀದನು ತನ್ನ ಇಬ್ಬರು ಹೆಂಡತಿಯರಾದ ಇಜ್ರೇಲಿನ ಅಹೀನೋವಮಳನ್ನೂ ಕರ್ಮೆಲ್ಯನಾದ ನಾಬಾಲನ ಹೆಂಡತಿಯಾಗಿದ್ದ ಅಬೀಗೈಲಳನ್ನೂ ಕರೆಕೊಂಡು ಅಲ್ಲಿಗೆ ಹೋದನು ದಾವೀದನ ಜನರೂ ತಮ್ಮ ತಮ್ಮ ಕುಟುಂಬಗಳನ್ನು ಕರಕೊಂಡು ಅವನ ಜೊತೆಯಲ್ಲಿ ಹೋಗಿ ಹೆಬ್ರೋನಿಗೆ ಸೇರಿದ ಊರುಗಳಲ್ಲಿ ವಾಸಿಸಿದರು ತರುವಾಯ ಯೆಹೂದ್ಯರು ಅಲ್ಲಿಗೆ ಬಂದು ದಾವೀದನನ್ನು ಅಭಿಷೇಕಿಸಿ ತಮ್ಮ ಕುಲದ ಅರಸನನ್ನಾಗಿ ಮಾಡಿಕೊಂಡರು.**

ದೇವರು ನಮಗಾಗಿ ಸಂಕಲ್ಪಿಸಿರುವ ಪದನ್ನೋತಿ, ಬೆಳೆವಣಿಗೆ ಮತ್ತು ಏಳಿಗೆಯನ್ನು ಪಡೆದುಕೊಳ್ಳಲು ನಾವೇ ನಮ್ಮನ್ನು ಅಂತಹ ಸ್ಥಾನಗಳಲ್ಲಿರಿಸಿಕೊಳ್ಳಬೇಕು

## 4.5 ದೇವರ ಪ್ರಸಕ್ತ ಚಲನೆಯಲ್ಲಿ ನಿಂತಿದ್ದೀರಿ

**ಉದಾಹರಣೆಗಳು:-**

**ತಾಮ್ರದ ಸರ್ಪ**

ಅರಣ್ಯಕಾಂಡ 21:5-9

**ಆಗ ಅವರು ದೇವರಿಗೂ ಮೋಶೆಗೂ ವಿರೋಧವಾಗಿ ಮಾತಾಡುತ್ತಾ ನೀವು ನಮ್ಮನ್ನು ಈ ಮರಳುಕಾಡಿನಲ್ಲಿ ಕೊಲ್ಲಬೇಕೆಂದು ಐಗುಪ್ತ ದೇಶದಿಂದ ಕರೆದುಕೊಂಡು ಬಂದಿರೋ? ಇಲ್ಲಿ ಆಹಾರವೂ ಇಲ್ಲ, ನೀರೂ ಇಲ್ಲ; ಈ ನಿಸ್ಸಾರವಾದ ಆಹಾರವನ್ನು ತಿಂದು ತಿಂದು ನಮಗೆ ಬೇಸರವಾಯಿತೆಂದು ಹೇಳುವವರಾದರು ಅದಕ್ಕೆ ಯೆಹೋವನು ಉರಿಮಂಡಲಗಳನ್ನು ಜನರೊಳಗೆ ಬರಮಾಡಿದನು; ಅವು ಜನರನ್ನು ಕಚ್ಚಿದ್ದರಿಂದ ಬಹುಜನ ಸತ್ತು ಹೋದರು ಆದದರಿಂದ ಜನರು ಮೋಶೆಯ ಬಳಿಗೆ ಬಂದು ನಾವು ನಿನಗೂ**

**ಯೆಹೋವನಿಗೂ ವಿರೋಧವಾಗಿ ಮಾತಾಡಿ ದೋಷಿಗಳಾದೆವು ಈ ಸರ್ಪಗಳು ನಮ್ಮ ಬಳಿಯಿಂದ ತೊಲಗಿ ಹೋಗುವಂತೆ ನೀನು ಯೆಹೋವನಿಗೆ ಪ್ರಾರ್ಥನೆ ಮಾಡಬೇಕೆಂದು ಬೇಡಿಕೊಂಡರು ಮೋಶೆ ಜನರಿಗೋಸ್ಕರ ಪ್ರಾರ್ಥಿಸಲಾಗಿ ಯೆಹೋವನು ಅವನಿಗೆ - ನೀನು (ತಾಮ್ರದಿಂದ ) ವಿಷಸರ್ಪದ ಆಕಾರವನ್ನು ಮಾಡಿಸಿ ಧ್ವಜಸ್ತಂಭದ ಮೇಲೆ ಎತ್ತಿ ನಿಲ್ಲಿಸಬೇಕು; ಸರ್ಪಗಳಿಂದ ಗಾಯಪಟ್ಟವರು ಅದನ್ನು ನೋಡಿ ಬದುಕಿಕೊಳ್ಳುವರು ಎಂದು ಆಜ್ಞಾಪಿಸಿದನು ಆದಕಾರಣ ಮೋಶೆ ತಾಮ್ರದಿಂದ ಸರ್ಪದ ಆಕಾರವನ್ನು ಮಾಡಿಸಿ ಧ್ವಜಸ್ತಂಭದ ಮೇಲೆ ಇಡಿಸಿದನು. ಸರ್ಪಗಳಿಂದ ಗಾಯಪಟ್ಟವರಲ್ಲಿ ಯಾರು ಆ ತಾಮ್ರದ ಸರ್ಪವನ್ನು ಲಕ್ಷ್ಯವಿಟ್ಟು ನೋಡಿದರೋ ಅವರೆಲ್ಲರೂ ಬದುಕಿಕೊಂಡರು.**

2 ಅರಸುಗಳು 18:4

**ಪೂಜಾಸ್ಥಳಗಳನ್ನು ಹಾಳು ಮಾಡಿ ಕಲ್ಲುಕಂಬಗಳನ್ನು ಒಡೆದು ಅಶೇರ ವಿಗ್ರಹ ಸ್ಥಂಭಗಳನ್ನು ಕಡಿದುಹಾಕಿದನು: ಮೋಶೆಯು ಮಾಡಿಸಿದ ತಾಮ್ರ ಸರ್ಪವನ್ನು ಚೂರುಚೂರು ಮಾಡಿದನು ಇಸ್ರಾಯೇಲ್ಯರು ಅದಕ್ಕೆ ಆ ವರೆಗೂ ಧೂಪಸುಡುತ್ತಿದ್ದರು. ಅದಕ್ಕೆ ನೆಹುಷ್ಟಾನ್ ಎಂಬ ಹೆಸರಿತ್ತು.**

## ಮೋಶೆ

ವಿಮೋಚನಾ ಕಾಂಡ 17:1-6

**ತರುವಾಯ ಇಸ್ರಾಯೇಲ್ಯರ ಸಮೂಹವೆಲ್ಲಾ ಯೆಹೂವನ ಅಪ್ಪಣೆಯ ಪ್ರಕಾರ ಸೀನ್ ಎಂಬ ಅರಣ್ಯದಿಂದ ಹೊರಟು ಮುಂದೆ ಪ್ರಯಾಣ ಮಾಡಿ ರೆಫೀದೀಮಿನಲ್ಲಿ ಇಳುಕೊಂಡರು ಕುಡಿಯುವದಕ್ಕೆ ನೀರಿಲ್ಲದ ಕಾರಣ ಜನರು ಮೋಶೆಯ ಸಂಗಡ ವಾದಿಸುತ್ತಾ - ನಮಗೆ ಕುಡಿಯುವದಕ್ಕೆ ನೀರು ದೊರಕಿಸಿಕೊಡಬೇಕು ಎಂದು ಹೇಳಿದಾಗ ಮೋಶೆ ನೀವು ನನ್ನ ಸಂಗಡ ವಾದಿಸುವದೇನು? ಯೆಹೂವನನ್ನು ಯಾಕೆ ಪರೀಕ್ಷಿಸುತ್ತೀರಿ ಎಂದು ಅವರಿಗೆ ಹೇಳಿದನು ಅಲ್ಲಿ ಜನರು ನೀರಿಲ್ಲದೆ ಬಾಯಾರಿಕೆಯ ಸಂಕಟದಿಂದ ಮೋಶೆಯ ಮೇಲೆ ಗುಣಗುಟ್ಟುತ್ತಾ ನೀನು ನಮ್ಮನ್ನು ನಮ್ಮ ಮಕ್ಕಳನ್ನೂ ದನಗಳನ್ನೂ ಐಗುಪ್ತ ದೇಶದಿಂದ ಕರೆತಂದು ಈಗ ನೀರಿಲ್ಲದೆ ಸಾಯುವ ಹಾಗೆ ಮಾಡಿದ್ದೇಕೆ ಎಂದರು. ಆಗ ಮೋಶೆಯು ಯೆಹೋವನಿಗೆ ಮೊರೆಯಿಟ್ಟು ಈ ಜನರಿಗೋಸ್ಕರ ನಾನೇನು ಮಾಡಲಿ? ಅವರು ನನ್ನನ್ನು ಕಲ್ಲೆಸೆದು ಕೊಲ್ಲುವ ಹಾಗಿದ್ದಾರಲ್ಲ ಅಂದನು ಅದಕ್ಕೆ ಯೆಹೋವನು - ನೀನು ನೈಲ್ ನದಿಯನ್ನು ಹೊಡೆದ ಕೋಲನ್ನು ಕೈಯಲ್ಲಿ ಹಿಡಿದುಕೊಂಡು ಇಸ್ರಾಯೆಲ್ಯರ ಹಿರಿಯರಲ್ಲಿ ಕೆಲವರನ್ನು ಕರಕೊಂಡು ಜನರ ಮುಂದೆ ಹೋರಟು (ನಾನು ತೋರಿಸುವ ಸ್ಥಳಕ್ಕೆ) ಹೋಗು. ಅಲ್ಲಿ ಹೋರೇಬಿನಲ್ಲಿರುವ ಬಂಡೆಯ ಮೇಲೆ ನಾನೇ ನಿನ್ನೆದುರಾಗಿ ನಿಲ್ಲುವೆನು ನೀನು ಆ ಬಂಡೆಯನ್ನು ಹೊಡೆದಾಗ ಅದರಿಂದ ನೀರು ಹೊರಡುವದು, ಜನರು ಕುಡಿಯುವರು ಎಂದು ಮೋಶೆಗೆ ಅಪ್ಪಣೆ ಕೊಡಲಾಗಿ ಮೋಶೆ ಇಸ್ರಾಯೇಲ್ಯರ ಹಿರಿಯರ ಎದುರಿನಲ್ಲಿ ಹಾಗೆಯೇ ಮಾಡಿದನು.**

ಅರಣ್ಯಕಾಂಡ 20:6-12

**ಮೋಶೆ ಆರೋನರು ಜನಸಮೂಹದ ಎದುರಿನಿಂದ ದೇವದರ್ಶನದ ಗುಡಾರದ ಬಾಗಿಲಿಗೆ ಹೋಗಿ ಅಡ್ಡ ಬೀಳಲಾಗಿ ಯೆಹೋವನ ತೇಜಸ್ಸು ಅವರಿಗೆ ಕಾಣಿಸಿತು. ಆಗ ಯೆಹೋವನು ಮೋಶೆಗೆ ನೀನು ಕೋಲನ್ನು ಕೈಯಲ್ಲಿ ಹಿಡಿದು ನಿನ್ನ ಅಣ್ಣನಾದ ಆರೋನನ ಜೊತೆಯಲ್ಲಿ ಸಮೂಹದವರನ್ನು**

**ಕೂಡಿಸಿಕೊಂಡು ಅವರ ಎದುರಿನಲ್ಲೇ ಆ ಕಡಿದಾದ ಬಂಡೆಗೆ ನೀರು ಕೊಡಬೇಕೆಂದು ಆಜ್ಞಾಪಿಸು ಅದರೊಳಗಿಂದ ನೀರು ಹೊರಟು ಬರುವದು; ನೀನು ಸಮೂಹದವರಿಗೂ ಅವರ ಪಶುಗಳಿಗೂ ನೀರನ್ನು ಕುಡಿಯಕೊಡಬಹುದು ಎಂದು ಹೇಳಿದನು ಯೆಹೋವನು ಆಜ್ಞಾಪಿಸಿದಂತೆಯೇ ಮೋಶೆಯು ಆ ಕೋಲನ್ನು ಆತನ ಸನ್ನಿಧಿಯಿಂದ ತೆಗೆದುಕೊಂಡು ಹೋಗಿ ಆರೋನನ ಜೊತೆಯಲ್ಲಿ ಸಮೂಹದವರನ್ನು ಆ ಕಡಿದಾದ ಬಂಡೆಗೆದುರಾಗಿ ಕೂಡಿಸಿ ಅವರಿಗೆ ದ್ರೋಹಿಗಳೇ ಕೇಳಿರಿ, ನಾವು ಈ ಬಂಡೆಯೊಳಗಿಂದಲೇ ನಿಮಗೋಸ್ಕರ ನೀರನ್ನು ಬರಮಾಡಬೇಕೋ ಎಂದು ಹೇಳಿ ಕೈಯಲ್ಲಿರುವ ಕೋಲಿನಿಂದ ಆ ಬಂಡೆಯನ್ನು ಎರಡುಸಾರಿ ಹೊಡೆದನು ಆಗ ನೀರು ಪ್ರವಾಹವಾಗಿ ಹೊರಟಿತು. ಸಮೂಹದವರೂ ಅವರ ಪಶುಗಳೂ ಕುಡಿದರು. ಆಗ ಯೆಹೋವನು ಮೋಶೆ ಆರೋನರಿಗೆ ನೀವು ನನ್ನನ್ನು ನಂಬದವರಾಗಿ ಇಸ್ರಾಯೇಲ್ಯರ ಎದುರಿನಲ್ಲಿ ನನ್ನ ಗೌರವವನ್ನು ಕಾಪಾಡದೆ ಹೋದದರಿಂದ ಈ ಸಮೂಹದವರನ್ನು ನಾನು ಅವರಿಗೆ ವಾಗ್ದಾನ ಮಾಡಿದ ದೇಶದೊಳಕ್ಕೆ ನೀವು ಕರಕೊಂಡು ಹೋಗಕೂಡದು ಎಂದು ಹೇಳಿದನು.**

## ಯೋಹಾನನ ಶಿಷ್ಯರು

ಯೋಹಾನ 1:36,37

**ಅಲ್ಲಿ ತಿರುಗಾಡುತ್ತಿರುವ ಯೇಸುವನ್ನು ನೋಡಿ ಅಗೋ ಯಜ್ಞಕ್ಕೆ ದೇವರು ನೇಮಿಸಿದ ಕುರಿ ಅಂದನು ಆ ಇಬ್ಬರು ಶಿಷ್ಯರು ಅದನ್ನು ಕೇಳಿ ಯೇಸುವಿನ ಹಿಂದೆ ಹೋದರು.**

- ಸ್ಥಾನದಲ್ಲಿರಿಸಿಕೊಳ್ಳುವಿಕೆಯು, ಭೌಗೋಳಿಕವಾಗಿಯೂ, ಸಾಮಾಜಿಕವಾಗಿಯೂ ವೃತ್ತಿಪರವಾಗಿಯೂ, ಬಾಂಧವ್ಯವಾಗಿಯೂ ಇರಬಹುದು
- ಸ್ಥಾನದಲ್ಲಿರಿಸಿಕೊಳ್ಳುವಿಕೆಯು ನಮ್ಮ ಜೀವಿತಗಳ ಪ್ರತಿಯೊಂದು ಕ್ಷೇತ್ರಕ್ಕೂ ಅನ್ವಯಿಸುತ್ತದೆ.

## 4.6 ಸ್ಥಾನದಲ್ಲಿ ನಿಲ್ಲುವಾಗ ಮನಸ್ಸಿನಲ್ಲಿ ಇರಿಸಬೇಕಾದ ವಿಷಯಗಳು

- ಕಳೆದುಕೊಳ್ಳಲು (ಬಿಟ್ಟುಬಿಡಲು) ಸಿದ್ಧರಾಗಿರಿ

  **ಉದಾಹರಣೆಗೆ** : ಲೋಟನ ಹೆಂಡತಿ

- ಗೊತ್ತಿಲ್ಲದಿದ್ದರು ಎಲ್ಲಿಗೆ ಹೊರನಡೆಯಲು ಸಿದ್ಧರಾಗಿರಿ

ಇಬ್ರಿಯರಿಗೆ 11:8

**ನಂಬಿಕೆಯಿಂದಲೇ ಅಬ್ರಹಾಮನು ಕರೆಯಲ್ಪಟ್ಟ ಕೂಡಲೆ ಕರೆದಾತನ ಮಾತನ್ನು ಕೇಳಿ ತಾನು ಬಾಧ್ಯವಾಗಿ ಹೊಂದಬೇಕಾಗಿದ್ದ ಸ್ಥಳಕ್ಕೆ ಹೋದನು; ತಾನು ಹೋಗಬೇಕಾದ ಸ್ಥಳವು ಯಾವದೆಂದು ತಿಳಿಯದೆ ಹೊರಟನು.**

- ನೀವು ಹೇಗೆ ಪ್ರವೇಶಿಸುತ್ತೀರಿ ಮತ್ತು ಬಿಟ್ಟುಬಿಡುತ್ತೀರಿ ಎಂಬುದರಲ್ಲಿ ಜಾಗರೂಕರಾಗಿರಿ.
- ಬದಲಾವಣೆಗೆ ಸಿದ್ಧವಾಗಿರಿ.
- ನೀವು ಹೊರಡುವ ಮೊದಲು ಅದಕ್ಕಾಗಿ ಸಿದ್ಧ ಮಾಡಿಕೊಳ್ಳಿರಿ
- ಕೆಲವೊಮ್ಮೆ ನಿಮ್ಮನ್ನು ಸ್ಥಾನದಲ್ಲಿರಿಸಿಕೊಳ್ಳಲು ದೇವರು ಇತರ ಜನರ ಕ್ರಿಯೆಗಳನ್ನು ಉಪಯೋಗಿಸುವನು

  **ಉದಾಹರಣೆಗೆ** : ಯೋಸೇಫನು
- ಕೌಶಲ್ಯವುಳ್ಳವರಾಗಿರಿ ಗುರಿಯಿಲ್ಲದೆ ಅಲೆದಾಡಬೇಡಿರಿ
- ನಿಮ್ಮ ತಪ್ಪುಗಳಿಗಿಂತಲೂ ದೇವರು ಮಹೋನ್ನತನು ಆತನ ಚಿತ್ತವನ್ನು ಮಾಡಲು ಆತನು ತಿರುಗಿ ನಿಮ್ಮನ್ನು ಸ್ಥಾನದಲ್ಲಿ ಇರಿಸುವನು.

  **ಉದಾ**: ಮೋಶೆ ಮತ್ತು ಯೋನನು.

# 5

# ದೇವರ ಉನ್ನತ ಕರೆಯ ಮೌಲ್ಯ (ಬೆಲೆ)

ನಿಮ್ಮ ಜೀವಿತಕ್ಕಿರುವ ದೇವರ ಕರೆಯ ನೆರವೇರಿಕೆಗೆ ನೀವು ಏನಾದರೊಂದು ಬೆಲೆ ಕೊಡಬೇಕಾಗಿದೆ

ಲೂಕ 14:27
**ಯಾವನಾದರೂ ತನ್ನ ಶಿಲುಬೆಯನ್ನು ಹೊತ್ತುಕೊಂಡು ನನ್ನ ಹಿಂದೆ ಬಂದ ಹೊರತು ಅವನು ನನ್ನ ಶಿಷ್ಯನಾಗಿರಲಾರನು.**

ಶಿಲುಬೆಯು:

- ಶ್ರಮವೇದನೆಯ ಸ್ಥಳ
- ಅಗಲಿಕೆಯ ಸ್ಥಳ
- ತ್ಯಾಗದ ಸ್ಥಳ

ತ್ಯಾಗವು = ನಿಮ್ಮ ಹಕ್ಕಿನದಾಗಿರುವ ಏನಾದರೊಂದನ್ನು ಕೊಡುವುದೇ ಆಗಿದೆ.

ಫಿಲಿಪ್ಪಿಯವರಿಗೆ 3:7
**ಆದರೆ ನನಗೆ ಲಾಭವಾಗಿದ್ದಂಥವುಗಳನ್ನು ಕ್ರಿಸ್ತನ ನಿಮಿತ್ತ ನಷ್ಟವೆಂದೆಣಿಸಿದ್ದೇನೆ**

ಯೋಹಾನನು 12:24-26
**ನಿಮಗೆ ನಿಜ ನಿಜವಾಗಿ, ಹೇಳುತ್ತೇನೆ, ಗೋಧಿಯ ಕಾಳು ಭೂಮಿಯಲ್ಲಿ ಬಿದ್ದು ಸಾಯದಿದ್ದರೆ ಒಂದೇಯಾಗಿ ಉಳಿಯುವುದು; ಸತ್ತರೆ ಬಹಳ ಫಲಕೊಡುವುದು, ತನ್ನ ಪ್ರಾಣದ ಮೇಲೆ ಮಮತೆಯಿಡುವವನು ಅದನ್ನು ಕಳಕೊಳ್ಳುವನು. ಇಹಲೋಕದಲ್ಲಿ ತನ್ನ ಪ್ರಾಣವನ್ನು ಹಗೆ ಮಾಡುವವನು ನಿತ್ಯಜೀವಕ್ಕಾಗಿ ಅದನ್ನು ಕಾಪಾಡಿಕೊಳ್ಳುವನು ಯಾವನಾದರೂ ನನ್ನ ಸೇವೆಯನ್ನು ಮಾಡುವವನಾದರೆ ನನ್ನ ಹಿಂದೆ ಬರಲಿ; ಮತ್ತು ಎಲ್ಲಿ ನಾನು ಇರುತ್ತೇನೋ ಅಲ್ಲಿ ನನ್ನ ಸೇವಕನು ಸಹ ಇರುವನು. ಯಾವನಾದರೂ ನನ್ನ ಸೇವೆಯನ್ನು ಮಾಡುವವನಾದರೆ ತಂದೆಯು ಅವನಿಗೆ ಬಹುಮಾನ ಮಾಡುವನು.**

ನೀವು ಮಾಡುವಂತಹ ಪ್ರತಿಯೊಂದು ತ್ಯಾಗವು ದೇವರ ರಾಜ್ಯದ ಮಹತ್ವದ ಫಲದಾಯಕತ್ವಕ್ಕೆ ನಿಮ್ಮನ್ನು ನಡೆಸುತ್ತದೆ.

## 5.1 ಪ್ರತಿದಿನದ ತ್ಯಾಗಗಳು

1 ಕೊರಿಂಥದವರಿಗೆ 15:30-33

**ನಾವು ಸಹ ಪ್ರತಿ ಗಳಿಗೆಯಲ್ಲಿಯೂ ಯಾಕೆ ಜೀವದ ಭಯದಿಂದಿದ್ದೇವೆ? ಸಹೋದರರೇ, ನಮ್ಮ ಕರ್ತನಾದ ಕ್ರಿಸ್ತಯೇಸುವಿನಲ್ಲಿ ನಿಮ್ಮನ್ನು ಕುರಿತು ನನಗಿರುವ ಹೆಚ್ಚಳದ ಮೇಲೆ ಆಣೆ ಇಟ್ಟು ನಾನು ದಿನಾಲು ಸಾಯುತ್ತಲಿದ್ದೇನೆ ಎಂದು ಹೇಳುತ್ತೇನೆ. ನಾನು ಎಫೆಸದಲ್ಲಿ ಮೃಗಗಳೊಂದಿಗೆ ಯುದ್ಧ ಮಾಡಿದ್ದು ಕೇವಲ ಮಾನುಷಾಭಿಪ್ರಾಯದಿಂದಾದರೆ ನನಗೇನು ಪ್ರಯೋಜನ? ಸತ್ತವರು ಎದ್ದು ಬರುವದಿಲ್ಲವಾದರೆ ತಿನ್ನೋಣ, ಕುಡಿಯೋಣ, ನಾಳೆ ಸಾಯುತ್ತೇವಲ್ಲ. ಮೋಸಹೋಗಬೇಡಿರಿ; ದುಸ್ಸಹವಾಸವು ಸದಾಚಾರವನ್ನು ಕೆಡಿಸುತ್ತದೆ.**

ದಿನನಿತ್ಯದ ತ್ಯಾಗಗಳು (ಅರ್ಪಣೆಗಳು), ಅನಾವಶ್ಯಕ ವಿಷಯಗಳಿಂದ ನಿಮ್ಮನ್ನು ಬೇರ್ಪಡಿಸಿಕೊಳ್ಳುವುದಾಗಿದೆ. ಇತರರು (ನಿಮ್ಮ ಜೊತೆಗಾರರು) ಮಾಡುವಂತಹ ವಿಷಯಗಳನ್ನು ನೀವು ಮಾಡದೇ ಇರುವಂತೆ ಆರಿಸಿಕೊಳ್ಳುವುದಾಗಿದೆ.

1 ಕೊರಿಂಥದವರಿಗೆ 9:24-27

**ರಂಗಸ್ಥಾನದಲ್ಲಿ ಓಡುವದಕ್ಕೆ ಗೊತ್ತಾದವರೆಲ್ಲರೂ ಓಡುತ್ತಾರಾದರೂ ಒಬ್ಬನು ಮಾತ್ರ ಬಿರುದನ್ನು ಹೊಂದುತ್ತಾನೆ. ಎಂಬುದು ನಿಮಗೆ ತಿಳಿಯದೋ? ಅವರಂತೆ ನೀವೂ ಬಿರುದನ್ನು ಪಡಕೊಳ್ಳಬೇಕೆಂತಲೇ ಓಡಿರಿ. ಅದರಲ್ಲಿ ಹೋರಾಡುವವರೆಲ್ಲರು ಎಲ್ಲಾ ವಿಷಯಗಳಲ್ಲಿ ಮಿತವಾಗಿರುತ್ತಾರೆ. ಅವರು ಬಾಡಿಹೋಗುವ ಜಯಮಾಲಿಕೆಯನ್ನು ಹೊಂದುವದಕ್ಕೆ ಸಾಧನೆ ಮಾಡುತ್ತಾರೆ. ನಾವಾದರೋ ಬಾಡಿಹೋಗದ ಜಯಮಾಲಿಕೆಯನ್ನು ಹೊಂದುವದಕ್ಕೆ ಸಾಧನೆ ಮಾಡುವವರಾಗಿದ್ದೇವೆ. ಹೀಗಿರಲಾಗಿ ನಾನು ಸಹ ಗುರಿಗೊತ್ತಿಲ್ಲದವನಾಗಿ ಓಡದೆ ಗೆಲ್ಲಬೇಕೆಂದಿರುವ ಅವರಂತೆಯೇ ಓಡುತ್ತೇನೆ; ನಾನು ಗಾಳಿಯನ್ನು ಗುದ್ದುವವನಾಗಿರದೆ ಗೆಲ್ಲಬೇಕೆಂದವನಾಗಿ ಗುದ್ದಾಡುತ್ತೇನೆ. ಇತರರನ್ನು ಹೋರಾಟಕ್ಕೆ ಕರೆದ ಮೇಲೆ ನಾನೇ ಅಯೋಗ್ಯನೆನಿಸಿಕೊಂಡೇನೋ ಎಂಬ ಭಯದಿಂದ ನನ್ನ ಮೈಯ್ಯನ್ನು ಜಜ್ಜಿ ಸ್ವಾಧೀನ ಪಡಿಸಿಕೊಳ್ಳುತ್ತೇನೆ.**

ರೋಮಾಪುರದವರಿಗೆ 12:1,2

**ಆದುದರಿಂದ ಸಹೋದರರೇ, ದೇವರ ಕನಿಕರವನ್ನು ನಿಮ್ಮ ನೆನಪಿಗೆ ತಂದು ನಿಮ್ಮನ್ನು ಬೇಡಿಕೊಳ್ಳುವದೇನೆಂದರೆ. ನೀವು ನಿಮ್ಮ ನಿಮ್ಮ ದೇಹಗಳನ್ನು ದೇವರಿಗೆ ಮೀಸಲಾಗಿಯೂ ಮೆಚ್ಚಿಗೆಯಾಗಿಯೂ ಇರುವ ಸಜೀವ ಯಜ್ಞನಾಗಿ ಅರ್ಪಿಸಿರಿ; ಇದೇ ನಿಮ್ಮ ವಿವೇಕ ಪೂರ್ವಕವಾದ ಆರಾಧನೆಯು. ಇಹಲೋಕದ ನಡುವಳಿಕೆಯನ್ನು ಅನುಸರಿಸದೆ ನೂತನ ಮನಸ್ಸನ್ನು ಹೊಂದಿಕೊಂಡು ಪರಲೋಕಭಾವದವರಾಗಿರಿ. ಹೀಗಾದರೆ ದೇವರ ಚಿತ್ತಕ್ಕನುಸಾರವಾದದ್ದು ಅಂದರೆ ಉತ್ತಮವಾದದ್ದೂ ಮೆಚ್ಚಿಕೆಯಾದದ್ದೂ ದೋಷವಿಲ್ಲದ್ದೂ ಯಾವ ಯಾವದೆಂದು ವಿವೇಚಿಸಿ ತಿಳುಕೊಳ್ಳುವಿರಿ.**

## 5.2 ಜೀವಿತದ ತ್ಯಾಗಗಳು (ಅರ್ಪಣೆಗಳು)

**ಉದಾಹರಣೆ:** ಅಬ್ರಹಾಂ (ಆದಿಕಾಂಡ 12:1) ಮೋಶೆ (ಇಬ್ರಿಯರಿಗೆ 11:24-26) ಜೀವಿತದ ತ್ಯಾಗಗಳು, ದೇವರ ರಾಜ್ಯಕ್ಕಾಗಿ ನೀವು ಮಾಡುವಂತಹ ದೊಡ್ಡ ತ್ಯಾಗಗಳಾಗಿವೆ.

ಉದಾಹರಣೆಗೆ : ಭೌಗೋಳಿಕವಾಗಿ ಪುನರ್ ಸ್ಥಳಸ್ಥಾಪನೆ, ಕೆಲಸವನ್ನು ತ್ಯಜಿಸುವುದು; ಮುಂತಾದವು

## 5.3 ಆತ್ಮನು ನಡೆಸಿದ ತ್ಯಾಗ (ಪ್ರತಿ)ಶರೀರದ ತ್ಯಾಗ

ಯೋಹಾನ 3:6
**ದೇಹದಿಂದ ಹುಟ್ಟಿದ್ದು ದೇಹವೇ; ಆತ್ಮನಿಂದ ಹುಟ್ಟಿದ್ದು ಆತ್ಮವೇ.**

1 ಕೊರಿಂಥದವರಿಗೆ 3:12-15
**ಆ ಆಸ್ತಿವಾರದ ಮೇಲೆ ಚಿನ್ನ ಬೆಳ್ಳಿ, ರತ್ನ ಕಟ್ಟಿಗೆ ಹುಲ್ಲು ಆಪು ಮುಂತಾದವುಗಳಲ್ಲಿ ಯಾವದರಿಂದ ಕಟ್ಟಿದರೂ ಅವನವನ ಕೆಲಸವು ವ್ಯಕ್ತವಾಗುವದು. ಕ್ರಿಸ್ತನು ಬರುವ ದಿನವು ಬೆಂಕಿಯೊಡನೆ ಉದಯವಾಗಿ ಆ ಕೆಲಸವನ್ನು ಸ್ಪಷ್ಟವಾಗಿ ತೋರಿಸುವುದು; ಅವನವನ ಕೆಲಸವೆಂಥದೋ ಆ ಬೆಂಕಿ ಶೋಧಿಸುವದು ಒಬ್ಬನು ಆ ಅಸ್ತಿವಾರದ ಮೇಲೆ ಕಟ್ಟಿದ್ದು ಉಳಿದರೆ ಅವನಿಗೆ ಸಂಬಳ ಬರುವದು ಒಬ್ಬನು ಕಟ್ಟಿದ್ದು ಸುಟ್ಟು ಹೋದರೆ ಅವನಿಗೆ ಸಂಬಳವು ನಷ್ಟವಾಗುವುದು; ತಾನಾದರೋ ರಕ್ಷಣೆ ಹೊಂದುವನು, ಆದರೆ ಬೆಂಕಿಯೊಳಗಿಂದ ತಪ್ಪಿಸಿಕೊಂಡವನ ಹಾಗಿರುವನು.**

- ದೇವರು ನಮ್ಮಿಂದ ಅಪೇಕ್ಷಿಸುವ ಬೆಲೆಯಂತೆ ಆತನು ಮತ್ತೊಬ್ಬರಿಂದ ಅಪೇಕ್ಷಿಸುವ ಬೆಲೆಯು ಇರಲಾರದು.
- ನಿಮ್ಮ ಬೆಲೆಯನ್ನು ಸಂತೋಷದಿಂದ ಪಾವತಿಸಿರಿ.

# 6

# ನಿಮ್ಮ ಓಟವನ್ನು ಕೊನೆಗಾಣಿಸುವುದು (ಪೂರೈಸುವುದು)

ಲೂಕ 14:27-35

**ಯಾವನಾದರೂ ತನ್ನ ಶಿಲುಬೆಯನ್ನು ಹೊತ್ತುಕೊಂಡು ನನ್ನ ಹಿಂದೆ ಬಂದ ಹೊರತು ಅವನು ನನ್ನ ಶಿಷ್ಯನಾಗಿರಲಾರನು. ನಿಮ್ಮಲ್ಲಿ ಯಾವನಾದರೂ ಒಂದು ಬುರುಜನ್ನು ಕಟ್ಟಿಸಬೇಕೆಂದು ಯೋಚಿಸಿದರೆ ಅವನು ಮೊದಲು ಕೂತುಕೊಂಡು ಅದಕ್ಕೆ ಎಷ್ಟು ಖರ್ಚು ಹಿಡಿದೀತು, ಅದನ್ನು ತೀರಿಸುವದಕ್ಕೆ ಸಾಕಾಗುವಷ್ಟು ಹಣ ನನ್ನಲ್ಲಿ ಉಂಟೋ ಎಂದು ಲೆಕ್ಕ ಮಾಡುವದಿಲ್ಲವೇ? ಹೀಗೆ ಲೆಕ್ಕ ಮಾಡದೆ ಅದಕ್ಕೆ ಅಸ್ತಿವಾರ ಹಾಕಿದ ಮೇಲೆ ಆ ಕೆಲಸವನ್ನು ಪೂರೈಸಲಾರದೆ ಹೋದರೆ ನೋಡುವವರೆಲ್ಲರು ಈ ಮನುಷ್ಯನು ಕಟ್ಟಿಸುವದಕ್ಕಂತೂ ತೊಡಗಿದನು, ಕೆಲಸಪೂರೈಸಲಾರದೇ ಹೋದನು ಎಂದು ಅವನನ್ನು ಹಾಸ್ಯ ಮಾಡಾರು. ಇಲ್ಲವೆ ಯಾವ ಅರಸನಾದರೂ ಮತ್ತೊಬ್ಬ ಅರಸನ ಸಂಗಡ ಯುದ್ಧ ಮಾಡುವದಕ್ಕೆ ಹೋಗುವಾಗ ತನ್ನ ಮೇಲೆ ಇಪ್ಪತ್ತು ಸಾವಿರ ದಂಡು ತೆಗೆದುಕೊಂಡು ಬರುವವನನ್ನು ತಾನು ಹತ್ತು ಸಾವಿರ ದಂಡಿನಿಂದ ಎದುರಿಸುವದಕ್ಕೆ ಶಕ್ತನಾಗುವೆನೋ ಇಲ್ಲವೋ ಎಂದು ಕೂತುಕೊಂಡು ಆಲೋಚಿಸುವದಿಲ್ಲವೇ? ತಾನು ಶಕ್ತನಲ್ಲದಿದ್ದರೆ ಬರುವ ಅರಸನು ಇನ್ನೂ ದೂರದಲ್ಲಿರುವಾಗಲೇ ರಾಯಭಾರಿಗಳನ್ನು ಕಳುಹಿಸಿ ಸಂಧಾನಕ್ಕೆ ಒಪ್ಪಂದವನ್ನು ಕೇಳಿಕೊಳ್ಳುವನು. ಹಾಗೆಯೇ ನಿಮ್ಮಲ್ಲಿ ಯಾವನೇ ಆಗಲಿ ತನಗಿರುವದನ್ನೇಲ್ಲಾ ಬಿಟ್ಟುಬಿಡದೆ ಹೋದರೆ ಅವನು ನನ್ನ ಶಿಷ್ಯನಾಗಿರಲಾರನು ಉಪ್ಪಂತೂ ಒಳ್ಳೆಯ ಪದಾರ್ಥನೇ; ಉಪ್ಪು ಸಹ ಸಪ್ಪಗಾದರೆ ಅದಕ್ಕೆ ಇನ್ನಾತರಿಂದ ರುಚಿ ಬಂದೀತು? ಅದು ಭೂಮಿಗಾದರೋ ತಿಪ್ಪೆಗಾದರೋ ಉಪಯೋಗವಲ್ಲ; ಅದನ್ನು ಹೊರಗೆ ಬಿಸಾಡುತ್ತಾರೆ ಕೇಳುವದಕ್ಕೆ ಕಿವಿಯುಳ್ಳವನು ಕೇಳಲಿ ಅಂದನು.**

ಉತ್ತಮವಾಗಿ ಪ್ರಾರಂಭಿಸುವುದು ಸಾಲದು ನಾವು ಓಟವನ್ನು ಕಡೆಗಾಣಿಸಲು ಸಹನೆ ಹೊಂದಿರಬೇಕು.

## 6.1 ಯೋಜಿಸುವುದು (ಯೋಜನೆ ರೂಪಿಸುವುದು)

ನಾವು ಬೆಲೆಯನ್ನು ಎಣಿಕೆಮಾಡಬೇಕು. ಕಾರ್ಯಗತಿಯ ಒಂದು ಭಾಗವೇ ''ಯೋಜನೆ ಮಾಡುವುದು'' ಯೋಜನೆಯು ದೂರದೃಷ್ಟಿ ಹೊಂದಿರುವುದಾಗಿದೆ. ಇದು ಮುಂಬರುವ ವಿಷಯಗಳನ್ನು(ವಿದ್ಯಮಾನ) ನೀರಿಕ್ಷಿಸುವುದಾಗಿದೆ ಮತ್ತು ಅದರ ಪಥದ ಕ್ರಿಯೆಯ ಕುರಿತು ತೀರ್ಮಾನ ಮಾಡುವುದಾಗಿದೆ.

ಜ್ಞಾನೋಕ್ತಿಗಳು 4:26

**ನೀನು ನಡೆಯುವ ದಾರಿಯನ್ನು ಸಮಮಾಡು; ನಿನ್ನ ಮಾರ್ಗಗಳೆಲ್ಲಾ ದೃಢವಾಗಿರಲಿ.**

ಜ್ಞಾನೋಕ್ತಿಗಳು 6:6-8

**ಸೋಮಾರಿಯೇ, ಇರುವೆಯ ಹತ್ತಿರ ಹೋಗಿ ಅದರ ನಡವಳಿಕೆಯನ್ನು ನೋಡಿ ಜ್ಞಾನವನ್ನು ತಂದುಕೋ ಅದಕ್ಕೆ ನಾಯಕ ಅಧಿಕಾರಿ ಪ್ರಭುಗಳಿಲ್ಲದಿದ್ದರೂ ಸುಗ್ಗಿಯಲ್ಲಿ ತನ್ನ ತೀನಿಯನ್ನು ಕೂಡಿಸಿಡುವುದು, ಕೊಯ್ಲಿನ ಕಾಲದಲ್ಲಿ ತನಗೆ ಬೇಕಾದಷ್ಟು ಆಹಾರವನ್ನು ಸಂಗ್ರಹಿಸಿಟ್ಟುಕೊಳ್ಳುವುದು.**

ಜ್ಞಾನೋಕ್ತಿಗಳು 14-8,15

**ಮಾರ್ಗವನ್ನು ಗ್ರಹಿಸಿಕೊಳ್ಳುವದೇ ಜಾಣರ ಜ್ಞಾನ; ಮೂಢರ ಮೂರ್ಖತನ ಮೋಸಕರ. ಮೂಢನು ಯಾವ ಮಾತನ್ನಾದರೂ ಚೆನ್ನಾಗಿ ನಂಬುವನು ಜಾಣನು ತನ್ನ ನಡತೆಯನ್ನು ಚೆನ್ನಾಗಿ ಗಮನಿಸುವನು.**

ಜ್ಞಾನೋಕ್ತಿಗಳು 22:3

**ಜಾಣರು ಕೇಡನ್ನು ಕಂಡು ಅಡಗಿಕೊಳ್ಳುವನು; ಬುದ್ಧಿಹೀನನು ಮುಂದೆ ಹೋಗಿ ನಷ್ಟಪಡುವನು**

ನಮಗೆ ತಿಳಿದಿರುವ ನಮ್ಮ ಜೀವಿತಕ್ಕಿರುವ ದೇವರ ಚಿತ್ತಕ್ಕೆ ಅನುಗುಣವಾಗಿ ನಾವು ಯೋಜನೆ ಮಾಡುತ್ತೇವೆ. ನಮ್ಮ ಯೋಜನೆಗಳನ್ನು ಮತ್ತು ನಮ್ಮನ್ನೇ ಆತನ ಚಿತ್ತಕ್ಕೆ ಸಮರ್ಪಿಸುತ್ತೆವೆ

2 ಕೊರಿಂಥದವರಿಗೆ 1:15-17

**ನಾನು ಇಂಥ ಭರವಸೆವುಳ್ಳವನಾಗಿದ್ದು ನಿಮಗೆ ಎರಡು ಸಾರಿ ನಮ್ಮ ಮೂಲಕ ಕೃಪಾವರ ಉಂಟಾಗಬೇಕೆಂದು ಯೋಚಿಸಿದ್ದೆನು ಮೊದಲು ನಿಮ್ಮ ಬಳಿಗೆ ಬಂದು ನಿಮ್ಮ ಮಾರ್ಗವಾಗಿ ಮೆಕೆದೋನ್ಯಕ್ಕೆ ಹೋಗಿ ಆಮೇಲೆ ಮೆಕೆದೋನ್ಯವನ್ನು ಬಿಟ್ಟು ತಿರುಗಿ ನಿಮ್ಮ ಬಳಿಗೆ ಬಂದು ನಿಮ್ಮಿಂದ ಯೂದಾಯಕ್ಕೆ ಸಾಗ ಕಳುಹಿಸಲ್ಪಡಬೇಕೆಂದು ಯೋಚಿಸಿದ್ದೆನು. ಇದನ್ನು ಯೋಚಿಸಿದಾಗ ಚಪಲಚಿತ್ತನಾಗಿದ್ದೆನೋ? ನಾನು ಯೋಚಿಸುವದನ್ನು ಕೇವಲ ಮಾನುಷಬುದ್ಧಿಯಿಂದ ಯೋಚಿಸಿ ಹೌದು ಹೌದು ಅಂದ ಮೇಲೆ ಅಲ್ಲ ಅಲ್ಲ ಅನ್ನುವವನಾಗಿದ್ದೇನೋ?**

ನಾವು ಮಾಂಸಕ್ಕೆ (ದೇಹಕ್ಕೆ) ಅನುಗುಣವಾಗಿ ಯೋಜನೆ ಮಾಡುವುದಿಲ್ಲ, ಆದರೆ ಆತ್ಮಕ್ಕೆ ಅನುಗುಣವಾಗಿಯೇ ಮಾಡುತ್ತೇವೆ.

ನಾವು ಆತ್ಮನ - ಪ್ರೇರಣೆಯಿರುವ ಯೋಜನೆಗಳನ್ನು ಮತ್ತು ಮುಕ್ತಾಯದ ಪಥದ ಪ್ರಗತಿಗೆ ನಮಗೆ ಸಹಾಯ ಮಾಡುವವುಗಳನ್ನು ಅಭಿವೃದ್ಧಿ ಪಡಿಸುವುದು ಮತ್ತು ನಿರ್ವಹಿಸುವುದು ಅವಶ್ಯಕ. ದೇವರು ಯಾವಾಗಲೂ ನಮ್ಮ ಮನಸ್ಸು, ವಿವೇಚನಾಶಕ್ತಿ ಮತ್ತು ಆಲೋಚನೆಗಳನ್ನು ಬಿಟ್ಟು ಸ್ವತಂತ್ರವಾಗಿ ಕಾರ್ಯ ಮಾಡುವುದಿಲ್ಲ (ಆದಾಗ್ಯೂ ಆತನು ಕೆಲವು ಸಮಯಗಳಲ್ಲಿ ಮಾಡುತ್ತಾನೆ). ದೇವರು ನಮಗೆ ಮನಸ್ಸು, ವಿವೇಚನಾ ಶಕ್ತಿ ಆಲೋಚನೆಯನ್ನು ಕೊಟ್ಟಾತನಾಗಿದ್ದಾನೆ ಮತ್ತು ಆತನ ವಶಕ್ಕೆ

ನಮ್ಮ ಮಾನಸಿಕ ಸಾಮರ್ಥ್ಯಗಳನ್ನು ಇಟ್ಟರೆ, ಆತನು ಯೋಜಿಸಿ ಇಟ್ಟಿರುವವುಗಳಾದ, ವಿಚಾರಗಳು/ಯೋಜನೆಗಳು/ ಆಲೋಚನೆಗಳು/ ಕೌಶಲ್ಯತೆಗಳಿಗೆ ಆತನು ನಮ್ಮನ್ನು ಪ್ರೇರಿಸಿ ನಮ್ಮನ್ನು ಮುಂದೆ ಕರೆದೊಯ್ಯುತ್ತಾನೆ. ಆತನು ಸೃಷ್ಟಿಸಿ ಸಾಧನವಾಗಿ ಉಪಯೋಗಿಸಲು ಕೊಟ್ಟಿರುವ ಬುದ್ಧಿ/ಮಾನಸಿಕ ಸಾಮರ್ಥ್ಯಗಳಿಂದ ಬೇರ್ಪಟ್ಟು ಬಹಳವಾಗಿ ಆತ್ಮನೊಳಗೆ ಇರಲು ನಾವು ಉದ್ದೇಶಿಸುತ್ತೇವೆ ಅಥವಾ ಮತ್ತೊಂದು ಕಡೆಯಲ್ಲಿ ಆತ್ಮನು ಹೇಳುತ್ತಿರುವುದನ್ನು ಕೇಳುವುದರಲ್ಲಿ ಸೋತು ನಮ್ಮ ಇತ್ತೀಚಿನ ವಿಧಾನಕ್ರಮಗಳು/ಸಾಧನಗಳು/ತಂತ್ರಗಳೊಡನೆ ''ಮಾಂಸದಿಂದ'' (ದೇಹದಿಂದ) ಇರಲು ನಾವು ಬಹಳವಾಗಿ ಉದ್ದೇಶಿಸುತ್ತೇವೆ.

## ಪಾಸ್ಟರ ಜಾಕ್ ಹೆಪ್ಪೋರ್ಡರವರಿಂದ 'ಆತ್ಮ-ಪ್ರೇರಿತ ಯೋಜನೆ' ಯ ಮೇಲಿನ ವಿಮರ್ಶೆ (ಟೀಕೆಗಳು)

*ಯಾವಾಗಲಾದರೂ ಆತನು, ನಮಗೆ ದೊಡ್ಡ ಆದಾಯದ ನಿರೀಕ್ಷೆಯನ್ನು ಪ್ರೇರಿಸಿದರೆ, ತಡವಿಲ್ಲದೆ, ನಾವು ಅದೇ ಪ್ರಕಾರವಾಗಿ ಪ್ರಾರ್ಥಿಸುತ್ತೇವೆ. ಯಾವುದಾದರೂ ಒಂದನ್ನು ಕಡಿಮೆ ಮಾಡಬೇಕೆಂಬುದಾಗಿ ನಾವು ಯೋಚಿಸಿದರೆ ಅದನ್ನು ಅಪರಾಧವೆಂದೆಣಿಸದೆ ಮಾಡುತ್ತೇವೆ ಆದರಿಂದ ''ಗುರಿ'' ಅನ್ನುವುದು ಏನಾದರೊಂದು ನಾವು ನಿಶ್ಚಯಿಸಿದ್ದಲ್ಲ. ನಾವು ಅದನ್ನು ರಕ್ಷಿಸುವ ಅವಶ್ಯಕತೆಯಿಲ್ಲ. ಇದು ನಿಜವಾಗಿ ಹೇಳುವುದಾದರೆ ಸಮಯವು ಮುಂದುವರೆದಂತೆ ದೇವರ ಉದ್ದೇಶವು ಇದನ್ನು ಸ್ಪಷ್ಟಗೊಳಿಸುತ್ತದೆ.*

*ಜನರು ಮತ್ತು ಸಂಸ್ಥೆಗಳು ಯಾವಾಗ ಶಾರೀರಿಕ (ದೈಹಿಕ) ಉತ್ಸಾಹದಿಂದ ಆತ್ಮಿಕ ಗುರಿಗಳನ್ನು ಕಟ್ಟಿದಂತಾಗುವದೋ ಆಗ ಕ್ರಮೇಣವಾಗಿ ನಶಿಸಲು ಪ್ರಾರಂಭಿಸುತ್ತವೆ.*

*ದೇವರ ಕ್ರಮದಲ್ಲಿ, ಜನರನ್ನು ರುಬ್ಬಿ ಪುಡಿಮಾಡುವಷ್ಟು ನಿರಾಶಾದಾಯಕರನ್ನಾಗಿ ಮಾಡುವುದಾಗಲಿ (ಹಿಂಸಿಸುವುದಾಗಲಿ) ಅಥವಾ ಪ್ರಮಾಣಿಕತೆಯನ್ನು ಬಲಿಮಾಡುವಷ್ಟು ಹಣಕಾಸಿನ ಹೊರೆಗೆ ಒತ್ತು ಕೊಡುವುದಾಗಲಿ, ಸುಲಿಗೆ (ದುರ್ಲಾಭಪಡೆಯುವಿಕೆಯ) ವ್ಯೂಹರಚನೆ, ಅಥವಾ ಪ್ರಪಂಚ ಶೈಲಿಯ ರಾಜಕಾರಣಿತ್ವ ಮುಂತಾದ ನಿರಾಶ/ಅಪಾಯಕರ ಸಂದರ್ಭ (ಪರಿಸ್ಥಿತಿ)ಗಳಾಗಲಿ ಎಂದಿಗೂ ಇರುವುದಿಲ್ಲ.*

*ಆದರೆ ನಮ್ಮ ಇಚ್ಛೆಯು "ಜನ್ಮಕ್ಕೆ ಯೋಜನೆ ಮಾಡುವ ಬದಲು" "ಯೋಜನೆ ನೀಡುವುದಾಗಿದೆ" ದರ್ಶನದ ಕಲ್ಪನೆ, ಯೋಜನೆಗಳ ಅವಧಿ, ಮತ್ತು ಬಿಡುಗಡೆಗೊಳಿಸಲು ಹೊರುವುದು ಇವೆಲ್ಲವೂ ಲಜ್ಜೆಯಿಲ್ಲದ ಆತ್ಮನ ಪ್ರಾರ್ಥನೆಯಿಂದ ಮತ್ತು ಪವಿತ್ರಾತ್ಮನ ನಡಿಸುವಿಕೆ, ತಿದ್ದುಪಡಿ, ಸಮಯ, ಪ್ರೇರಿತ ನಂಬಿಕೆ, ಸಂಪನ್ಮೂಲ ಬಿಡುಗಡೆ ಪ್ರತಿಕ್ರಿಯೆ ಉತ್ತೇಜನ, ನೆಡೆಸುವಿಕೆಯಿಂದ ಪಾಲಿಸುವುದಾಗಿದೆ ಇವುಗಳಿಗಾಗಿ ಆತನನ್ನು ಸಂಪೂರ್ಣವಾಗಿ ಆತುಕೊಳ್ಳುವುದಾಗಿದೆ.*

- *ನಾವು ಪವಿತ್ರಾತ್ಮನ ಮಾರ್ಗದರ್ಶನದ ಪರಿಪೂರ್ಣ ವಿವೇಕವಿಲ್ಲದೆ, ನಾಯಕರಿಂದ ದೃಢೀಕರಿಸದೆ ಇರುವ ಯಾವುದನ್ನೂ ಕೈಗೊಳ್ಳುವುದಿಲ್ಲ.*
- *ನಾವು ಪದೋನ್ನತಿಯ ಯಾವುದೇ ಉಪಾಯಗಳನ್ನು ಬಳಸುವುದಿಲ್ಲ ಅಥವಾ ಮನುಷ್ಯನ ಪ್ರಭಾವಶಾಲಿ ಸಂಗ್ರಹಣಾ ಪದ್ಧತಿ (ನಿಧಿ-ಎಬ್ಬಿಸುವಿಕೆ)ಯ ಮೇಲೆ ಆತುಕೊಳ್ಳುವುದಿಲ್ಲ ಅಥವಾ ಫಲೋತ್ಪಾದಕವಾಗಿರುವ ಶೈಲಿಯನ್ನು ಅನುಸರಿಸುವುದಿಲ್ಲ.*
- *ನಾವು ಆರಾಧನೆ, ಸಂಬಂಧ, ಶಿಷ್ಯತ್ವ ಮತ್ತು ಸೇವೆಯ ಪ್ರಾಧಾನ್ಯತೆಗಳನ್ನು ಉದಾಸೀನಮಾಡುವ ಯಾವುದನ್ನು ಪಾಲಿಸುವುದಿಲ್ಲ/ನಡೆಸುವುದಿಲ್ಲ*
- *ನಾವು ಬಹಳ ಆಗಾಗ್ಗೆ ಯಾವಾಗಲೂ, ಅಧಿಕವಾಗಿ ಪ್ರಾರ್ಥಿಸುತ್ತೇವೆ.*
- *ನಮ್ಮೆಲ್ಲರಿಗೆ ಸ್ಪಷ್ಟತೆ, ಸುಸಂಬದ್ಧತೆ ಮತ್ತು ದೃಢನಿಶ್ಚಯ ಕೊಡಲು ದೇವರಾತ್ಮನಲ್ಲಿ ವಿಶ್ವಾಸವಿಡಬೇಕೆಂಬುದಾಗಿ ನಾವು ಆಲೋಚಿಸುತ್ತೇವೆ.*
- *ನಾವು "ನಂಬಿಕೆಯಿಲ್ಲದೆ ದೇವರನ್ನು ಮೆಚ್ಚಿಸುವುದು ಅಸಾಧ್ಯ" ಎಂಬುದಾಗಿ ತಿಳಿಯುವುದನ್ನು ಮಾಡುವಾಗ, ಆತನು ತನ್ನ ಉದ್ದೇಶಗಳನ್ನು ನಮ್ಮಲ್ಲಿ ಬೆಳೆಸುತ್ತಾನೆ ಎಂಬುದಾಗಿ ನಂಬುತ್ತೇವೆ.*

## 6.2 ಓಟ ಕಡೆಗಾಣಿಸುವವರೆಗೂ ಓಡುತ್ತಿರುವುದು

ಇಬ್ರಿಯರಿಗೆ 12:1,2

**ಆದಕಾರಣ ಇಷ್ಟು ಮಂದಿ ಸಾಕ್ಷಿಯವರು ಮೇಘದೋಪಾದಿಯಲ್ಲಿ ನಮ್ಮ ಸುತ್ತಲು ಇರುವುದರಿಂದ ನಮಗೆ ಅಭ್ಯಂತರ ಮಾಡುವ ಎಲ್ಲಾ ಭಾರವನ್ನೂ ಹತ್ತಿಕೊಳ್ಳುವ ಪಾಪವನ್ನು ನಾವು ಸಹ ತೆಗೆದಿಟ್ಟು ನಂಬಿಕೆಯನ್ನು ಹುಟ್ಟಿಸುವವನೂ ಪೂರೈಸುವವನೂ ಆಗಿರುವ ಯೇಸುವಿನ ಮೇಲೆ ದೃಷ್ಟಿಯಿಟ್ಟು ನಮಗೆ ನೇಮಕವಾದ ಓಟವನ್ನು ಸ್ಥಿರಚಿತ್ತದಿಂದ ಓಡೋಣ. ಆತನು ತನ್ನ ಮುಂದೆ ಇಟ್ಟಿದ್ದ ಸಂತೋಷಕ್ಕೋಸ್ಕರ**

**ಅವಮಾನವನ್ನು ಅಲಕ್ಷ್ಯಮಾಡಿ. ಶಿಲುಬೆಯ ಮರಣವನ್ನು ಸಹಿಸಿಕೊಂಡು ದೇವರ ಸಿಂಹಾಸನದ ಬಲಗಡೆಯಲ್ಲಿ ಆಸನಾರೂಢನಾಗಿದ್ದಾನೆ.**

ನಮ್ಮ ಓಟವನ್ನು ಮುಗಿಸಲು ಅದು ಏನನ್ನು ಬಯಸುತ್ತದೆ?

ನನಗೆ ನೇಮಿತವಾದ ಓಟವನ್ನು ಮುಗಿಸಲು ನಾನು ಈಗ ಏನು ಮಾಡಬೇಕು?

- ಪ್ರತಿಯೊಂದು ಭಾರವನ್ನು ತೆಗೆದಿಡಬೇಕು.
- ಸುಲಭವಾಗಿ ಹತ್ತಿಕೊಳ್ಳುವ ಪಾಪವನ್ನು ತೆಗೆದಿಡಬೇಕು
- ಸ್ಥಿರ ಚಿತ್ತದಿಂದ ಓಡಬೇಕು
- ಯೇಸುವಿನ ಮೇಲೆ ದೃಷ್ಟಿಯಿಡಬೇಕು

## ಅಪೊಸ್ತಲನಾದ ಪೌಲನು

ಅಪೊಸ್ತಲರ ಕೃತ್ಯಗಳು 20:22-24

**ಇಗೋ, ನಾನು ಈಗ ಆತ್ಮ ನಿರ್ಬಂಧವುಳ್ಳವನಾಗಿ ಯೆರೂಸಲೇಮಿಗೆ ಹೋಗುತ್ತೇನೆ. ಅಲ್ಲಿ ನನಗೆ ಏನು ಸಂಭವಿಸುವದೋ ನಾನರಿಯೆ ನಿನಗೆ ಬೇಡಿಗಳೂ ಸಂಕಟಗಳೂ ಕಾದುಕೊಂಡಿವೆ ಎಂದು ಪವಿತ್ರಾತ್ಮನು ಎಲ್ಲಾ ಪಟ್ಟಣಗಳಲ್ಲಿಯೂ ನನಗೆ ಖಂಡಿತವಾಗಿ ಹೇಳುತ್ತಾನೆ. ಇಷ್ಟು ಮಾತ್ರ ಬಲ್ಲೆನು ಆದರೆ ಪ್ರಾಣವನ್ನು ಉಳಿಸಿಕೊಳ್ಳುವುದೇ ವಿಶೇಷವೆಂದು ನಾನು ಎಣಿಸುವುದಿಲ್ಲ. ದೇವರ ಕೃಪೆಯ ವಿಷಯವಾದ ಸುವಾರ್ತೆಯನ್ನು ಆಸಕ್ತಿಯಿಂದ ಪ್ರಕಟಿಸಬೇಕೆಂಬುದಾಗಿ ಕರ್ತನಾದ ಯೇಸುವಿನಿಂದ ನಾನು ಹೊಂದಿರುವ ಸೇವೆಯೆಂಬ ಓಟವನ್ನು ಕಡೆಗಾಣಿಸುವದೊಂದೇ ನನ್ನ ಅಪೇಕ್ಷೆ**

ಅಪೊಸ್ತಲರ ಕೃತ್ಯಗಳು 21:13

**ಅದಕ್ಕೆ ಪೌಲನು ನೀವು ಅತ್ತತ್ತು ಯಾಕೆ ನನ್ನನ್ನು ಎದೆ ಒಡಿಸುತ್ತೀರಿ? ನಾನು ಕರ್ತನಾದ ಯೇಸುವಿನ ಹೆಸರಿನ ನಿಮಿತ್ತವಾಗಿ ಯೆರೂಸಲೇಮಿನಲ್ಲಿ ಬೇಡೀ ಹಾಕಿಸಿಕೊಳ್ಳುವದಕ್ಕೆ ಮಾತ್ರವಲ್ಲದೆ ಸಾಯುವದಕ್ಕೂ ಸಿದ್ಧವಾಗಿದ್ದೇನೆ ಅಂದನು.**

ಪೌಲನು ತನ್ನ ಜೀವಿತವನ್ನು ತನಗ ಪ್ರಿಯವೆಂದೆಣಿಸಲಿಲ್ಲ ಆದುದರಿಂದ ಅವನಿಗೆ ನೇಮಕವಾದ ಸೇವೆಯನ್ನು ಮತ್ತು ಓಟವನ್ನು ಮುಗಿಸಲು ಅದು ಸಹಕಾರಿಯಾಯಿತು.

2 ತಿಮೊಥೆಯನಿಗೆ 4:6-8

**ಯಾಕೆಂದರೆ ನಾನಂತೂ ಈಗಲೇ ಪಾನದ್ರವ್ಯವಾಗಿ ಅರ್ಪಿತನಾಗುತ್ತಾ ಇದ್ದೇನೆ: ನಾನು ಹೊರಟು ಹೋಗಬೇಕಾದ ಸಮಯವು ಸಮೀಪಕ್ಕೆ ಬಂದಿದೆ. ಶ್ರೇಷ್ಟ ಹೋರಾಟವನ್ನು ಮಾಡಿದ್ದೇನೆ ನನ್ನ ಓಟವನ್ನು**

**ಕಡೆಗಾಣಿಸಿದ್ದೇನೆ, ಕ್ರಿಸ್ತನಂಬಿಕೆಯನ್ನು ಕಾಪಾಡಿಕೊಂಡಿದ್ದೇನೆ. ನೀತಿವಂತರಿಗೆ ದೊರಕುವ ಜಯಮಾಲೆಯು ಮುಂದೆ ನನಗೆ ಸಿದ್ಧವಾಗಿದೆ; ಅದನ್ನು ನೀತಿಯುಳ್ಳ ನ್ಯಾಯಾಧಿಪತಿಯಾಗಿರುವ ಕರ್ತನು ಆ ದಿನದಲ್ಲಿ ನನಗೆ ಕೊಡುವನು; ನನಗೆ ಮಾತ್ರವಲ್ಲದೆ ತನ್ನ ಪ್ರತ್ಯಕ್ಷತೆಯನ್ನು ಪ್ರೀತಿಸುವವರೆಲ್ಲರಿಗೂ ಕೊಡುವನು**

ನಿಮ್ಮ ಜೀವಿತಕ್ಕಿರುವ ದೇವರ ಕನಸನ್ನು ಪಾಲಿಸುವುದರಲ್ಲಿ ನಿಮ್ಮ ಪ್ರಯಾಣವನ್ನು ಆನಂದಿಸಿರಿ!

# ಆಲ್ ಪೀಪಲ್ಸ್ ಸಭೆಯೊಡನೆ ಪಾಲುಗಾರರಾಗಿರಿ

ಆಲ್ ಪೀಪಲ್ಸ್ ಸಭೆಯ ಸೇವಕರುಗಳು ಪ್ರಮುಖವಾಗಿ ಉತ್ತರ ಭಾರತದಲ್ಲಿ (ಅ) ನಾಯಕರುಗಳನ್ನು ಬಲಗೊಳಿಸುವುದು. (ಆ) ಸೇವೆಗಾಗಿ ಯೌವ್ವನಸ್ಥರನ್ನು ತರಭೇತಿಗೊಳಿಸುವುದು (ಇ) ಕ್ರಿಸ್ತನ ಅಂಗವನ್ನು ಕಟ್ಟುವುದನ್ನು, ಬಹಳ ಮುಖ್ಯ ಗುರಿಯಾಗಿರಿಸಿಕೊಂಡಿರುವ, ಭಾರತದೇಶದಾದ್ಯಂತ ತನ್ನ ಸ್ವಂತ ಎಲ್ಲೆ ಮೀರಿದ ಸ್ಥಳೀಯ ಸಭೆಯಾಗಿದೆ. ಯೌವ್ವನಸ್ಥರಿಗಾಗಿ ಅನೇಕ ತರಭೇತಿ ಅಧ್ಯಯನ ಸಂಕೀರ್ಣ, ಸಭಾಪಾಲಕರು ಮತ್ತು ಸಭಾಸೇವಕರ ಸಮಾವೇಶವನ್ನು ವರ್ಷಪೂರ್ತಿ ನಡೆಸುವುದು ಮತ್ತು ದೇವರ ವಾಕ್ಯದಲ್ಲಿ ಮತ್ತು ದೇವರಾತ್ಮನಲ್ಲಿ ವಿಶ್ವಾಸಿಗಳನ್ನು ಕಟ್ಟುವ ಉದ್ದೇಶದೊಡನೆ ಭಾರತ ದೇಶದ ಪ್ರಾದೇಶಿಕ ಭಾಷೆಗಳು ಮತ್ತು ಇಂಗ್ಲೀಷ್ ಭಾಷೆಯಲ್ಲಿ ನಮ್ಮ ಸಾವಿರಾರು ಸಂಖ್ಯೆಯ ಪುಸ್ತಗಳನ್ನು ಉಚಿತವಾಗಿ ಹಂಚುವುದನ್ನು ಇದಕ್ಕೆ ಸೇರಿಸಲ್ಪಟ್ಟಂತೆ ಮಾಡುತ್ತಿದ್ದೇವೆ.

ಇಂತಹ ಬೃಹತ್ತಾದ ಹಣದ ಒಳಗೊಳ್ಳುವಿಕೆಯನ್ನು ಮಾಡಲು ಕರ್ತನು ತಾನೇ ನಡೆಸುತ್ತಿದ್ದಾನೆ. ಒಂದು ಬಾರಿಯ ಆರ್ಥಿಕ ಸಹಾಯ ಅಥವಾ ಪ್ರತಿ ತಿಂಗಳ ಆರ್ಥಿಕ ಸಹಾಯದ ಮೂಲಕ ನೀವು ನಮ್ಮ ಜೊತೆ ಆರ್ಥಿಕ ಸಹಾಯದಲ್ಲಿ ಪಾಲುಗಾರರಾಗಲು ನಿಮ್ಮನ್ನು ಸ್ವಾಗತಿಸುತ್ತೇವೆ. ನಮ್ಮ ದೇಶದಾದ್ಯಂತ ಮಾಡುವ ಸೇವಾಕಾರ್ಯಗಳಿಗಾಗಿ ನೀವು ಕಳಿಸುವಂತಹ ನಿಮ್ಮ ಮೊತ್ತವು ಬಹಳವಾಗಿ ಮೆಚುಟಿಗೆವುಳ್ಳದ್ದಾಗಿರುತ್ತದೆ.

ನಿಮ್ಮ ಆರ್ಥಿಕ ಸಹಾಯವನ್ನು ಚೆಕ್ ಮೂಲಕವಾಗಿ ಕಳುಹಿಸಬಹುದು/ನಮ್ಮ ಕಛೇರಿಯ ವಿಳಾಸವಾದ "ಆಲ್ ಪೀಪಲ್ಸ್ ಸಭೆ ಬೆಂಗಳೂರು" ಗೆ ಬ್ಯಾಂಕ್ ಡ್ರಾಫ್ಟ್ ಗಳನ್ನು ಕೊಡಬಹುದು ಅಥವಾ ನಮ್ಮ ಬ್ಯಾಂಕಿನ ಖಾತೆಯ ವಿವರಗಳನ್ನು ಉಪಯೋಗಿಸಿ ನೇರವಾಗಿ ಬ್ಯಾಂಕ್ ಮೂಲಕ ನಿಮ್ಮ ಕಾಣಿಕೆಗಳನ್ನು ವರ್ಗಾಹಿಸಬಹುದು

Account Name: All Peoples Church<br>
Account Number: 0057213809,<br>
IFSC Code: CITI0000004<br>
Bank: Citibank N.A., 506-507,<br>
Level 5, Prestige Meridian 2, # 30,<br>
M.G. Road, Bangalore - 560 001

*ದಯವಿಟ್ಟು ಗಮನಿಸಿ: ಆಲ್ ಪೀಫಲ್ಸ್ ಸಭೆಯು FCRA ಅನುಮತಿ ಹೊಂದಿಲ್ಲ ಮತ್ತು ಭಾರತೀಯ ನಾಗರೀಕರಿಂದ ಮಾತ್ರ ಬ್ಯಾಂಕ್ ಕಾಣಿಕೆಗಳನ್ನು ಅಂಗೀಕರಿಸುತ್ತಿದ್ದೇವೆ. ನಿಮ್ಮ ಕಾಣಿಕೆಗಳನ್ನು ಕೊಡುವಾಗ, ಆಲ್ ಪೀಪಲ್ಸ್ ಸಭೆಯ ಯಾವ ಕ್ಷೇತ್ರದಲ್ಲಿ ನಿಮ್ಮ ಕಾಣಿಕೆಯು ಉಪಯೋಗಿಸಬೇಕೆಂಬುದಾಗಿ ನಿಮ್ಮ ಅಪೇಕ್ಷೆಯನ್ನು ತಿಳಿಯಪಡಿಸಬಹುದು.*

ದಯವಿಟ್ಟು ನಮಗಾಗಿ ಮತ್ತು ನಮ್ಮ ಸೇವೆಗಾಗಿ ಪ್ರಾರ್ಥಿಸಿರಿ! ಧನ್ಯವಾದಗಳು ಮತ್ತು ದೇವರು ನಿಮ್ಮನ್ನು ಆಶೀರ್ವದಿಸಲಿ!

## ಆಲ್ ಪೀಪಲ್ಸ್ ಚರ್ಚ್‌ನ ಪ್ರಕಟಣೆಗಳು

ಕೆಲಸದ ಕಡೆಗೆ ಸತ್ಯವೇದದ ನೋಟ
ನಿನ್ನ ಕರೆಯನ್ನು ಕಡೆಗಣಿಸದಿರು
ನಿರೀಕ್ಷೆಯನ್ನು ಕಳೆದುಕೊಳ್ಳಬೇಡ
ವಿಶ್ವಾಸಿಗಳನ್ನು ಸಜ್ಜುಗೊಳಿಸುವುದು
ವೈಯುಕ್ತಿಕ ಮತ್ತು ತಲೆಮಾರಿನ ಬಂಧನಗಳನ್ನು ಮುರಿಯುವುದು
ನಿಮ್ಮ ಸಭಾಪಾಲಕರಿಗೆ ಹೇಗೆ ಸಹಾಯ ಮಾಡುವುದು
ದೇವರ ರಾಜ್ಯ ಕಟ್ಟುವವರು
ಪರಲೋಕವೆಂದು ಕರೆಯಲ್ಪಡುವ ನಿಜ ಸ್ಥಳ
ದೇವರ ಉದ್ದೇಶಗಳಿಗೆ ಜನ್ಮ ಕೊಡುವುದು
ಬೇರುಗಳಿಗೆ ಕೊಡಲಿ ಹಾಕುವುದು
ನಿಮ್ಮ ಜೀವಿತಕ್ಕಿರುವ ದೇವರ ಉದ್ದೇಶವನ್ನು ನೆರವೇರಿಸುವುದು
ಉಜ್ಜೀವನದಲ್ಲಿ ಒಂದು ಸಭೆ
ದೇವರ ಪ್ರಸನ್ನತೆ
ಜ್ಞಾನ, ಪ್ರಕಟನೆ ಮತ್ತು ಬಲದ ಆತ್ಮನು
ದೇವರು ಒಳ್ಳೆಯ ದೇವರಾಗಿದ್ದಾನೆ
ಅಸ್ತಿವಾರಗಳು ಭಾಗ - 1
ತೆರೆದ ಪರಲೋಕಗಳು
ಜೀವನದ ರಾತ್ರಿಯ ಸಮಯಗಳು
ಪ್ರಾಮಾಣಿಕತೆ
ನಾವು ಕ್ರಿಸ್ತನಲ್ಲಿ ಯಾರಾಗಿದ್ದೇವೆ
ಪರಿವರ್ತನೆ
ಗೌರವದ ಸಂಕೇತ

**ಉಚಿತ ಇ-ಪುಸ್ತಕಗಳು**

ನಮ್ಮ ಚರ್ಚ್ ವೆಬ್ ಸೈಟ್‌ನಿಂದ ನಮ್ಮ ಎಲ್ಲಾ ಪುಸ್ತಕಗಳ ಪಿ ಡಿ ಎಫ್ ಅನುವಾದವನ್ನು ಉಚಿತವಾಗಿ ಸಂಗ್ರಹಿಸಲು ದೊರೆಯುತ್ತವೆ. ಇತರೆ ಪ್ರಾದೇಶಿಕ ಭಾಷೆಗಳಲ್ಲೂ ಸಹ ಈ ಪುಸ್ತಕಗಳು ದೊರೆಯುತ್ತದೆ. ಇಂತಹ ಉಚಿತ ಪುಸ್ತಕಗಳಿಗಾಗಿ ಇ-ಮೇಲ್ ಅಥವಾ ಅಂಚೆಯ ಮೂಲಕವಾಗಿ ನಮ್ಮನ್ನು ಸಂಪರ್ಕಿಸಬಹುದಾಗಿದೆ.

**ಉಚಿತ ಆಡಿಯೋ ಮತ್ತು ವೀಡಿಯೊ ಸಂದೇಶಗಳು**

'ಲಿವಿಂಗ್ ಸ್ಪ್ರಿಂಗ್ ಎಂಬ ಗಾಡ್ ಟಿವಿಯ ಕಾರ್ಯಕ್ರಮದ ಮತ್ತು ಸಮಾವೇಶಗಳ ವಿಡಿಯೋ ರೆಕಾರ್ಡಿಂಗ್ ಗಳಿಗಾಗಿ ಮತ್ತು ನಮ್ಮ ಭಾನುವಾರದ ಸಂದೇಶಗಳ ಆಡಿಯೋ ರೆಕಾರ್ಡಿಂಗ್ (MP3)ಗಳಿಗಾಗಿ ನಮ್ಮ ವೆಬ್ ಸೈಟ್‌ನ್ನು ಸಂಪರ್ಕಿಸಿ.

## ಸತ್ಯವೇದ ಶಾಲೆ

ಮತ್ತು ಸೇವಾತರಬೇತಿಕೇಂದ್ರ

ಆಲ್ ಪೀಪಲ್ಸ್ ಸಭೆ - ಮತ್ತು ಸೇವಾತರಬೇತಿ ಕೇಂದ್ರ (A P C - BC & MTC) 2005 ರ ಆಗಸ್ಟ್ ತಿಂಗಳಲ್ಲಿ ಸ್ಥಾಪಿತವಾಯಿತು. ಇಲ್ಲಿ ಪುರುಷರು ಮತ್ತು ಸ್ತ್ರೀಯರನ್ನು ಸೇವೆಗಾಗಿ ಸಿದ್ಧಗೊಳಿಸಿ, ತರಬೇತಿಗೊಳಿಸಿ, ನಂಬಿಗಸ್ಥರಾದವರನ್ನು ಭಾರತದೇಶಕ್ಕೂ ಇತರದೇಶಗಳಿಗೂ - ಹಳ್ಳಿ, ಪಟ್ಟಣ, ನಗರ ಮತ್ತು ರಾಷ್ಟ್ರಗಳನ್ನು ಯೇಸುಕ್ರಿಸ್ತನಿಗಾಗಿ ಗೆಲ್ಲಲು ತರಬೇತಿಗೊಳಿಸುತ್ತೇವೆ.

**ಎ.ಪಿ.ಸಿ - ಬಿ.ಸಿ. / ಎಂ.ಟಿ.ಸಿ. - 2 ಪರಿವಿಡಿಗಳನ್ನು ನೀಡುತ್ತದೆ.**

- ಶೈಕ್ಷಣಿಕ ಪರಿಣಿತಿಯೊಡನೆ ಆತ್ಮಿಕ ಮತ್ತು ಪ್ರಾಯೋಗಿಕ ಸೇವಾತರಬೇತಿಯನ್ನು ಒದಗಿಸುವುದಕ್ಕಾಗಿ ಪೂರ್ಣಾವಧಿ ವಿದ್ಯಾರ್ಥಿಗಳಿಗಾಗಿ 2 ವರ್ಷಗಳ ಸತ್ಯವೇದ ಶಾಲೆಯ ಶಿಕ್ಷಣ ಪರಿವಿಡಿ. 2 ವರ್ಷಗಳ ಪರಿವಿಡಿಗಳನ್ನು ಮುಗಿಸಿದ ವಿದ್ಯಾರ್ಥಿಗಳು **ಡಿಪ್ಲೋಮಾ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಸ್ಟ್ರಿ** (Dip.Th/Cm) ಪಡೆದುಕೊಳ್ಳುತ್ತಾರೆ. ತರಗತಿಗಳು ಆಂಗ್ಲಭಾಷೆಯಲ್ಲಿ ನಡೆಸಲ್ಪಡುತ್ತವೆ. ನಮ್ಮ ಬೋಧನಾ ವಿಭಾಗವು ತರಬೇತಿಹೊಂದಿದ ಮತ್ತು ದೇವರ ವಾಕ್ಯದ ಅಭಿಷೇಕ ಹೊಂದಿದ ಶಿಕ್ಷಕರನ್ನು ಒಳಗೊಂಡಿದೆ. ಎಲ್ಲಾ ಬೋಧಕರು ಹಾಗೂ ವಿದ್ಯಾರ್ಥಿಗಳು ಎ.ಪಿ.ಸಿ ಯ ಅಧ್ಯಯನ ಕೇಂದ್ರ ಮತ್ತು ಗ್ರಂಥಾಲಯವನ್ನು (Sc & L) ಉಪಯೋಗಿಸಬಹುದಾಗಿದೆ.

- ಪ್ರಾಯೋಗಿಕ ತರಬೇತಿ ಹೊಂದಲು ಅಪೇಕ್ಷಿಸುವ ನಮ್ಮ ಸತ್ಯವೇದ ಶಾಲೆಯ ಪಧವೀದರರಿಗೆ ಪ್ರಾಯೋಗಿಕ ಸೇವಾ ತರಬೇತಿ ನೀಡುತ್ತೇವೆ. ಒಂದು ಅಥವಾ ಹೆಚ್ಚಿನ ವರ್ಷಗಳನ್ನು ಮುಗಿಸಿದವರು **ಪ್ರಾಯೋಗಿಕ ಸೇವಾ ಪ್ರಮಾಣಪತ್ರ** ಪಡೆದುಕೊಳ್ಳುತ್ತಾರೆ ಮತ್ತು ತೊಡಗಿಸಿಕೊಂಡ ಅವಧಿಯು ಸ್ಪಷ್ಟವಾಗಿ ನಮೂದಿಸಲ್ಪಡುತ್ತದೆ.

ಹೆಚ್ಚಿನ ಮಾಹಿತಿಗಳಿಗಾಗಿ www.apcwo.org/biblecollege ನ್ನು ಸಂಪರ್ಕಿಸಿ.

## ಆಲ್ ಪೀಪಲ್ಸ್ ಸಭೆಯ ಬಗ್ಗೆ

ನಮ್ಮ ಬೆಂಗಳೂರು ನಗರದಲ್ಲಿ ಉಪ್ಪು ಮತ್ತು ಬೆಳಕು ಆಗಿರಬೇಕೆಂದು ಮತ್ತು ಭಾರತ, ಪ್ರಪಂಚದ ಎಲ್ಲಾ ರಾಷ್ಟ್ರಗಳಿಗೂ ಧ್ವನಿ ಆಗಿರಬೇಕೆಂಬುದು ಆಲ್ ಪೀಪಲ್ಸ್ ಸಭೆಯ ದರ್ಶನವಾಗಿದೆ.

ನಾವು, ಆತನ ಪವಿತ್ರಾತ್ಮನ ಪ್ರಮಾಣಿಕರಣ ಮತ್ತು ರಾಜಿ ಹೊಂದದ, ಅಭಿಷೇಕಹೊಂದಿದ ದೇವರ ವಾಕ್ಯವನ್ನು ಪರಿಪೂರ್ಣವಾಗಿ ಪ್ರಸ್ತುತ ಪಡಿಸುವ ಬದ್ಧತೆ ಹೊಂದಿದ್ದೇವೆ. ನಾವು ಒಳ್ಳೆಯ ಸಂಗೀತ, ಸೃಜನಾತ್ಮಕ ಪ್ರಸ್ತುತಿ, ಪ್ರತಿಭಾವಂತ ಸಮರ್ಥನೆಗಳು, ಸಮಕಾಲೀನ ಸೇವಾ ತಂತ್ರಗಳು, ಇತ್ತೀಚಿನ ತಂತ್ರಜ್ಞಾನ ಮುಂತಾದವುಗಳು, ದೈವದತ್ತ ವಿಧಾನಹೊಂದಿದ ದೇವರ ವಾಕ್ಯವನ್ನು ಪವಿತ್ರಾತ್ಮನ ಸೂಚಕಕಾರ್ಯ, ಅದ್ಭುತಕಾರ್ಯ, ಮಹತ್ಕಾರ್ಯ ಮತ್ತು ಪವಿತ್ರಾತ್ಮನ ವರದಲ್ಲಿ ಸಾರುವುದನ್ನು ಬದಲಿಸಲು ಸಾಧ್ಯವಿಲ್ಲವೆಂದು ನಂಬುತ್ತೇವೆ. (1 ಕೊರಿಂಥದವರಿಗೆ 2: 4,5, ಇಬ್ರಿಯರಿಗೆ 2: 3,4.) ಯೇಸು ನಮ್ಮ ಉದ್ದೇಶ, ದೇವರ ವಾಕ್ಯ ನಮ್ಮ ವಿಷಯ, ಪವಿತ್ರಾತ್ಮನ ಬಲ ನಮ್ಮ ಕ್ರಮ, ಜನರು ನಮ್ಮ ಅನುರಾಗ, ಕ್ರಿಸ್ತನ ಮಾದರಿಯ ಪ್ರೌಢತೆ ನಮ್ಮ ಗುರಿಯಾಗಿದೆ.

ಬೆಂಗಳೂರನ್ನು ಪ್ರಮುಖವಾಗಿಟ್ಟುಕೊಂಡು, ಹೊಸ ಸಭೆಗಳು ನಿಯತಕಾಲಿಕವಾಗಿ ಭಾರತದಾದ್ಯಂತ ಸ್ಥಾಪಿಸಲ್ಪಡುತ್ತಿವೆ. ಪ್ರಸಕ್ತವಾದ ಪಟ್ಟಿಯನ್ನು ಪಡೆಯಲು ಮತ್ತು ಆಲ್ ಪೀಪ್ಲ್ಸ್ ಸಭೆಯ ಸ್ಥಳಗಳ ಬಗ್ಗೆ ಮಾಹಿತಿಗಳನ್ನು ಪಡೆದುಕೊಳ್ಳಲು, ನಮ್ಮ ವೆಬ್ ಸೈಟ್‌ನ್ನು ಸಂಪರ್ಕಿಸಿರಿ. www.apcwo.org ಅಥವಾ contact@apcwo.org ಗೆ ಇ-ಮೇಲ್ ಕಳುಹಿಸಿರಿ.

# ನಿಮ್ಮನ್ನು ಪ್ರೀತಿಸುವ ದೇವರನ್ನು ನೀವು ತಿಳಿದಿದ್ದೀರೋ?

ಸುಮಾರು ಎರಡು ಸಾವಿರ ವರ್ಷಗಳ ಹಿಂದೆ, ದೇವರು ಮನುಷ್ಯನಾಗಿ ಭೂಲೋಕಕ್ಕೆ ಬಂದನು. ಆತನ ಹೆಸರು ಯೇಸು.

ಆತನು ಪಾಪರಹಿತ ಜೀವನ ನಡಿಸಿದನು. ಯೇಸುವು ಶರೀರಧಾರಿಯಾದ ದೇವರಾಗಿದ್ದದರಿಂದ ಆತನು ಹೇಳಿದ್ದರಲ್ಲಿ, ಮಾಡಿದ್ದರಲ್ಲಿ ದೇವರನ್ನು ನಮಗೆ ಪ್ರಚುರಪಡಿಸಿದ್ದಾನೆ. ಆತನು ಆಡಿದ ಮಾತುಗಳು ಸ್ವತಃ ದೇವರ ಮಾತುಗಳೇ ಆಗಿದ್ದವು. ಆತನು ಮಾಡಿದ ಎಲ್ಲಾ ಕಾರ್ಯಗಳು ದೇವರ ಕಾರ್ಯಗಳೇ - ಯೇಸು ಭೂಲೋಕದಲ್ಲಿ ಅನೇಕ ಅದ್ಭುತ ಕಾರ್ಯಗಳನ್ನು ಮಾಡಿದನು. ರೋಗಗಳಲ್ಲಿ ನರಳುತ್ತಿದ್ದವರನ್ನು ಆತನು ಗುಣಪಡಿಸಿದನು. ಕುರುಡರಿಗೆ ಕಣ್ಣುಕೊಟ್ಟನು. ಕಿವುಡರನ್ನು ಮುಟ್ಟಿ ಕಿವಿಕೇಳುವಂತೆ ಮಾಡಿದನು. ಕುಂಟರನ್ನು ನಡೆದಾಡುವಂತೆ ಮಾಡಿದನು. ಎಲ್ಲಾ ಬಗೆಯ ರೋಗಗಳನ್ನು ವಾಸಿಮಾಡಿದನು. ಹಸಿದ ಜನರಿಗೆ ಐದುರೊಟ್ಟಿ, ಎರಡು ಮೀನುಗಳಿಂದ ಉಣ್ಣಲು ಬಡಿಸಿದನು. ಸಮುದ್ರದ ಮೇಲೆ ನಡೆದನು, ಸಮುದ್ರದ ಬಿರುಗಾಳಿಯನ್ನು ಶಾಂತಗೊಳಿಸಿದನು. ಇನ್ನು ಅನೇಕ ಮಹತ್ಕಾರ್ಯಗಳನ್ನು ಮಾಡಿದನು.

**ಈ ಎಲ್ಲಾ ಅದ್ಭುತ ಕಾರ್ಯಗಳು ನಮಗೆ ದೇವರು, ಒಳ್ಳೆಯ ದೇವರು, ಆತನು ಜನರೆಲ್ಲರೂ, ಆರೋಗ್ಯದಿಂದಲೂ, ಸಂತೋಷದಿಂದಲೂ ಕ್ಷೇಮದಿಂದಲೂ ಇರಬೇಕೆಂದು ಬಯಸುತ್ತಾನೆ. ದೇವರು, ಜನರ ಎಲ್ಲಾ ಕೊರತೆಗಳನ್ನು ಪೂರೈಸುತ್ತಾನೆ ಮತ್ತು ನೀಗಿಸುತ್ತಾನೆ ಎಂದು ಪ್ರಕಟಿಸುತ್ತವೆ.**

ಆದುದರಿಂದ ದೇವರು ಯಾಕೆ ಮನುಷ್ಯನಾಗಿ ಈ ಲೋಕಕ್ಕೆ ಬರಲು ತೀರ್ಮಾನಿಸಿದನು? ಯೇಸುವು ಯಾಕೆ ಬಂದನು?

ನಾವೆಲ್ಲರೂ ಪಾಪ ಮಾಡಿದ್ದೇವೆ. ದೇವರ ದೃಷ್ಟಿಯಲ್ಲಿ ಅಂಗೀಕಾರವಾಗದ ಅನೇಕ ಕಾರ್ಯಗಳನ್ನು ಮಾಡಿದ್ದೇವೆ. ಪಾಪವು, ಅದರ ಕಾರ್ಯಫಲವನ್ನು ಹೊಂದಿದೆ. ಪಾಪವು ದೇವರಿಗೂ, ನಮಗೂ ನಡುವೆಯಿರುವ ಕದಲಿಸಲಾಗದ ಅಡ್ಡ ಗೋಡೆಯಾಗಿದೆ. ಪಾಪವು ನಮ್ಮನ್ನು ದೇವರಿಂದ ಬೇರ್ಪಡಿಸುತ್ತದೆ. ನಮ್ಮನ್ನು ಸೃಷ್ಟಿಸಿದ ದೇವರನ್ನು ತಿಳಿಯಲು ಮತ್ತು ಅರ್ಥಭರಿತ ಸಂಬಂಧವನ್ನು ಆತನೊಂದಿಗೆ ಹೊಂದಿಕೊಳ್ಳುವುದನ್ನು ಪಾಪವು ತಡೆದು ಹಿಡಿಯುತ್ತದೆ. ಆದುದರಿಂದ ನಮ್ಮಲ್ಲಿ ಅನೇಕರು ನಿರರ್ಥಕವಾದ ಬೇರೆ ವಿಷಯಗಳಿಂದ ಈ ಶೂನ್ಯವನ್ನು ತುಂಬಿಸಲು ಪ್ರಯತ್ನಿಸುತ್ತೇವೆ.

ನಮ್ಮ ಪಾಪದ ಮತ್ತೊಂದು ಫಲವೇನೆಂದರೆ ನಮ್ಮನ್ನು ದೇವರಿಂದ ನಿತ್ಯಕ್ಕೂ ಬೇರ್ಪಡಿಸುತ್ತದೆ. ದೇವರ ನ್ಯಾಯಸ್ಥಾನದಲ್ಲಿ ಪಾಪದ ಶಿಕ್ಷೆ ಮರಣವಾಗಿದೆ. ಮರಣವು ನಮ್ಮನ್ನು ನರಕದಲ್ಲಿ ದೇವರಿಂದ ಶಾಶ್ವತವಾಗಿ ಅಗಲಿಕೆಗೊಳಿಸುತ್ತದೆ. ಅಥವಾ ದೂರಸರಿಯುವಂತೆ ಮಾಡುತ್ತದೆ.

ಆದರೆ ನಮಗಿರುವ ಶುಭ ಸಮಾಚಾರವೆನೆಂದರೆ ನಾವು ಪಾಪಗಳಿಂದ ಸ್ವತಂತ್ರರಾಗಬಹುದು ಮತ್ತು ದೇವರೊಂದಿಗೆ ನವೀಕೃತಗೊಳ್ಳಬಹುದು. ಸತ್ಯವೇದವು ''ಪಾಪವು ಕೊಡುವ ಸಂಬಳ ಮರಣ, ದೇವರ ಉಚಿತಾರ್ಥವರವು ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿರುವ ನಿತ್ಯಜೀವ'' ಎಂದು ಹೇಳುತ್ತದೆ (ರೋಮಪುರ 6:23) ಯೇಸು ಪ್ರಪಂಚದ ಪಾಪಗಳಿಗೆ, ಶಿಲುಬೆಯ ಮೇಲೆ ಪ್ರಾಣಕೊಡುವ ಮೂಲಕ ಪಾಪದ ವಶದಿಂದ ಎಲ್ಲರನ್ನು ಬಿಡುಗಡೆಮಾಡಿದ್ದಾನೆ. ಮೂರನೇ ದಿನದಲ್ಲಿ ಎದ್ದು ಬಂದಿದ್ದಾನೆ. ಜೀವಿಸುವವನಾಗಿ ಅನೇಕರಿಗೆ ಕಾಣಿಸಿಕೊಂಡನು. ಮತ್ತು ಪರಲೋಕಕ್ಕೆ ಏರಿ ಹೋದನು.

ದೇವರು, ಕರುಣೆ, ಪ್ರೀತಿಯುಳ್ಳ ದೇವರು. ಯಾವನಾದರೂ ನರಕದಲ್ಲಿರಬೇಕೆಂದು ಆತನು ಬಯಸುವ ದೇವರಲ್ಲ ಆತನು, ಇಡೀ ಮನುಷ್ಯ ಕುಲವು ಪಾಪದ ಬಂಧನದಿಂದ ಸ್ವತಂತ್ರಗೊಳ್ಳಲು, ಪಾಪದ ಶಾಶ್ವತ ದೋಷ ಫಲಗಳಿಂದ ಬಿಡುಗಡೆ ಹೊಂದುವಂತೆ, ಮಾರ್ಗ ಮಾಡಿಕೊಡಲು ಬಂದನು. ಆತನು ಪಾಪಿಗಳನ್ನು ರಕ್ಷಿಸಲು ಬಂದನು. ನನ್ನಂತೆಯೇ, ನಿಮ್ಮಂತೆಯೇ, ಜನರನ್ನು ಪಾಪದಿಂದ, ನಿತ್ಯತ್ವದ ಮರಣದಿಂದ ಬಿಡುಗಡೆ ಮಾಡಲು ಬಂದನು.

ಈ ಉಚಿತವಾದ ಪಾಪಗಳ ಕ್ಷಮಾಪಣೆಯನ್ನು ಪಡೆಯಬೇಕಾದರೆ ನಾವು ಒಂದೇ ಒಂದು ವಿಷಯವನ್ನು ಮಾಡಬೇಕೆಂದು ಸತ್ಯವೇದ ಹೇಳುತ್ತದೆ. ನೀನು ಯೇಸುಕ್ರಿಸ್ತನು ಶಿಲುಬೆಯ ಮೇಲೆ ಮಾಡಿದ್ದೆಲ್ಲವನ್ನು ಅಂಗೀಕರಿಸಿಕೊಳ್ಳಬೇಕು. ಮತ್ತು ಸಂಪೂರ್ಣ, ಯಥಾರ್ಥ ಹೃದಯದಿಂದ ಯೇಸುವನ್ನು ನಂಬಬೇಕು.

**''ಆತನಲ್ಲಿ ನಂಬಿಕೆಯಿಡುವ ಪ್ರತಿಯೊಬ್ಬನು ಆತನ ಹೆಸರಿನ ಮೂಲಕವಾಗಿ ಪಾಪ ಪರಿಹಾರವನ್ನು ಹೊಂದುವನು''** (ಅಪೊಸ್ತಲರ ಕೃತ್ಯ 10:43)

**''ನೀನು ಯೇಸುವನ್ನೇ ಕರ್ತನೆಂದು ಬಾಯಿಂದ ಅರಿಕೆಮಾಡಿಕೊಂಡು ದೇವರು ಆತನನ್ನು ಸತ್ತವರೊಳಗೆ ಎಬ್ಬಿಸಿದನೆಂದು ಹೃದಯದಿಂದ ನಂಬಿದರೆ ನಿನಗೆ ರಕ್ಷಣೆಯಾಗುವದು ಎಂಬುದೇ''** (ರೋಮಾಪುರದವರಿಗೆ 10:9)

ನೀವು ಸಹ ಯೇಸುಕ್ರಿಸ್ತನನ್ನು ನಂಬಿದರೆ ನಿಮ್ಮ ಪಾಪಗಳಿಗೆ ಕ್ಷಮಾಪಣೆಯನ್ನು ಮತ್ತು ಪರಿಹಾರಗಳನ್ನು ಹೊಂದಿಕೊಳ್ಳಬಹುದು. ಯೇಸುವಿನ ಮೇಲೆ ನಂಬಿಕೆಯಿಡಲು, ಮತ್ತು ಆತನು ನಿಮಗೋಸ್ಕರ ಶಿಲುಬೆಯ ಮೇಲೆ ಮಾಡಿದ ಕಾರ್ಯಗಳಲ್ಲಿ ನಂಬಿಕೆಯಿಟ್ಟು ತೀರ್ಮಾನ ತೆಗೆದುಕೊಳ್ಳಲು ಈ ಮುಂದಿನ ಪ್ರಾರ್ಥನೆಯು ಸಹಾಯ ಮಾಡುವುದು. ಯೇಸು ಕ್ರಿಸ್ತನು ನಿಮಗಾಗಿ ಏನು ಮಾಡಿದನೆಂದೂ ಮತ್ತು ನಿಮ್ಮ ಪಾಪಗಳ ಕ್ಷಮಾಪಣೆ ಮತ್ತು ಶುದ್ಧೀಕರಣವನ್ನು ಹೊಂದಿಕೊಳ್ಳುವಂತೆಯೂ ಮತ್ತು ನಿಮ್ಮ ಅಂಗೀಕಾರವನ್ನು ತೋರಿಸುವಂತೆಯೂ ಸಹಾಯ ಮಾಡುತ್ತದೆ. ಈ ಪ್ರಾರ್ಥನೆ ಬರೀ ಮಾರ್ಗದರ್ಶಿಯಾಗಿದೆ. ನಿಮ್ಮ ಸ್ವಂತ ಮಾತುಗಳಲ್ಲಿ ಪ್ರಾರ್ಥಿಸಬಹುದು.

*ಪ್ರಿಯ ಕರ್ತನಾದ ಯೇಸುವೇ, ಇಂದು ನೀನು ನನಗಾಗಿ ಶಿಲುಬೆ ಮೇಲೆ ಮಾಡಿದ್ದನ್ನು ಅರ್ಥ ಮಾಡಿಕೊಂಡಿದ್ದೇನೆ. ನೀನು ನನಗಾಗಿ ಪ್ರಾಣ ಕೊಟ್ಟೆ. ನನಗಾಗಿ ನಿನ್ನ ಪವಿತ್ರವಾದ ರಕ್ತ ಸುರಿಸುವ ಮೂಲಕ ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದಿ, ಇದರಿಂದ ನಾನು ಕ್ಷಮಿಸಲ್ಪಟ್ಟೆನು. ಯಾರ್‍ಯಾರು ಆತನ ಮೇಲೆ ನಂಬಿಕೆಯಿಟ್ಟರೋ, ಅವರು ಪಾಪಗಳ ಕ್ಷಮಾಪಣೆ ಹೊಂದಿದರು ಎಂದು ಸತ್ಯವೇದವು ನನಗೆ ತಿಳಿಸುತ್ತದೆ.*

*ಈ ದಿನ ನಾನು ನಿನ್ನನ್ನು ನಂಬುತ್ತೇನೆ. ನೀನು ನನಗಾಗಿ ಸಾಯುವುದರ ಮೂಲಕವೂ, ಮೂರನೇ ದಿನದಲ್ಲಿ ಜೀವಿತನಾಗಿ ಎದ್ದು ಬಂದದ್ದರ ಮೂಲಕವೂ ನೀನು ಮಾಡಿದ್ದನ್ನು ಅಂಗೀಕರಿಸಿಕೊಳ್ಳುತ್ತೇನೆ. ನನ್ನ ಒಳ್ಳೆಯ ಕೆಲಸಗಳಿಂದಲೂ, ಬೇರೊಬ್ಬನಿಂದಲೂ ನನ್ನನು ರಕ್ಷಿಸಿಕೊಳ್ಳಲು ಆಗುವುದಿಲ್ಲ. ನಾನು ನನ್ನ ಪಾಪಗಳ ಕ್ಷಮಾಪಣೆ ಸಂಪಾದಿಸಲು ಸಾಧ್ಯವಿಲ್ಲ.*

*ಈ ದಿನ ನಾನು ನನ್ನ ಹೃದಯದಿಂದ ನಂಬಿ ನನ್ನ ಬಾಯಿಂದ, ''ನೀನು ನನಗಾಗಿ ಸತ್ತೇ, ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದ್ದಿ. ಮರಣದಿಂದ ಜೀವಿತನಾಗಿ ಎದ್ದು ಬಂದಿದ್ದಿ ಎಂಬ ನಿನ್ನಲ್ಲಿ ಇಟ್ಟ ನಂಬಿಕೆಯಿಂದ, ನನ್ನ ಪಾಪಗಳ ಕ್ಷಮಾಪಣೆ, ಶುದ್ಧೀಕರಣ ಪಡೆದುಕೊಂಡೆ'' ಎಂದು ಹೇಳುತ್ತೇನೆ.*

*ಯೇಸುವೇ ನಿನಗೆ ವಂದನೆಗಳು. ನಿನ್ನನ್ನು ಪ್ರೀತಿಸಲು ಸಹಾಯ ಮಾಡು. ನಿನ್ನನ್ನು ಇನ್ನೂ ತಿಳಿಯಲು ಮತ್ತು ನಿನಗೆ ನಂಬಿಗಸ್ತನಾಗಿರಲು ಸಹಾಯಮಾಡು. ಆಮೇನ್*

ನಮ್ಮಲ್ಲಿ ಪ್ರತಿಯೊಬ್ಬರಿಗಾಗಿ ದೇವರು ಒಂದು ಯೋಜನೆ ಮತ್ತು ಉದ್ದೇಶ ಹೊಂದಿದ್ದಾನೆ. ನಮ್ಮ ಜೀವಿತಕ್ಕಿರುವ ಆತನ ಉದ್ದೇಶವನ್ನು ನೆರವೇರಿಸಲು ನಾವು ಆತನೊಂದಿಗೆ ಸಹಕರಿಸಬೇಕು. ಈ ಅಧ್ಯಯನವು ನಿಮ್ಮ ಜೀವಿತಕ್ಕಿರುವ ದೇವರ ಉದ್ದೇಶವನ್ನು ಹೇಗೆ ಗುರುತಿಸುವುದು ಮತ್ತು ಆತನು ನಮಗಾಗಿ ಯೋಜನೆ ಮಾಡಿರುವುಗಳನ್ನು ಪೂರ್ಣವಾಗಿ ಸಫಲ ಮಾಡಲು ನಾವು ಏನು ಮಾಡುವುದು ಅವಶ್ಯ ಎಂಬುದನ್ನು ಬೋಧಿಸುತ್ತದೆ. ನಿಮ್ಮ ಜೀವಿತಕ್ಕಿರುವ ದೇವರ ಕನಸನ್ನು ಹಿಡಿಯಿರಿ! ನಿಮ್ಮ ಜೀವಿತಕ್ಕಿರುವ ದೇವರ ಉದ್ದೇಶದಲ್ಲಿ ಜೀವಿಸುವುದಕ್ಕಿಂತ ಉತ್ತಮವಾದ ಅಥವಾ ದೊಡ್ಡದಾದ ಉದ್ದೇಶ ಇನ್ನೊಂದಿಲ್ಲ! ಆತನ ಪರಲೋಕದ ಕರೆಯನ್ನು ಹಿಂಬಾಲಿಸುವುದು ಮತ್ತು ನೆರವೇರಿಸುವುದರಲ್ಲಿ ಇರುವ ಸಂತೃಪ್ತಿಯನ್ನು ಬೇರೆ ಯಾವುದೂ ತರಲಾರದು.

ಆತನು ನಿಮಗಾಗಿ ಸಂಕಲ್ಪಿಸಿರುವ ವಿಷಯಗಳನ್ನು ನೆರವೇರಿಸಲು ದೇವರೊಂದಿಗೆ ನಡೆಯುವುದಕ್ಕಿಂತಲೂ ದೊಡ್ಡದಾದ ಸಾಹಸ ಕಾರ್ಯ ಇನ್ನಾವುದೂ ಇಲ್ಲ.

ನಿಮ್ಮ ಜೀವಿತಕ್ಕಿರುವ ದೇವರ ಕನಸನ್ನು ಪಾಲಿಸುವುದರೊಂದಿಗೆ ನಿಮ್ಮ ಪ್ರಯಾಣವನ್ನು ಆನಂದಿಸಿರಿ!

**ಆಶಿಷ್ ರಾಯ್‌ಚೂರ್**

**All Peoples Church & World Outreach**
# 319, 2nd Floor, 7th Main, HRBR Layout,
2nd Block, Kalyan Nagar, Bangalore 560 043
Karnataka, INDIA

Phone: +91-80-25452617, +91-80-65970617
Email: contact@apcwo.org
Website: www.apcwo.org